॥ ಶ್ರೀ ಗುರು ಬಸವಲಿಂಗಾಯ ನಮಃ ॥



# ಲಿಂಗಾಯತ ದರ್ಶನ

ಮಾಸಿಕ

**ಸಂಪುಟ : ೬** | **ಅಗಸ್ಟ್ ೨೦೧೯** | **ಸಂಚಿಕೆ : ೮**



ಮಾರ್ಗದರ್ಶನ

**ಪೂಜ್ಯಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು**

ರುದ್ರಾಕ್ಷಿಮಠ, ನಾಗನೂರು–ಬೆಳಗಾವಿ
ತೋಂಟದಾರ್ಯ ಸಂಸ್ಥಾನಮಠ, ಗದಗ–ಡಂಬಳ

**ಸಂಪಾದಕ**

**ಡಾ॥ ಎನ್. ಜಿ. ಮಹಾದೇವಪ್ಪ**

**ಸಹ ಸಂಪಾದಕ**

**ಡಾ॥ ರಾಮಕೃಷ್ಣ ಮರಾಠೆ**

**ಸಂಪಾದಕ ಮಂಡಳಿ**

ಡಾ॥ ಗುರುಲಿಂಗ ಕಾಪಸೆ — ಡಾ॥ ಸಿ. ಕೆ. ನಾವಲಗಿ
ಶ್ರೀ ಆರ್. ಪಿ. ಅಪರಾಜ — ಡಾ॥ ವಿ. ಎಸ್. ಮಾಳಿ
ಡಾ॥ ಬಸವರಾಜ ಜಗಜಂಪಿ — ಶ್ರೀ ಬಿ. ಬಿ. ಹೊಸಮನಿ
ಡಾ. ಎಂ. ಎಸ್. ಹುಲ್ಲೋಳಿ — ಶ್ರೀಮತಿ ನೀಲಗಂಗಾ ಚರಂತಿಮಠ



**ಪ್ರಕಾಶಕರು**

ಕಾರ್ಯದರ್ಶಿ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ

**ವಚನ ಅಧ್ಯಯನ ಕೇಂದ್ರ**

ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ
ಬೆಳಗಾವಿ–೫೯೦೦೧೦

**ದೂ:೦೮೩೧–೨೪೦೭೧೫೬** ***email:basavaguru@rediffmail.com***
***Web: www.rudrakshimath.in***

**ಚಂದಾವಿವರ**

| | | |
|---|---|---|
| ಮಹಾಪೋಷಕರು | ರೂ. | ೧೦,೦೦೦=೦೦ |
| ಪೋಷಕರು | ರೂ. | ೫೦೦೦=೦೦ |
| ಆಜೀವ | ರೂ. | ೩೦೦೦=೦೦(೨೦ ವರ್ಷ) |
| ಆರು ವರ್ಷದ | ರೂ. | ೧೦೦೦=೦೦ |
| ಒಂದುವರ್ಷದ | ರೂ. | ೨೦೦=೦೦ |
| ಬಿಡಿ ಪ್ರತಿ | ರೂ. | ೨೦=೦೦ |

ಚಂದಾಹಣವನ್ನು ನಗದು ಅಥವಾ **'ವಚನ ಅಧ್ಯಯನ ಕೇಂದ್ರ'** ಹೆಸರಿನಲ್ಲಿ ಕ್ರಾಸ್ ಮಾಡಿದ ಡಿ.ಡಿ/ ಚೆಕ್‌ಮುಖಾಂತರ**"ನಿರ್ದೇಶಕರು, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ–೫೯೦ ೦೧೦"** ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.


**ಅಂತರಂಗದೊಳಗೆ.....**


* ಸಂಪಾದಕೀಯ ೨
* ವಚನಾರ್ಥ–ಚಿಂತನ ೪
  - **ಡಾ. ಸಿದ್ಧರಾಮ ಸ್ವಾಮಿಗಳು**
* ಶಿಕ್ಷಣ ಚೇತನ : ಶ್ರೀ ವ್ಹಿ. ಡಿ. ರಾಚನಾಯ್ಕರ್ ೬
  - **ಪೂಜ್ಯಶ್ರೀ ಮಹಾಂತ ದೇವರು, ಶೇಗುಣಸಿ**
* ಬಿಜ್ಜಳನ ಸಂಹಾರ : ಜಗದೇವಪ್ಪ ೮
  - **ಡಾ. ವೀರಣ್ಣ ದಂಡೆ**
* ನಿರಾಕಾರ ಲಿಂಗವನರಿದವಂಗೆ ಸಾಕಾರ ಲಿಂಗದ ಹಂಗೇಕೆ? ೧೧
  - **ವೆಂಕಟೇಶ ಕೆ. ಜನಾದ್ರಿ**
* ಅಕ್ಕನಾಗಮ್ಮ ೧೫
  - **ಡಾ. ಶರಣಮ್ಮ ಗೊರೇಬಾಳ**
* ಗುಪ್ತಭಕ್ತ ಮಾದಾರ ಚನ್ನಯ್ಯ ೧೯
  - **ಶ್ರೀ ಶ್ರೀಶೈಲ ಪ. ಕಳಸದ**
* ವೆಂಕಣ್ಣಯ್ಯನವರ 'ಶಿವತತ್ತ್ವಸಾರ' ಲಿಂಗಾಯತ ವಿಚಾರ ೨೩
  - **ಡಾ. ಗುರುಪಾದ ಮರಿಗುದ್ದಿ**
* ಹಿಂದೂ; ಧರ್ಮವಲ್ಲ ೨೬
  - **ಶ್ರೀ ಆರ್. ಪಿ. ಅಪರಾಜ**
* ಶರಣರ ಆಧ್ಯಾತ್ಮಿಕ ನಿಲುವೇ ಒಂದು ವಿಜ್ಞಾನ ೨೯
  - **ಶ್ರೀ ನದಾಫ್ ಎಚ್. ಹತ್ತಿಮತ್ತೂರು**
* ತ್ಯಾಗ ಜೀವಿ ಕಲ್ಮಾಣಮ್ಮ ೩೧
  - **ಶ್ರೀ ಶ್ರೀಧರ ಗೌಡರ**


ಇಲ್ಲಿಯ ಲೇಖನಗಳ ಅಭಿಪ್ರಾಯಗಳು ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ. **–ಸಂ**

ಸಂಪಾದಕೀಯ

# ಪೇಜಾವರ ಶ್ರೀಗಳ ವಿತಂಡವಾದ

ಇತ್ತೀಚೆಗೆ ಉಡುಪಿ ಪೇಜಾವರಮಠದ ಶ್ರೀ ವಿಶ್ವೇಶತೀರ್ಥ ಶ್ರೀಗಳು– 'ಲಿಂಗಾಯತರೂ ಹಿಂದೂಗಳೇ. ಅವರು ನಮ್ಮ ಸಹೋದರರು, ಅವರು ನಮ್ಮಿಂದ ದೂರ ಹೋಗುವುದನ್ನು ತಡೆಯುವುದು ಹಿರಿಯಣ್ಣನ ಸ್ಥಾನದಲ್ಲಿರುವ ನಮ್ಮ ಕರ್ತವ್ಯ'– ಎಂದು ಪತ್ರಿಕಾ ಹೇಳಿಕೆ ನೀಡುತ್ತ ಲಿಂಗಾಯತ ಸ್ವತಂತ್ರಧರ್ಮ ಎಂದು ಪ್ರತಿಪಾದಿಸುತ್ತಿರುವವರನ್ನು ವಾದಕ್ಕೆ ಆಹ್ವಾನಿಸುತ್ತಿರುವುದು, ಪದೇ ಪದೇ ಕೆಣಕುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಅವರು ಕೊಡುವ ಪ್ರಮಾಣವೆಂದರೆ ಲಿಂಗಾಯತರು ಶಿವನನ್ನೇ ಇಷ್ಟಲಿಂಗರೂಪದಲ್ಲಿ ಆರಾಧಿಸುತ್ತಾರೆ, ಹಿಂದೂಗಳೂ ಶಿವನ ಆರಾಧಕರು. ಶಿವಾರಾಧಕರೆಲ್ಲರೂ ಹಿಂದೂಗಳು. ಆದ್ದರಿಂದ ಲಿಂಗಾಯತರೂ ಕೂಡ ಹಿಂದುಗಳೇ ಎಂಬುದು ಅವರ ವಾದ. ಈ ವಾದವು ಅತ್ಯಂತ ಅರ್ಥಹೀನವಾಗಿದ್ದು, ದುರುದ್ದೇಶದಿಂದ ಕೂಡಿದೆ ಎಂದು ಹೇಳುವುದು ಅನಿವಾರ್ಯವಾಗಿದೆ. ಏಕೆಂದರೆ ಬಸವಾದಿ ಶರಣರು ಆಚರಿಸಿ ತೋರಿದ ಲಿಂಗಾಯತ ಧರ್ಮದ ಪರಿಕಲ್ಪನೆಯ ದೇವರು ಪೇಜಾವರ ಶ್ರೀಗಳು ಪ್ರತಿಪಾದಿಸುತ್ತಿರುವ ಶಿವನಲ್ಲ. ಇಷ್ಟಲಿಂಗವು ನಿರಾಕಾರ ಪರಶಿವನ ಕುರುಹೇ ಹೊರತು ಪೇಜಾವರ ಶ್ರೀಗಳ ಕಲ್ಪನೆಯ ಪೌರಾಣಿಕ ಶಿವನಲ್ಲ. ಆ ಶಿವನ ಕುರುಹೂ ಅಲ್ಲ. 'ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ, ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ, ಅಗಮ್ಯ, ಅಗೋಚರ ಅಪ್ರತಿಮ ಲಿಂಗವೆ, ಕೂಡಲ ಸಂಗಮದೇವ, ನೀವೆನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯ' ಎಂದು ಬಸವಣ್ಣನವರು ವಿವರಿಸಿರುವ ಲಿಂಗವು ಮಾತು ಮನಸ್ಸುಗಳಿಗೆ ಮೀರಿದ ಘನವಾಗಿದೆ. ಪೇಜಾವರ ಶ್ರೀಗಳು ಹೇಳುವ ಕೈಲಾಸದಲ್ಲಿರುವ ಶಿವನ ಕುರುಹಲ್ಲ. 'ಕೈಲಾಸವೆಂಬುದೊಂದು ಹಾಳು ಬೆಟ್ಟ, ಅಲ್ಲಿರುವ ಶಿವನೊಬ್ಬ ಹೆಡ್ಡ' ಎಂದು ಬಸವಾದಿ ಶರಣರು ಪೇಜಾವರ ಶ್ರೀಗಳ ಪರಿಕಲ್ಪನೆಯ ಶಿವನನ್ನು ಅಂದೇ ಅಲ್ಲಗಳೆದಿದ್ದಾರೆ.

ಪೇಜಾವರಮಠದ ಪೂಜ್ಯಶ್ರೀ ವಿಶ್ವೇಶತೀರ್ಥ ಶ್ರೀಗಳವರು ಬಹುಶ್ರುತ ವಿದ್ವಾಂಸರು. ಅವರಿಗೆ 'ಲಿಂಗಾಯತರು ಹಿಂದೂಗಳಲ್ಲ' ಎಂಬುದು ಅರಿಯದ ವಿಷಯವೇನಲ್ಲ. ಆದರೆ ಅವರು ವಿಶ್ವದ ಬೃಹತ್ ಸಮಾಜವಾದಿ ರಾಷ್ಟ್ರವನ್ನು ಹಿಂದೂ ರಾಷ್ಟ್ರವನ್ನಾಗಿಸಬೇಕೆಂಬ ವ್ಯಕ್ತಿಗಳ ಮತ್ತು ಸರಕಾರದ ವಕ್ತಾರರಂತೆ ಮಾತನಾಡುತ್ತಿರುವುದು, ಪೂರ್ವಗ್ರಹ ಪೀಡಿತರಾಗಿರುವುದು ಸಖೇದಾಶ್ಚರ್ಯವಾಗಿದೆ. ಅವರು ಪ್ರತಿಪಾದಿಸುತ್ತಿರುವ ಹಿಂದೂಧರ್ಮವು ವೈದಿಕ ಧರ್ಮವೇ ಆಗಿದೆ. ವೇದಗಳು, ಉಪನಿಷತ್ತುಗಳು, ಆಗಮಗಳು, ಭಗವದ್ಗೀತೆ ಇವೇ ವೈದಿಕ ಧರ್ಮದ ಗ್ರಂಥಗಳು. ಆಶ್ಚರ್ಯವೆಂದರೆ ಈ ಗ್ರಂಥಗಳಲ್ಲಿ ಎಲ್ಲಿಯೂ 'ಹಿಂದೂ' ಪದ ಬಳಕೆಯಾಗಿಲ್ಲ. ಆ ವೈದಿಕಧರ್ಮಕ್ಕೆ ತೀರ ಇತ್ತೀಚೆಗೆ ಕಾರಣಾಂತರಗಳಿಂದ 'ಹಿಂದೂ ಧರ್ಮ'ವೆಂದು ಕರೆಯಲಾಗುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. 'ಸ' ಅಕ್ಷರ ಉಚ್ಚರಿಸಲು ಬಾರದ ಪರ್ಶಿಯನ್ನರು ಸಿಂದೂ ನದಿಯಾಚೆ ಇರುವ ನಮ್ಮ ದೇಶವಾಸಿಗಳನ್ನು 'ಹಿಂದೂ' ಎಂದು ಕರೆದಿರುವುದು ಐತಿಹಾಸಿಕ ಸತ್ಯ. ಹಾಗಾಗಿ ಅದು ಮೊದಲು ಭೌಗೋಳಿಕ ಪ್ರದೇಶದ ಕಾರಣಕ್ಕಾಗಿ ಬಳಕೆಯಾಗಿದೆ. ಈ ದೇಶದ ಸರ್ವೋಚ್ಚ ನ್ಯಾಯಾಲಯವೂ ಕೂಡ 'ಹಿಂದೂ' ಎಂಬುದು ಧರ್ಮವಲ್ಲ, ಅದೊಂದು 'ಜೀವನ ಮಾರ್ಗ' ಎಂಬುದನ್ನು ಹಲವಾರು ಸಂದರ್ಭಗಳಲ್ಲಿ ಸ್ಪಷ್ಟಪಡಿಸಿದೆ. ಆದ್ದರಿಂದ ವಾಸ್ತವದಲ್ಲಿ ಈಗ ಹಿಂದೂ ಧರ್ಮ ಎಂಬುದು ವೈದಿಕಧರ್ಮದ ಪರ್ಯಾಯ ಶಬ್ದ. ಬಸವಾದಿ ಶರಣರು ಆಚರಿಸಿ ತೋರಿದ ಧರ್ಮ ಲಿಂಗಾಯತ ಧರ್ಮ. ಅದರ ಸಂಸ್ಥಾಪಕರು ವಿಶ್ವಗುರು ಬಸವಣ್ಣನವರು. ವಚನ ಸಾಹಿತ್ಯವೇ ಲಿಂಗಾಯತ ಧರ್ಮದ ಸಂವಿಧಾನ. ಲಿಂಗಾಯತ ಧರ್ಮ ವೇದ ವಿರೋಧಿ. ಅಂತೆಯೇ ಅದು ಜೈನ, ಬೌದ್ಧ ಧರ್ಮಗಳಂತೆ ಅವೈದಿಕ ಧರ್ಮ. ಶಿವಶರಣರು ವೇದ–ಪುರಾಣಗಳನ್ನು ಒಪ್ಪಿಕೊಂಡಿಲ್ಲ. ವೇದಕ್ಕೆ ಒರೆಯ ಕಟ್ಟುವೆ, ಆಗಮಗಳ ಮೂಗ ಕೊಯ್ವೆ, ತರ್ಕದ ಬೆನ್ನ ಬಾರನೆತ್ತುವೆ, ಶಾಸ್ತ್ರಕ್ಕೆ ನಿಗಳ ನಿಕ್ಕುವೆ ಎಂದು ಧರ್ಮಗುರು ಬಸವಣ್ಣನವರು ಪ್ರತಿಪಾದಿಸಿರುವುದು ಪೇಜಾವರ ಶ್ರೀಗಳಿಗೆ ಗೊತ್ತಿರದಿದ್ದರೆ ಅವರು ವಚನ ಸಾಹಿತ್ಯವನ್ನು ಮೊದಲು ಅಧ್ಯಯನ ಮಾಡಲಿ. ಆಗ ಅವರಿಗೆ ವೈದಿಕ–ಅವೈದಿಕ ಧರ್ಮಗಳ ವ್ಯತ್ಯಾಸ ಮನವರಿಕೆಯಾಗದೇ ಇರದು.

ವೈದಿಕ ಧರ್ಮದಲ್ಲಿ ವರ್ಣ–ವರ್ಗವ್ಯವಸ್ಥೆ ಇದೆ; ಜಾತಿಭೇದ, ಲಿಂಗಭೇದಗಳಿವೆ. ಹಿಂದೂ ಧರ್ಮದ ಹೆಣ್ಣು ಮಕ್ಕಳನ್ನು ಶೂದ್ರರೆಂದೇ ಪರಿಗಣಿಸಿ ಅವರಿಗೆ ಉಪನಯನ ಸಂಸ್ಕಾರ ನೀಡದಿರುವುದು ಎಲ್ಲರಿಗೂ ತಿಳಿದ ಸಂಗತಿ. ವೈದಿಕರು ಪಂಚಸೂತಕಗಳನ್ನು ಪಾಲಿಸುತ್ತಾರೆ. ಆದರೆ ಅವೈದಿಕರಾದ ಲಿಂಗಾಯತರಲ್ಲಿ ಈ ವ್ಯವಸ್ಥೆ ಮತ್ತು ಆಚರಣೆಗಳಿಗೆ ಅವಕಾಶವಿಲ್ಲ. ಕೆಲವರಲ್ಲಿದ್ದರೆ ಅವರು ವೈದಿಕರ ಪ್ರಭಾವಕ್ಕೆ ಒಳಗಾದವರು. ಅದು ಗಮನೀಯವಲ್ಲ.

ಈ ಸಂದರ್ಭದಲ್ಲಿ ವಿದ್ವಾಂಸರಾದ ಪ್ರೊ. ಟಿ. ಎಸ್. ವೆಂಕಣ್ಣಯ್ಯ ಅವರು 'ಶಿವತತ್ತ್ವಸಾರ' ತೆಲಗು ಕೃತಿಯ ಕುರಿತು ಬರೆದ ವಿಚಾರಗಳನ್ನು ಶ್ರೀ ಪೇಜಾವರ ಶ್ರೀಗಳು ಅವಲೋಕಿಸುವುದು ಒಳಿತು. 'ಶಿವತತ್ತ್ವಸಾರ'ವು ಹನ್ನೆರಡನೆಯ ಶತಮಾನದಲ್ಲಿ ಮಲ್ಲಿಕಾರ್ಜುನ ಪಂಡಿತರಿಂದ ರಚಿತವಾದ ಕೃತಿ. ಇದನ್ನು ಪರಿಚಯಿಸುತ್ತ ಪ್ರೊ. ವೆಂಕಣ್ಣಯ್ಯ ಅವರು– 'ಆಂಧ್ರದಲ್ಲಿ ಲಿಂಗಧಾರಿ' ಆರಾಧ್ಯ ಬ್ರಾಹ್ಮಣರಿದ್ದಾರೆ. ಅವರದು ವೇದೋಕ್ತ ಮಾರ್ಗ. ಶಿಖೆ, ಗಾಯತ್ರೀ, ಯಜ್ಞೋಪವೀತವುಳ್ಳವರು. ಅವರಲ್ಲಿ ಜಾತಿ ಶ್ರೇಷ್ಠತ್ವ ಇದೆ ಅವರು ಸ್ಥಾವರ ಪೂಜಕರು. ಈ ಬ್ರಾಹ್ಮಣರು ಪೂರ್ವಿಕರಿಂದ ಪಡೆದ ಲಿಂಗಕ್ಕೂ ಬಸವಣ್ಣನವರು ಕೊಟ್ಟ ಇಷ್ಟಲಿಂಗಕ್ಕೂ ಬಹಳ ವ್ಯತ್ಯಾಸವಿದೆ. ಈ ಬ್ರಾಹ್ಮಣರ ಧರ್ಮ ಸಿದ್ಧಾಂತಗಳು ಬಸವಾದಿ ಶರಣರಿಗೆ ಮಾನ್ಯವಿಲ್ಲ'– ಎಂದು ಹೇಳಿರುವುದು ಗಮನಾರ್ಹವಾಗಿದೆ. (ವಿವರಗಳಿಗಾಗಿ ಇದೇ ಸಂಚಿಕೆಯ 'ವೆಂಕಣ್ಣಯ್ಯನವರ ಶಿವತತ್ತ್ವಸಾರ–ಲಿಂಗಾಯತ ವಿಚಾರ' ಲೇಖನ ನೋಡಿ)

ಪೇಜಾವರ ಶ್ರೀಗಳು ಹಿಂದೂ ಧರ್ಮವನ್ನು ಬಲಗೊಳಿಸಬೇಕು ಎಂದಿದ್ದಾರೆ. ಇದರರ್ಥ ಬೌದ್ಧ, ಜೈನ, ಶಿಖ್ಖ, ಲಿಂಗಾಯತ ಧರ್ಮಗಳನ್ನು ಅಸ್ಥಿರಗೊಳಿಸಬೇಕೆ? ಎಲ್ಲರೂ ಭೌಗೋಳಿಕವಾಗಿ ಭಾರತ ದೇಶದವರು, ಪರ್ಶಿಯನ್ನರ ದೃಷ್ಟಿಯಲ್ಲಿ ಹಿಂದೂ ಪ್ರದೇಶದವರು. ಹಾಗಾಗಿ ಶ್ರೀಗಳು ಹಿಂದೂ ಧರ್ಮದ ಬದಲಾಗಿ ದೇಶವನ್ನು ಕಟ್ಟಬೇಕು, ಅಭಿವೃದ್ಧಿ ಪಥದತ್ತ ಮುನ್ನಡೆಸಬೇಕು, ಬಲಗೊಳಿಸಬೇಕು ಎಂಬ ಸಂದೇಶ ನೀಡಿದ್ದರೆ ಅದು ಸರ್ವಮಾನ್ಯವಾಗುತ್ತಿತ್ತು. ಆದರೆ ಅವರು ವೈದಿಕ ಧರ್ಮವನ್ನು ಹಿಂದೂ ಧರ್ಮವೆಂದು ಕರೆದು ಸ್ವಜಾತಿಯವರಿಗೆ ವಿಶೇಷ ಮಹತ್ವ ನೀಡುತ್ತಿರುವುದು ಸ್ಪಷ್ಟ. ಏಕೆಂದರೆ ಹಿಂದೂ ಧರ್ಮದಲ್ಲಿ ಅವರ ಹೊರತಾಗಿ ಇತರರಿಗೆ ಧಾರ್ಮಿಕ ವಿಶೇಷಾಧಿಕಾರವಿಲ್ಲ. ಉಡುಪಿಯ ಕೃಷ್ಣ ಮಠದಲ್ಲಿ ಸಹಭೋಜನ, ಕೃಷ್ಣನ ಪೂಜೆ ಮುಂತಾದವುಗಳಿಗೆ ಅವಕಾಶವಿಲ್ಲ. ಈ ಹಿನ್ನೆಲೆಯಲ್ಲಿ ಪೇಜಾವರ ಶ್ರೀಗಳು ಪದೇ ಪದೇ 'ಲಿಂಗಾಯತರು ಹಿಂದೂಗಳೇ' ಎಂದು ಹೇಳುವುದು ಬೇಡ. ಲಿಂಗಾಯತರನ್ನು ಅವರ ಪಾಡಿಗೆ ಬಿಡಲಿ. ಈ ದೇಶದಲ್ಲಿ ಬೌದ್ಧ ಧರ್ಮವನ್ನು ಬೌದ್ಧ ವಿಹಾರಗಳನ್ನು ನಾಶ ಮಾಡಿದವರು, ಬೌದ್ಧರನ್ನು ಈ ದೇಶದಿಂದ ಹೊರಹಾಕಿದವರು, ಲಿಂಗಾಯತರ ಬಸವಾದಿ ಶರಣರ ಚಳವಳಿಯನ್ನು ಹತ್ತಿಕ್ಕಿದವರು, ಶರಣರನ್ನು ಜಂಗಮರನ್ನು (ಮೈಸೂರು ಘಟನೆ) ಕೊಂದು ಹಾಕಿದವರು, ಸಮೃದ್ಧ ವಚನ ಸಾಹಿತ್ಯವನ್ನು ಸುಟ್ಟು ಹಾಕಿದವರು ಯಾರೆಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ ಲಿಂಗಾಯತರು ನಮ್ಮ ಸೋದರರು ಎಂದು ಹೇಳುತ್ತ ಹಿತಶತ್ರುಗಳಂತೆ ವರ್ತಿಸುವುದು ಬೇಡ ಎಂಬುದೇ ಲಿಂಗಾಯತರ ಕಳಕಳಿಯ ಪ್ರಾರ್ಥನೆಯಾಗಿದೆ. ಬದಲಾಗಿ ಅವರು ಲಿಂಗಾಯತರ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡಲಿ ಎಂಬುದು ಲಿಂಗಾಯತರ ಆಗ್ರಹವಾಗಿದೆ.

ಬೌದ್ಧ, ಜೈನ, ಶಿಖ್ಖ ಧರ್ಮಗಳು ಸ್ವತಂತ್ರಧರ್ಮವೆಂದು ಘೋಷಿಸಿಕೊಳ್ಳುವಾಗ ಇಲ್ಲದ ವಿರೋಧ ಈಗೇಕೆ? ಇದಕ್ಕೆ ಪೇಜಾವರ ಶ್ರೀಗಳೇ ಉತ್ತರಿಸಬೇಕು. ಬಹುಶಃ ಲಿಂಗಾಯತಧರ್ಮ ಸ್ವತಂತ್ರಧರ್ಮವಾದರೆ ವೈದಿಕ ಧರ್ಮದ ಶೋಷಿತ ವರ್ಗಗಳು ಲಿಂಗಾಯತರಾಗಿ ಗುರುತಿಸಿಕೊಳ್ಳಬಹುದೆಂಬ ಭಯ ಕಾಡುತ್ತಿರಬಹುದು. ಈ ಕಾರಣಕ್ಕಾಗಿಯೇ ಕೆಲವು ವೈದಿಕ ಪುರೋಹಿತಶಾಹಿಗಳು ಮತ್ತು ಅವರ ಕೆಲವು ಸಂಘಟನೆಗಳು ಲಿಂಗಾಯತ ವಿರೋಧಿ ಹೇಳಿಕೆ ನೀಡುತ್ತಿವೆ. ಅವರೊಡನೆ ತಮ್ಮ ಧರ್ಮದ ಅಭಿಮಾನವಿಲ್ಲದ, ತಮ್ಮ ಅಸ್ಮಿತೆಯನ್ನು ಅರಿಯದ ಕೆಲವು ಲಿಂಗಾಯತರು ಗುರುತಿಸಿಕೊಳ್ಳುತ್ತಿರುವುದು ದುರ್ದೈವದ ಸಂಗತಿ. ಹನ್ನೆರಡನೆಯ ಶತಮಾನದಲ್ಲಿ ಲಿಂಗಾಯತರು ವೈದಿಕರಿಂದ ಸ್ವತಂತ್ರರಾಗಿದ್ದರು. ವಿಜಯನಗರ ಕಾಲದಲ್ಲಿ ಲಿಂಗಾಯತ ಸ್ವತಂತ್ರಧರ್ಮವಾಗಿತ್ತು. ಬ್ರಿಟಿಷರ ಕಾಲದಲ್ಲಿ, ಮೈಸೂರು ಅರಸರ ಆಡಳಿತದಲ್ಲಿ ಕ್ರಿ. ಶ. ೧೮೭೧ ರವರೆಗೂ ಲಿಂಗಾಯತ ಧರ್ಮ ಸ್ವತಂತ್ರಧರ್ಮವೆಂದೇ ಗುರುತಿಸಲ್ಪಡುತ್ತಿತ್ತು. ವೈದಿಕರ ಕುತಂತ್ರದಿಂದ ಅದೀಗ ಹಿಂದೂಧರ್ಮದ ಶೂದ್ರವರ್ಣವಾಗಿದೆ. ಅಂದರೆ ಸ್ವತಂತ್ರಭಾರತದಲ್ಲಿ ಈ ವರ್ಣವ್ಯವಸ್ಥೆಯನ್ನು ಒಪ್ಪಿಕೊಂಡು ಇನ್ನೂ ಕೀಳಾಗಿರಬೇಕೆ? ದೇಶ ಸ್ವತಂತ್ರವಾಗಿದೆ, ಲಿಂಗಾಯತರು ಜೈನ, ಬೌದ್ಧ, ಶಿಖ್ಖರಂತೆ ಸ್ವತಂತ್ರಧರ್ಮೀಯರಾಗುವುದು ಬೇಡವೆ?

■■

# ವಚನಾರ್ಥ–ಚಿಂತನ

● ಡಾ. ಸಿದ್ಧರಾಮ ಸ್ವಾಮಿಗಳು

**ಗುರು ಉಪದೇಶ ಮಂತ್ರವೈದ್ಯ,**
**ಜಂಗಮ ಉಪದೇಶ ಶಸ್ತ್ರವೈದ್ಯ ನೋಡಾ,**
**ಭವರೋಗವ ಕಳೆವ ಪರಿಯ ನೋಡಾ**
**ಕೂಡಲಸಂಗನ ಶರಣರ ಅನುಭಾವ**
**ಮಡಿವಾಳನ ಕಾಯಕದಂತೆ.**

ದೈಹಿಕ ಮತ್ತು ಮಾನಸಿಕ ರೋಗಗಳಿಗಿಂತ ಭೀಕರವಾದ ರೋಗವೆಂದರೆ ಭವರೋಗ. ಅದು ಕೇವಲ ಅಧ್ಯಾತ್ಮ ಸಾಧನೆಯಿಂದ ಮಾತ್ರ ನಿವಾರಣೆ ಯಾಗುವುದು. ಗುರು, ಜಂಗಮ ಹಾಗು ಶಿವಶರಣರು ತಮ್ಮ ಅನುಭಾವದ ಮೂಲಕ ಜನನ–ಮರಣ ರೂಪದ ಈ ಭವರೋಗವನ್ನು ಗುಣಪಡಿಸಬಲ್ಲರು ಎಂಬುದನ್ನು ವಿವರಿಸುವ ಈ ವಚನ ಭಕ್ತಿಭಂಡಾರಿ, ವಿಶ್ವಗುರು ಬಸವಣ್ಣನವರದು.

ಭವರೋಗದಿಂದ ಮುಕ್ತರಾಗಲು ನಾವು ಕೈಕೊಳ್ಳುವ ಅಧ್ಯಾತ್ಮ ಸಾಧನೆಗೆ ಗುರುವಿನ ಮಾರ್ಗದರ್ಶನ ಅತ್ಯವಶ್ಯವಾಗಿ ಬೇಕು. ಜಗತ್ತಿನ ಎಲ್ಲ ಧರ್ಮ ಹಾಗು ದರ್ಶನಗಳು ಗುರುವಿನ ಅಗತ್ಯವನ್ನು ಒತ್ತಿ ಹೇಳುತ್ತವೆ. ಗುರು ನಮ್ಮ ಅಜ್ಞಾನವನ್ನು ಕಳೆದು ಜ್ಞಾನದ ಜ್ಯೋತಿಯನ್ನು ಬೆಳಗುವವನು. ಸಂಸ್ಕಾರದ ಬಲದಿಂದ ನಮ್ಮನ್ನು ಮಂತ್ರದೇಹಿಯನ್ನಾಗಿಸುವವನು. ಭವಿಯಾಗಿದ್ದವರನ್ನು ಭಕ್ತರನ್ನಾಗಿಸುವವನೇ ಗುರು. ನಮ್ಮ ಸ್ವಪ್ರಯತ್ನದಿಂದ ನಿರ್ಗುಣ, ನಿರಾಕಾರನಾಗಿರುವ ಪರಬ್ರಹ್ಮನನ್ನು ಕಾಣಲು ಸಾಧ್ಯವಾಗುವುದಿಲ್ಲ. ಗುರುಕಾರುಣ್ಯ ಮುಖ್ಯವಾಗಿ ಬೇಕು. ಮೋಕ್ಷಾಪೇಕ್ಷಿಯಾದ ಸಾಧಕನು ಗುರುವನ್ನು ಆಶ್ರಯಿಸಿದಾಗ ಗುರು ತನ್ನ ಉಪದೇಶದಿಂದ ಕಾಯದ ಕತ್ತಲೆಯನ್ನು, ಮನದ ಮಾಲಿನ್ಯವನ್ನು ಕಳೆಯುವವನು. ಮಂತ್ರೋಪದೇಶಪೂರ್ವಕ ಕುರುಹನ್ನು (ಇಷ್ಟಲಿಂಗ) ಅನುಗ್ರಹಿಸುವನು. ಕುರುಹಿನ ಮೂಲಕ ಅರುಹನ್ನು ಪಡೆಯಬೇಕು. ಪಾಪಕರ್ಮಗಳನ್ನು ಮಾಡಬೇಡ, ಸದಾ ಪರಮಾತ್ಮನ ಸ್ಮರಣೆ ಮಾಡು, ನೀತಿವಂತನಾಗು, ದಯವೇ ಧರ್ಮದ ಮೂಲವೆಂದು ತಿಳಿ, ಇಂದ್ರಿಯಗಳ ಮೇಲೆ ನಿಗ್ರಹವಿರಲಿ, ಶಿವಶರಣರ ಸಂಗ ಮಾಡು ಇತ್ಯಾದಿ ಆಚಾರ ಸಂಹಿತೆಯನ್ನು ಬೋಧಿಸುವ ಗುರು ಪರಶಿವನಿಗಿಂತ ಮಿಗಿಲಾದವನು. ಅವನಿಗೆ ಜಾತಿ ಎಂಬುದಿಲ್ಲ. "ಊರಿಂಗೆ ದಾರಿಯನು ಆರು ತೋರಿದರೇನು" ಎಂದು ಕೇಳುವ ಕವಿ ಸರ್ವಜ್ಞನು ಗುರುವಿನ ಜಾತಿ ಮುಖ್ಯವಲ್ಲ, ಅವನಲ್ಲಿರುವ ಅಪರಿಮಿತ ಜ್ಞಾನ ಮುಖ್ಯ ಎಂಬುದನ್ನು ಸ್ಪಷ್ಟಪಡಿಸಿದ್ದಾನೆ. ಜಾತಿಗೊಂದು ಗುರುಪೀಠ ಮಾಡುವ, ಜಾತಿ ಜಂಗಮರೇ ಗುರುಗಳು ಎಂದು ತಿಳಿಯುವ ಜನರು ಈ ಕಟುಸತ್ಯವನ್ನು ಅರಿಯಬೇಕು.

ಲಿಂಗಾಯತ ಧರ್ಮದ ಒಂದು ವಿಶಿಷ್ಟವಾದ ಕಲ್ಪನೆ "ಜಂಗಮತತ್ವ". ಗುರುವಿಗಿಂತಲೂ ಮಿಗಿಲಾದ ಸ್ಥಾನ ಜಂಗಮನದು. 'ಗುರುವಿನ ಗುರು ಜಂಗಮ ಇಂತೆಂದುದು ಕೂಡಲಸಂಗನ ವಚನ" ಅಲ್ಲವೆ? ಗುರುವಿಗೆ ಮಂತ್ರವೈದ್ಯನೆಂದು ಕರೆದ ಬಸವಣ್ಣನವರು ಜಂಗಮನಿಗೆ ಶಸ್ತ್ರವೈದ್ಯ ಎಂದು ಕರೆದಿರುವುದು ತುಂಬ ಔಚಿತ್ಯಪೂರ್ಣ. ಈ ಗುರು ಜಂಗಮರನ್ನು ಆಧುನಿಕ ವೈದ್ಯವಿಜ್ಞಾನದ ಫಿಜಿಸಿಯನ್ ಮತ್ತು ಸರ್ಜನ್‌ರಿಗೆ ಹೋಲಿಸಬಹುದು. ಬರೀ ಮಾತ್ರೆ ಮುಂತಾದ ಬಾಹ್ಯ ಉಪಚಾರಗಳಿಂದ ಗುಣಪಡಿಸಲು ಸಾಧ್ಯವಾಗದ ಕಾಯಿಲೆಗಳನ್ನು ಶಸ್ತ್ರಚಿಕಿತ್ಸೆ ಮೂಲಕ ಗುಣಪಡಿಸುವಂತೆ ಗುರೂಪದಿಷ್ಟನಾಗಿ ಸಾಧನೆಯಲ್ಲಿ ಇರುವ ಭಕ್ತನ ಮಾಯಾ ಮೋಹವನ್ನು ಕಳೆದು ಭಕ್ತಿಯನ್ನು ಸ್ವೀಕರಿಸುವವನು ಜಂಗಮ. ಲಿಂಗ ಸಂತೃಪ್ತಿಯಾಗುವುದು ಜಂಗಮದ ಮೂಲಕ. 'ಜಂಗಮಕ್ಕೆ ಆಪ್ಯಾಯನವಾದರೆ ಲಿಂಗಸಂತುಷ್ಟಿಯಯ್ಯಾ, ಲಿಂಗದ ಮುಖ ಜಂಗಮ, ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು' ಎಂದು ಹೇಳುವ ಬಸವಣ್ಣನವರು

ನಾಗನೂರು ಶ್ರೀ ರುದ್ರಾಕ್ಷಿಮಠ, ಬೆಳಗಾವಿ

ಜಂಗಮತತ್ವದ ಆಧ್ಯಾತ್ಮಿಕ ಹಾಗು ಸಾಮಾಜಿಕ ಮಹತ್ವವನ್ನು ಮಾರ್ಮಿಕವಾಗಿ ವಿವರಿಸಿದ್ದಾರೆ. ಜಾತಿ ಮತ ಪಂಥ, ನಾಮ–ರೂಪಗಳ ಸೀಮೆಯನ್ನು ಮೀರಿದ, ರಾಗ–ದ್ವೇಷಗಳಿಲ್ಲದ ನಿಷ್ಪೃಹ ಜಂಗಮ. ನಡೆನುಡಿಗಳಲ್ಲಿ ಸತ್ಯವನ್ನು, ಅಂತರಂಗ ದಲ್ಲಿ ಶಿವಭಾವವನ್ನು ತುಂಬಿಕೊಂಡಿರುವ ಮಹಾನುಭಾವಿಯೇ ಜಂಗಮ. ವಿರಕ್ತಭಾವದಲ್ಲಿ ನಿಂದು ಲೋಕಕಲ್ಯಾಣಕ್ಕಾಗಿ ಚರಿಸುವ ಅರಿವು ಆಚಾರಗಳ ಸಂಗಮ ಈ ಜಂಗಮ. ತನ್ನ ನಂಬಿದ ಭಕ್ತರ ಆತಿಥ್ಯವನ್ನು ಸ್ವೀಕರಿಸುವ, ಅವರ ಶ್ರದ್ಧೆ–ನಿಷ್ಠೆಗಳನ್ನು ಗಟ್ಟಿಗೊಳಿಸವ ಜಂಗಮನು ಅವರಲ್ಲಿರುವ ದೋಷಗಳನ್ನು ಯಾವ ಹಂಗೂ ಇಲ್ಲದೆ ಎತ್ತಿ ತೋರಿಸುವ ಶಸ್ತ್ರವೈದ್ಯ. ನಾವು ಮಾಡುವ ಲಿಂಗಾರ್ಚನೆಯ ಮುಖ್ಯ ಉದ್ದೇಶ ಜಂಗಮ ಮನೆಗೆ ಬರಬೇಕೆಂಬುದು. "ಮಾರಂಕ ಮನೆಗೆ ಬಂದರೆ ಇದಿರೆದ್ದು ನಡೆವುದು ಕೂಡಲಸಂಗಮದೇವನ ನೊಲಿಸುವ ಚಿಹ್ನ" ಜಂಗಮವೇ ಪ್ರಾಣ, ಪ್ರಾಣವೇ ಜಂಗಮವಾಗಿರುವಾತ ಸದ್ಭಕ್ತ. ವಿಶ್ವಕ್ಕೆ ಪರಮಾಧಾರನಾದ ಪರಶಿವನೇ ಜಂಗಮ. ಲೋಕ ಕಲ್ಯಾಣಕ್ಕಾಗಿ ಚರಿಸುವ ಜ್ಞಾನಮೂರ್ತಿ. ಇಂತಿದೆಲ್ಲವೂ ಜಂಗಮ ತತ್ವದ ಆಧ್ಯಾತ್ಮಿಕ ಮಹತ್ವ ವೆನಿಸಿದರೆ ಬಸವಣ್ಣನವರ ದೃಷ್ಟಿಯಲ್ಲಿ ಜಂಗಮತತ್ವದ ಸಾಮಾಜಿಕ ಮಹತ್ವವೂ ಇದೆ. ಸಾಮಾಜಿಕ ನೆಲೆಗಟ್ಟಿನಲ್ಲಿ ಜಂಗಮವೆಂದರೆ ಸಮಾಜ; ಸಮಾಜದ ಬಹುಮುಖ್ಯ ಅಂಗವೆನಿಸಿದ ದೀನ ದಲಿತರು, ಅಸಹಾಯಕರು, ಒಟ್ಟಾರೆ ಶೋಷಿತರ ವರ್ಗ. ಜಂಗಮ ದಾಸೋಹವೆಂದರೆ ದೀನದಲಿತರ ಸೇವೆ. ಹೀಗೆ ಜಂಗಮತತ್ವ ಲಿಂಗಾಯತ ಧರ್ಮದರ್ಶನದಲ್ಲಿ ಬಹುವಿಸ್ತಾರದ ಅರ್ಥವ್ಯಾಪ್ತಿ ಯನ್ನು ಒಳಗೊಂಡಿದೆ.

ದೈಹಿಕ ಕಾಯಿಲೆ ಈ ಜನ್ಮದಲ್ಲಿ ಮಾತ್ರ ನಮ್ಮನ್ನು ಘಾಸಿಗೊಳಿಸಿದರೆ, ಭವರೋಗ ಜನ್ಮಜನ್ಮಾಂತರಗಳಲ್ಲಿಯೂ ಬಿಡದೆ ಕಾಡುತ್ತದೆ. ಹುಟ್ಟು–ಸಾವುಗಳೆಂಬ ಈ ರೋಗದಿಂದ ಮುಕ್ತರಾಗದೆ ಯಾರಿಗೂ ಶಾಂತಿ ಇಲ್ಲ, ಸುಖವೂ ಇಲ್ಲ. ಗುರು–ಜಂಗಮರಿಬ್ಬರೂ ಭವರೋಗ ವೈದ್ಯರು. ಅವರೇ ಈ ರೋಗದಿಂದ ನಮ್ಮನ್ನು ಮುಕ್ತಗೊಳಿಸಲು ಸಮರ್ಥರು. ಅವರು ಅನುಭಾವ ಸಂಪನ್ನರು. ಅವರೇ ಕೂಡಲಸಂಗನಶರಣರು. ಅವರೊಡನೆ ಮಾಡುವ ಅನುಭಾವ ನಮ್ಮ ಅಜ್ಞಾನದ ಕತ್ತಲೆಯನ್ನು ತೊಲಗಿಸುತ್ತದೆ. ಆಗ ಪರಮಸತ್ಯದ ಜ್ಞಾನ ಮೂಡುತ್ತದೆ. ಅದುವರೆಗೆ ನಾನು ಬಡವ, ನಾನು ಶ್ರೀಮಂತ ಇತ್ಯಾದಿ ಹೇಳಿಕೊಳ್ಳುತ್ತಿದ್ದ ಭಾವ ಮರೆಯಾಗಿ ಪೂರ್ಣಭಾವ ಅಳವಡುತ್ತದೆ. ನಾನು ನಿತ್ಯವೂ ನನ್ನ ಇಂದ್ರಿಯ ಗಳಿಂದ ಏನನ್ನು ಅನುಭವಿಸುತ್ತೇನೆಯೋ ಅದು ನಾನು ಅಲ್ಲ. ನಾನು ಅಥವಾ ನೋಡುವ ನನ್ನನ್ನು ಇಂದ್ರಿಯಗಳಿಂದ ನೋಡಲು ಸಾಧ್ಯವಾಗದು. ಏಕೆಂದರೆ ನಾನು (ಆತ್ಮ) ಇಂದ್ರಿಯಗೋಚರವಲ್ಲ. ಕಾರಣ ಅನುಭವವೇದ್ಯವೂ ಅಲ್ಲ. ಅದಕ್ಕೆ ಬೇಕಾಗಿರುವುದು ಅನುಭಾವ. ಅಂತೆಯೇ "ಅನುಭಾವ ಎಂಬುದು ಆತ್ಮದ ವಿದ್ಯೆ, ಅನುಭಾವವೆಂಬುದು ತಾನಾರೆಂಬುದ ತೋರುವುದು" ಎಂದು ಶರಣರು ಸ್ಪಷ್ಟಪಡಿಸಿದ್ದಾರೆ.

ಬಸವಣ್ಣನವರ ದೃಷ್ಟಿಯಲ್ಲಿ ಅನುಭಾವವೆಂಬುದು ಮಡಿವಾಳನ ಕಾಯಕದ ಹಾಗೆ. ಮಡಿವಾಳ(ಅಗಸ)ನ ಕಾಯಕ ಬಟ್ಟೆಯನ್ನು ಶುಚಿಗೊಳಿಸುವುದು. ಬಟ್ಟೆಯನ್ನು ಶುಚಿಗೊಳಿಸಿದಾಗ ಅದರ ಎರಡೂ ಮಗ್ಗಲುಗಳು ಸ್ವಚ್ಛವಾಗುವಂತೆ ಅನುಭಾವದಿಂದ ವ್ಯಕ್ತಿಯ ಅಂತರಂಗ–ಬಹಿರಂಗಗಳೆರಡೂ ಪರಿಶುದ್ಧವಾಗುವವು. ಹಾಗೆಯೇ ಅನುಭಾವದಿಂದ ಮನಸ್ಸಿನ ಮಲಿನತೆಯನ್ನು ಕಳೆವುದು. ಪರಿಶುದ್ಧವಾದ ಮನಸ್ಸು ಮಾತ್ರ ಪರಶಿವನಲ್ಲಿ ಬೆರೆಯಲು ಅರ್ಥಾತ್ ಪರಶಿವಧ್ಯಾನ ಮಾಡಲು ಸಮರ್ಥವಾಗುವುದು. "ಎನಗುಳ್ಳದೊಂದು ಮನ ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ ಎನಗೆ ಭವವುಂಟೆ?" ಎಂದು ಅಕ್ಕಮಹಾದೇವಿ ಹೇಳುವಲ್ಲಿಯೂ ಭವರೋಗ ನಿವಾರಣೆಯಲ್ಲಿ ಅನುಭಾವದ ಪಾತ್ರ ಎಷ್ಟೆಂಬುದು ಅರ್ಥವಾಗದೇ ಇರದು. ಒಟ್ಟಾರೆ ಗುರು, ಜಂಗಮ ತತ್ವಗಳು, ಶರಣರ ಅನುಭಾವ ಇವು ಭವರೋಗಕ್ಕೆ ಮದ್ದು ಎಂಬ ಭಾವ ಬಸವಣ್ಣನವರ ಈ ವಚನದಲ್ಲಿ ಅಡಕವಾಗಿದೆ.

■■

# ಶಿಕ್ಷಣ ಚೇತನ : ಶ್ರೀ ವ್ಹಿ. ಡಿ. ರಾಚನಾಯ್ಕರ್

● ಪೂಜ್ಯಶ್ರೀ ಮಹಾಂತ ದೇವರು, ಶೇಗುಣಸಿ

'ನೀವೆಲ್ಲಾ ಸಮಾಜವನ್ನು ತಿದ್ದಿ, ಉದ್ಧರಿಸುವ ಸ್ವಾಮಿಗಳಾಗುವವರು. ನಿಮ್ಮ ಮ್ಯಾಲ ಈ ಸಮಾಜದ ಋಣ ಬಾಳ ಐತಿ, ಇಂಥಾ ಸಂದರ್ಭದಾಗ ನೀವ ಹಿಂಗ ಮಾಡಿದ್ರ ನನಗ ಬಾಳ ನೋವ ಆಕ್ಕೈತ್ರೆಪ್ಪಾ, ನೀವು ಇದ ಚಾಳಿ ಮುಂದುವರೆಸಿದ್ರ ನಾ ನಿಮಗ ಪಾಠ ಮಾಡಾಕ ಬರೋದಿಲ್ಲ. ಏನ ಮಾಡುದು ನೀವ ಹೇಳ್ರಿ,' ಅಂದು ಈ ರೀತಿಯ ಮಾತುಗಳನ್ನು ಆಡುತ್ತಾ ಅಕ್ಷರಶಃ ಅತ್ತು ಬಿಟ್ಟಿದ್ದರು ನನ್ನ ಪ್ರೀತಿಯ ಅಧ್ಯಾಪಕರಾದ ಶ್ರೀ ವ್ಹಿ. ಡಿ. ರಾಚನಾಯ್ಕರ ಗುರುಗಳು.

ಈ ಮಾತುಗಳನ್ನು ಕೇಳುತ್ತಾ ಅವರ ದುಃಖ ತುಂಬಿದ ಮುಖವನ್ನು ನೋಡುತ್ತಾ ನಮ್ಮ ಕಣ್ಣುಗಳೂ ಒದ್ದೆಯಾಗಿದ್ದವು. ಕಣ್ಣೀರನ್ನ ಒರೆಸುತ್ತಾ ನಮ್ಮ ಕಿವಿ ಟೊಪ್ಪಿಗೆಗಳು ಮುದ್ದೆಯಾಗಿದ್ದವು. ಅಂದು ವಟು ಸಾಧಕರೆಲ್ಲ ಸರಿಯಾದ ಸಮಯಕ್ಕೆ ಕ್ಲಾಸಿಗೆ ಬಾರದೆ, ಗಲಾಟೆ ಮಾಡುವುದನ್ನ ಗಮನಿಸಿ ನಮ್ಮೆಲ್ಲರ ಹೃದಯಕ್ಕೆ ತಾಗುವ ಹಾಗೆ ಮಾತನಾಡಿ ನಮ್ಮೆಲ್ಲರನ್ನು ತಿದ್ದಿದರು ಆ ಗುರುಗಳು. ಅಂದಿನಿಂದ ನಮ್ಮ ದಿನಚರಿಯೇ ಬದಲಾಗಿ ಹೋಗಿತ್ತು.

೨೦೦೦ ಇಸ್ವಿಯಲ್ಲಿ ಶಿವಯೋಗ ಮಂದಿರ ಸಂಸ್ಥೆಯ ಅಧ್ಯಕ್ಷರು ಬದಲಾದರು. ನಾಡಿನ ಶ್ರೇಷ್ಠ ಸಂಸ್ಥೆಯ ಜವಾಬ್ದಾರಿಯು ನಾಗನೂರು ರುದ್ರಾಕ್ಷಿಮಠದ ಪರಮಗುರುಗಳಾದ ಪೂಜ್ಯಶ್ರೀ ಡಾ. ಸಿದ್ಧರಾಮ ಅಪ್ಪಗಳವರ ಹೆಗಲೇರಿತ್ತು. ವಟುಸಾಧಕರ ಪರಿಸ್ಥಿತಿಯನ್ನು ಕಂಡು ಮಮ್ಮಲ ಮರುಗಿದ ಪೂಜ್ಯರು ನಮ್ಮೆಲ್ಲರ ಶಿಕ್ಷಣಕ್ಕಾಗಿ ಬಹುವಾಗಿ ಶ್ರಮಿಸಿದರು. ವಟುಸಾಧಕರ ಸಂಪೂರ್ಣ ಜವಾಬ್ದಾರಿಯನ್ನು ಬೆಳಗಾವಿಯ ಶಿಕ್ಷಣ ಚೇತನ ಶ್ರೀ ವ್ಹಿ. ಡಿ. ರಾಚನಾಯ್ಕರ ಅವರಿಗೆ ವಹಿಸಿದರು. ಅದ್ಯಾವ ಅಮೃತ ಘಳಿಗೆಯಲ್ಲಿ ವ್ಹಿ. ಡಿ. ರಾಚನಾಯ್ಕರ ಅವರಿಗೆ ಕರ್ಣಧಾರತ್ವ ನೀಡಿದರೋ ವಟುಸಾಧಕರ ಜೀವನ ಪದ್ಧತಿಯು ಪರಿವರ್ತನೆಯಾಯಿತು.

ಪ್ರತಿದಿನ ಮುಂಜಾನೆ ಎಂಟುಗಂಟೆಗೆ ಬಿಳಿಯ ದೋತರ, ನೆಹರು ಶರ್ಟ ಅಂಗಿಯನ್ನುಟ್ಟು ಕೈಯಲ್ಲೊಂದು ಇಂಗ್ಲೀಷ್ ಭಾಷಾಂತರ ಪಾಠಮಾಲೆ ಪುಸ್ತಕವನ್ನು ಹಿಡಿದು ಗುರುಗಳು ಬರುವುದನ್ನ ನೋಡುವುದೇ ನಮಗೆಲ್ಲರಿಗೂ ಖುಷಿಯ ಸಂಗತಿಯಾಗಿತ್ತು. ತರಗತಿಗೆ ಬಂದ ತಕ್ಷಣ ನಮ್ಮ ಆರೋಗ್ಯ ವಿಚಾರಿಸಿ ಪಾಠ ಮಾಡುತ್ತಿದ್ದರು. ಆ ಮೊದಲು ನಮಗೆ ವೇಳೆಯ ಮಹತ್ವ ತಿಳಿದಿರಲಿಲ್ಲ. ತರಗತಿಗಳ ಗತಿ ತಪ್ಪಿ ಹೋಗಿತ್ತು, ಸರಿಯಾದ ಮಾರ್ಗದರ್ಶನವಿಲ್ಲದ ಕಾರಣ ನಮ್ಮೆಲ್ಲರ ಮತಿ–ಮಂದವಾಗಿತ್ತು. ಯಾವಾಗ ನಾಗನೂರಿನ ಪೂಜ್ಯಶ್ರೀ ಡಾ. ಸಿದ್ಧರಾಮ ಅಪ್ಪಗಳವರು ಶ್ರೀ ರಾಚನಾಯ್ಕರ ಗುರುಗಳನ್ನು ನಮಗೆ ಪಾಠ ಮಾಡಲು ನೇಮಿಸಿದರೋ ಅಂದಿನಿಂದ ಪಾಠ–ಪ್ರವಚನಗಳ ಬಗೆಗಿನ ಆಸಕ್ತಿ ಹೆಚ್ಚಾಗತೊಡಗಿತು.

ವಚನ ಸಾಹಿತ್ಯದ ಪ್ರಸಾರಕ್ಕಾಗಿ ಗುರುಗಳು ನಮಗೆಲ್ಲಾ ಇಂಗ್ಲಿಷ್ ಭಾಷೆಯ ಕುರಿತಾಗಿ ಒಲವು ಮೂಡಿಸಲು ಪ್ರಯತ್ನಿಸುತ್ತಿದ್ದರು. ಮೊದಲಿಗೆ ನಮಗೆ ಅತ್ಯಾವಶ್ಯಕ ಇಂಗ್ಲಿಷ್ ಶಬ್ದಗಳನ್ನು ಬಾಯಿಪಾಠ ಮಾಡಲು ಹೇಳುತ್ತಿದ್ದರು. ನಂತರ ಸರಳ ಕನ್ನಡ ವಾಕ್ಯಗಳನ್ನು ಇಂಗ್ಲಿಷ್ ಭಾಷೆಗೆ ತರ್ಜುಮೆ ಮಾಡಿಸುತ್ತಿದ್ದರು. ಕ್ರಮೇಣ ನಮಗೆ ಆಂಗ್ಲ ಭಾಷೆಯ ಮೇಲಿನ ಆಸಕ್ತಿ ಹೆಚ್ಚುತ್ತಾ ಹೋಯಿತು.

ಶರಣರ ಭಾಷಾಂತರಿಸಿದ ವಚನಗಳನ್ನು ಬಾಯಿಪಾಠ ಮಾಡಿ ಅವರಿಗೆ ಒಪ್ಪಿಸುವುದೆಂದರೆ ನಮಗೆ ಎಲ್ಲಿಲ್ಲದ ಖುಷಿ. ಅವರಿಗೂ ಕೂಡಾ ಅಷ್ಟೇ ಆನಂದದ ಸಂಗತಿಯಾಗಿತ್ತು. ನಮಗೆಲ್ಲ ಶಹಭಾಷ್ ಹೇಳಿ ಕಂಠಪಾಠ ಮಾಡಲು ಪ್ರೇರೇಪಿಸುತ್ತಿದ್ದರು. ವಚನ ಸಾಹಿತ್ಯವನ್ನು ಅವರು ಆಳವಾಗಿ ಅರಿತಿದ್ದರು. ಅಂತೆಯೇ ಅವರು ಶರಣರಂತೆಯೇ ಬದುಕುತ್ತಿದ್ದರು. ಶಿವಶರಣ–ಶರಣೆಯರ ಜೀವನ ಕುರಿತಾದ 'ಶರಣ ಕಿರಣ' ಪುಸ್ತಕವನ್ನು ನೀಡಿ ರಸಪ್ರಶ್ನೆ ಕಾರ್ಯಕ್ರಮ ಏರ್ಪಡಿಸಿ ಕಲ್ಯಾಣದ ಶರಣರ ಜೀವನ ದರ್ಶನ ಮಾಡಿಸಿದರು.

ಶಿವಯೋಗ ಮಂದಿರದ ಬಿಸಿಲು ವಾತಾವರಣದಿಂದಾಗಿ ಬೆಳಗಾವಿಯ ತಂಪಿನಲ್ಲಿದ್ದ ಗುರುಗಳ

ಆರೋಗ್ಯ ಏರುಪೇರಾಗುತ್ತಿತ್ತು. ಅದ್ಯಾವುದನ್ನು ತೋರ್ಗೊಡದೆ ಅತ್ಯಂತ ನಿಷ್ಠೆಯಿಂದ ಪಾಠ ಮಾಡುತ್ತಿದ್ದರು. ಶಿಸ್ತು–ಸೌಜನ್ಯ ಮತ್ತು ಸಂಯಮ ಗುಣಗಳನ್ನು ಅವರನ್ನು ನೋಡಿಯೇ ಕಲಿಯಬೇಕು. ನನ್ನ ದೃಷ್ಟಿಯಲ್ಲಿ ಆದರ್ಶ ಅಧ್ಯಾಪಕರು ಹೇಗಿರಬೇಕು ಎಂದರೆ ಶ್ರೀ ವ್ಹಿ. ಡಿ. ರಾಚನಾಯ್ಕರ ಗುರುಗಳಂತೆಯೇ ಇರಬೇಕೆಂದು ಹೆಮ್ಮೆಯಿಂದ ಹೇಳುತ್ತೇನೆ. ಅವರು ವಿದ್ಯಾರ್ಥಿಗಳ ಬಗೆಗೆ ತೋರಿಸುತ್ತಿದ್ದ ಕಾಳಜಿ–ಕಳಕಳಿ ಅನನ್ಯ, ಅನುಪಮ.

ಇಂಗ್ಲಿಷ್‌ಗೆ ಭಾಷಾಂತರಿಸಿದ ಬಸವಣ್ಣನವರ ವಚನಗಳನ್ನು ಶಿವಯೋಗಮಂದಿರದ ಜಾತ್ರಾಮಹೋತ್ಸವದಲ್ಲಿ ಚಿಕ್ಕವನಾಗಿದ್ದ ನನ್ನಿಂದ ಹೇಳಿಸಿ ಬಹಳಷ್ಟು ಖುಷಿಪಡುತ್ತಿದ್ದರು. ಅವರ ಮುಖದ ಮೇಲಿನ ಖುಷಿಯನ್ನು ನೋಡುವ ಸಲುವಾಗಿ ನಾನು ಬೇರೆ ಬೇರೆ ವಚನಗಳನ್ನು ಬಾಯಿಪಾಠ ಮಾಡಿ ಅವರಿಗೆ ಒಪ್ಪಿಸಿದಾಗ ಅವರು ಮತ್ತೂ ಖುಷಿ ಪಡುತ್ತಿದ್ದರು. ಅಮೂಲ್ಯವಾಗಿರುವ ವಚನ ಸಾಹಿತ್ಯವನ್ನು ವಿಶ್ವದೆಲ್ಲೆಡೆ ತಲುಪಿಸುವಂತಾಗಬೇಕು ಎಂದು ಮೇಲಿಂದ ಮೇಲೆ ಹೇಳುತ್ತಾ ನಮ್ಮೆಲ್ಲರಲ್ಲಿಯೂ ಅಪರೂಪದ ಕನಸನ್ನು ಕಟ್ಟಿಕೊಟ್ಟರು. ಇಂಗ್ಲಿಷ್ ಭಾಷೆ ಎಂದರೆ ಮಾರುದ್ದ ಜಿಗಿಯುತ್ತಿದ್ದ ನಾನು ಇಂದು ಇಂಗ್ಲಿಷ್ ಸಾಹಿತ್ಯದಲ್ಲಿಯೇ ಪಿಹೆಚ್. ಡಿ. ಪ್ರಬಂಧವನ್ನು ಬರೆಯುತ್ತಿದ್ದೇನೆಂದರೆ ಅದಕ್ಕೆ ಗುರುಗಳೇ ಕಾರಣ.

ವಾರಕ್ಕೆರಡು ಬಾರಿ ಮಂದಿರದ ಆಗುಹೋಗುಗಳನ್ನು ನೋಡಿಕೊಳ್ಳಲು ಬಾಳ್ಗಬೆಳಗು ಪೂಜ್ಯಶ್ರೀ ಡಾ. ಸಿದ್ಧರಾಮ ಅಪ್ಪಗಳವರು ಬರುತ್ತಿದ್ದರು. ನಮ್ಮೆಲ್ಲರ ಕುರಿತಾಗಿ ಮೆಚ್ಚುಗೆಯ ಮಾತುಗಳನ್ನಾಡುತ್ತಿದ್ದರು. ಪೂಜ್ಯನೀಯ ಅಪ್ಪಗಳವರು ಸಹ ತುಂಬ ಸಂಭ್ರಮಿಸುತ್ತಿದ್ದರು. ಪೂಜ್ಯರು ರಾಚನಾಯ್ಕರ ಗುರುಗಳಿಗೆ ಎಲ್ಲ ರೀತಿಯ ಸ್ವಾತಂತ್ರ್ಯವನ್ನು ನೀಡಿದ್ದರು. ಅದರ ಫಲವಾಗಿ ವಿನೂತನ ಯೋಜನೆಗಳಿಂದ ಗುರುಗಳು ಪಾಠ ಮಾಡುತ್ತಿದ್ದರು. ವರ್ಷಕ್ಕೊಂದು ಸಲ ಪ್ರವಾಸ ಮಾಡಿಸುತ್ತಿದ್ದರು.

ಸಮಾಜವನ್ನು ಮುನ್ನಡೆಸುವ ಸ್ವಾಮಿಗಳಿಗೆ ಶಿಕ್ಷಣ ನೀಡಿದರೆ ಖಂಡಿತವಾಗಿಯೂ ಸಮಾಜ ಸುಧಾರಣೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಯುವಸಾಧಕರಿಗೆಲ್ಲ ಸಮಾಜಸೇವೆಯ ಮಹತ್ವದ ಕುರಿತಾಗಿ ಮಾರ್ಮಿಕವಾದ ಮಾತುಗಳನ್ನಾಡುತ್ತ ನಮ್ಮ ಯೋಚನಾಪಥವನ್ನೇ ಬದಲಿಸಿದರು. ಗುರುಗಳಿಬ್ಬರ ಯೋಜನೆ ಯೋಚನೆಗಳು ನಮ್ಮಲ್ಲಿ (ಸಾಧಕರಲ್ಲಿ) ಅಗಾಧ ಪರಿವರ್ತನೆಯನ್ನು ತಂದವು. ಅವರಲ್ಲಿದ್ದ ಸಮಾಜದ ಬಗೆಗಿನ ಕಾಳಜಿ ಅಪರೂಪದದ್ದು.

ನಮ್ಮ ಸಮಾಜದ ಆರಾಧ್ಯ ಗುರುಗಳಾದ ಪೂಜ್ಯಶ್ರೀ ಲಿಂ. ಹಾನಗಲ್ಲ ಕುಮಾರ ಶಿವಯೋಗಿಗಳ ಜಯಂತಿಯನ್ನು ಪ್ರತಿವರ್ಷವೂ ಆಚರಿಸಲು ನಮಗೆ ಪ್ರೇರಣೆ ನೀಡಿದವರು ಪೂಜ್ಯಶ್ರೀ ಡಾ. ಸಿದ್ಧರಾಮ ಅಪ್ಪಗಳವರು ಮತ್ತು ಗುರುಗಳು. ಆ ಶಿವಯೋಗಿಗಳವರ ಜಯಂತಿ ಮಹೋತ್ಸವವನ್ನು ಇಂದಿಗೂ ಅತ್ಯಂತ ಶ್ರದ್ಧೆಯಿಂದ ನಾಡಿನ ವಿವಿಧ ಭಾಗಗಳಲ್ಲಿ ಆಚರಿಸುತ್ತಿದ್ದೇವೆ. ಶ್ರೀ ಕುಮಾರೇಶ್ವರರ ಜೀವನವನ್ನು ಇನ್ನುಳಿದ ಸಮಕಾಲೀನ ಮಹಾತ್ಮರೊಂದಿಗೆ ಹೋಲಿಸಿ ನಾನು ಇಂಗ್ಲಿಷನಲ್ಲಿ ಬರೆದ **'Galaxy of the Great'** ಪುಸ್ತಕವನ್ನು ನೋಡಿ ಬಹಳಷ್ಟು ಖುಷಿಪಟ್ಟರು. ಆ ಸಂದರ್ಭದಲ್ಲಿ ಅವರು ಆಡಿದ ಮೆಚ್ಚುಗೆಯ ಮಾತುಗಳನ್ನು ನಾನು ಈಗಲೂ ಕೇಳಬಲ್ಲೆ. ಅವರ ಚೇತೋಹಾರಿ ಮಾತುಗಳಿಂದ ನಾನೂ ಈಗಲೂ ಚೈತನ್ಯವನ್ನು ಪಡೆಯುತ್ತಿದ್ದೇನೆ.

ಹೊಸ ಹೊಸ ವಿಚಾರಗಳನ್ನು ತಿಳಿಸಿದರು. ತಪ್ಪಿದಾಗ ಪ್ರೀತಿಯಿಂದ ತಿದ್ದಿ–ತೀಡಿದರು. ಸಮಾಜದ ಋಣವನ್ನು ತೀರಿಸಬೇಕೆಂದು ಅರುಹಿದರು. ಆಧುನಿಕ ಶಿಕ್ಷಣ ಗಂಧ–ಗಾಳಿಯೇ ಗೊತ್ತಿರದ ನಮಗೆ ಇಂಗ್ಲಿಷ್ ಕಲಿಸಿದರು. ಅವರಿಂದ ಪ್ರೇರಣೆಗೊಂಡ ಸುಮಾರು ಹದಿನೈದು ಸಾಧಕರು ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡೆವು. ಶಿವಯೋಗಮಂದಿರದ ಇತಿಹಾಸದಲ್ಲಿ ಒಂದೇ ಅವಧಿಯಲ್ಲಿ ಇಷ್ಟೊಂದು ಜನ ಸಾಧಕರು ಸ್ನಾತಕೋತ್ತರ ಪದವಿ ಪಡೆದದ್ದು ಅಪರೂಪದ ದಾಖಲೆಯೆಂದೇ ಹೇಳಬೇಕು.

ಅಮೇರಿಕಾದ ಅಧ್ಯಕ್ಷರಾಗಿದ್ದ ಜಾನ್.ಎಫ್.ಕೆನಡಿ ಒಂದು ಮಾತನ್ನು ಹೇಳುತ್ತಾರೆ. 'Teachers in America they see their students as future presidents of America' ಈ ಮಾತಿನಂತೆಯೇ ಗುರುಗಳೂ ಸಹ ಈ ಸಮಾಜದ ಭಾವಿ ಗುರುಗಳು ಎನ್ನುವ ನಿಟ್ಟಿನಲ್ಲಿ ನಮಗೆಲ್ಲ ಮಾರ್ಗದರ್ಶನ ಮಾಡಿದರು.

**ಗುರುಗಳದು ಪರಿಶುಭ್ರ ವಸನ**
**ಅಂತೆಯೇ ಅವರದು ಪರಿಶುದ್ಧಜೀವನ**
**ಗುರುಗಳದು ಬಂಗಾರದ ಮೈಬಣ್ಣ**
**ಅಂತೆಯೇ ಅವರು ಅಪ್ಪಟ ಚಿನ್ನ.**

■■

# ಬಿಜ್ಜಳನ ಸಂಹಾರ– ಜಗದೇವಪ್ಪ

● ಡಾ. ವೀರಣ್ಣ ದಂಡೆ

**ಕಾಳರುದ್ರನು ಮಾಚ ಭಾಳಲೋಚನ ಭಕ್ತ**
**ಮಲ್ಲಿಬೊಮ್ಮಯ್ಯ ಜಗದೇವ। ಮನೆ ಹೊಕ್ಕು**
**ಸೀಳಿ ತಲೆಹೊಡೆದು ಬಿಜ್ಜಳನ**

ವಿಜಯಪುರ ಜಿಲ್ಲೆಯ ತಾಲೂಕು ಸ್ಥಳವಾದ ಸಿಂದಗಿ ನಗರದಿಂದ ಉತ್ತರ ದಿಕ್ಕಿನಲ್ಲಿ ೧೨ ಕಿ.ಮೀ. ದೂರದಲ್ಲಿ ಆಲಮೇಲ ಎಂಬ ಗ್ರಾಮವಿದೆ. (ಈಗದು ತಾಲೂಕು ಸ್ಥಳವಾಗಿದೆ). ಈ ಗ್ರಾಮದಲ್ಲಿ ಒಂದು ವಿರಕ್ತಮಠದ ಹೆಸರು 'ಜಗದೇವ–ಮೊಲ್ಲಿಬೊಮ್ಮ ಮಠ' ಎಂದಿದೆ. ಅದನ್ನು ಇತ್ತೀಚೆಗೆ ಹಾಗೆ ನಾಮಕರಣ ಮಾಡಲಾಗಿದೆ. ಕಾರಣವೆಂದರೆ ಆಲಮೇಲ ಮತ್ತು ಬಬಲೇಶ್ವರದಲ್ಲಿ ಜಗದೇವ–ಮೊಲ್ಲಿಬೊಮ್ಮರ ವಂಶಜರೆಂದು ಹೇಳಿಕೊಳ್ಳುವ ಒಂದು ದೇಸಾಯಿ ಮನೆತನವಿದೆ. ಈ ಇತಿಹಾಸ ಜನರ ನೆನಪಿನಲ್ಲಿ ಉಳಿಯಲಿ ಎಂಬ ಕಾರಣಕ್ಕಾಗಿ ಮಠದ ಹೆಸರನ್ನು ಹಾಗೆ ಇಡಲಾಗಿದೆಯಂತೆ.

ಆಲಮೇಲದಲ್ಲಿರುವ ದೇಸಾಯರ ಮನೆತನವು ಅಲ್ಲಿಯೇ ಸಮೀಪದ ಒಂದು ಹಳ್ಳಿ ಬಬಲೇಶ್ವರ ಗ್ರಾಮಕ್ಕೆ ಸೇರಿದ ಮನೆತನ. ಬಿಜ್ಜಳನನ್ನು ಸಂಹಾರ ಮಾಡಿದ ಜಗದೇವಪ್ಪ ಇವರ ವಂಶಕ್ಕೆ ಸಂಬಂಧಿಸಿದವರು ಎಂದು ಹೇಳಲಾಗುತ್ತದೆ. ಜಗದೇವಪ್ಪನ ತಂದೆಯ ಹೆಸರು ಗುರುಬಸಪ್ಪ. ತಾಯಿ ಸೋಮವ್ವೆ. ಇವರ ಮೂಲ ಊರು ಬೀದರ ಜಿಲ್ಲೆಯ ಕನ್ನೇಹಳ್ಳಿ ಎಂಬ ಗ್ರಾಮ ಎಂದು ಜಗದೇವಪ್ಪನ ವಂಶಜರೆಂದು ಹೇಳಿಕೊಳ್ಳುವ ದೇಸಾಯಿ ಮನೆತನದವರು ಹೇಳಿಕೊಳ್ಳುತ್ತಾರೆ.

**ಜಗದೇವಪ್ಪನ ವಂಶಜರ ಮನೆ :**

ಸಿಂದಗಿಯಿಂದ ಎಂಟ್ಹತ್ತು ಕಿ.ಮೀ. ದೂರದಲ್ಲಿರುವ ಬಬಲೇಶ್ವರ ಎಂಬ ಗ್ರಾಮದಲ್ಲಿ ಜಗದೇವಪ್ಪನ ತಂದೆ ಗುರುಬಸಪ್ಪ (ಗುರುರಾವ) ದೇಸಾಯಿ ಅವರು ಜೀವಂತ ಸಮಾಧಿಯಾದರೆಂದು ಹೇಳುವ ಸ್ಮಾರಕ ಇದೆ. ಈ ಸಮಾಧಿ ಇರುವ ಸ್ಥಳದ ಅಂಗಳದಲ್ಲಿ ಒಂದು ದೊಡ್ಡ ಗವಿ ಇರುವುದೆಂದು ಹೇಳುತ್ತಾರೆ. ಆದರೆ ಅದನ್ನು ಈಗ ಮುಚ್ಚಲಾಗಿದೆ. ಗವಿಗೆ ಇರುವ ಕಂಪೌಂಡನ ಪಶ್ಚಿಮದ ಹೊರಮಗ್ಗಲು ಒಂದು ಗವಿಯ ಬಾಗಿಲು ಕಾಣಿಸುತ್ತದೆ. ಅದು ಪುನಃ ಸಮಾಧಿ ಅಂಗಳದ ಒಳಗಡೆಯೇ ಗವಿ ಇರುವುದರ ಸೂಚನೆಯಾಗಿದೆ. ಸಮಾಧಿಯ ಪೂರ್ವದಿಕ್ಕಿನ ಸ್ಥಳದಲ್ಲಿ ಒಂದು ಹಳೆಯ ಅಷ್ಟಪೈಲ್ (ಆರು ಮೂಲಿಯ) ಬಾವಿ ಇದೆ. ಶರಣರಾದ ಇವರು ಅಷ್ಟಾವರಣದ ಸಂಕೇತವಾಗಿ ಹೀಗೆ ರಚಿಸಿರಬಹುದೆನ್ನಲಾಗುತ್ತದೆ. ಬಾವಿಗೆ ನಾಲ್ಕು ಕಡೆ ಬಾಗಿಲುಗಳಿದ್ದು, ಒಂದು ಬಾಗಿಲಿನಿಂದ ಗವಿಗೆ ಬರಲು ದಾರಿ ಇದೆ ಎನ್ನುತ್ತಾರೆ. ಇದೆಲ್ಲವನ್ನು ಗಮನಿಸಿದರೆ, ಜಗದೇವಪ್ಪನ ವಂಶಜರು ಶರಣ ಸಂಪ್ರದಾಯಕ್ಕೆ ಸೇರಿದವರಾಗಿದ್ದರು ಎನಿಸುತ್ತದೆ.

ಗುರುಬಸಪ್ಪ ದೇಸಾಯಿ ಅವರ ಕಿರಿಯ ಸಹೋದರ ಶಾಂತಪ್ಪ ದೇಸಾಯಿ ಅವರ ಜೀವಂತ ಸಮಾಧಿ ಸಿಂದಗಿಯ ಹಿರೇಮಠದ ಆವರಣದಲ್ಲಿದೆ ಎಂದು ಹೇಳುತ್ತಾರೆ. ಸಿಂದಗಿಯಲ್ಲಿ ಜನ ಅವರನ್ನು ಶಾಂತಯ್ಯಮುತ್ಯಾ ಎಂದು ಕರೆಯುತ್ತಾರೆ. ಬಸವ ಜಯಂತಿಯಂದು ದೇಸಾಯಿ ಮನೆತನದವರು ಬಬಲೇಶ್ವರದಲ್ಲಿ ಗುರುಬಸವಪ್ಪನವರ ಜಾತ್ರೆಯನ್ನು ಮಾಡುತ್ತಾರೆ. ಅನ್ನ ಸಂತರ್ಪಣೆ ಇರುತ್ತದೆ. ಭಜನೆ ಹಚ್ಚಿರುತ್ತಾರೆ.

**ಜಗದೇವಪ್ಪನ ವಂಶಜರ ವಿವರಣೆ :**

ಜಗದೇವಪ್ಪನ ವಂಶಜರು ಹೇಳಿಕೊಳ್ಳುವಂತೆ ಜಗದೇವಪ್ಪ ಮತ್ತು ಮೊಲ್ಲೆಬೊಮ್ಮಯ್ಯ ಇವರು ಸಹೋದರರು. ಮಧುವರಸ ಮತ್ತು ಹರಳಯ್ಯ ಅವರಿಗೆ ಎಳೆಹೂಟೆ ಶಿಕ್ಷೆಯಾದ ನಂತರ, ಮನೆಯಲ್ಲಿ ತಾಯಿ ಸೋಮವ್ವೆ ಶರಣರಿಗೆ ಅನ್ಯಾಯವಾಗಿ ಎಳೆಹೂಟೆ ಶಿಕ್ಷೆಯಾಗಿರುವುದನ್ನು ಕೇಳಿ ತಿಳಿದುಕೊಳ್ಳುತ್ತಾಳೆ. ಯಾವುದೇ ತಪ್ಪು ಮಾಡದ ಶರಣರಿಗೆ ಈ ರೀತಿ ಶಿಕ್ಷೆ ಆಗುವಾಗ ನೀವು ಸುಮ್ಮನಿದ್ದರೆ ಹೇಗೆ? ಎಂದು ತಮ್ಮ ಮಕ್ಕಳನ್ನು ಜರಿಯುತ್ತಾಳೆ. ಶರಣರಿಗೆ ಆದ ಅನ್ಯಾಯದ ಸೇಡು ತೀರಿಸಿಕೊಳ್ಳಲು, ಬಿಜ್ಜಳನ ಕೊಲೆಗೈಯ್ಯುವಂತೆ ಮಕ್ಕಳನ್ನು ಪ್ರೇರೇಪಿಸುತ್ತಾಳೆ.

ವಿಶ್ರಾಂತ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ–೫೮೫೧೦೬ ಮೊ : ೯೪೪೮೭೭೪೯೧

ಅಲ್ಲಿಯವರೆಗೆ ಮಕ್ಕಳು ನಾಯಿಯಂತೆ ನೆಲದ ಮೇಲೆ ಹಾಕಿದ ಆಹಾರ ತಿನ್ನಬೇಕೆಂದು ಹೇಳುತ್ತಾಳೆ.

ತಾಯಿಯ ಈ ಮಾತುಗಳನ್ನು ಕೇಳಿದ ಜಗದೇವಪ್ಪ–ಮೊಲ್ಲೆಬೊಮ್ಮಯ್ಯ ಅವರು ರೋಷದಿಂದ ಏಳುತ್ತಾರೆ. ಊಟದ ಪರ್ಯಾಣವನ್ನು (ತಾಟು) ಒಗೆದು, ಟೊಂಕಕ್ಕೆ ಕಟ್ಟಿದ ಉಡದಾರವನ್ನು ಕಡಿದು ಮನೆಯ ಮುಂದಿನ ಬೇಲಿಗೆ ಹಾಕಿ, ಬಿಜ್ಜಳನ ಕೊಲೆ ಮಾಡುವ ಪಣತೊಟ್ಟು ಅಲ್ಲಿಂದ ಹೊರಡುತ್ತಾರೆ. ಇಂದಿಗೂ ಬಬಲೇಶ್ವರ ಮತ್ತು ಆಲಮೇಲದಲ್ಲಿರುವ ದೇಸಾಯರ ಮನೆತನದಲ್ಲಿ ಉಡದಾರ ಕಟ್ಟಿಕೊಳ್ಳುವ ರೂಢಿ ಇಲ್ಲವಂತೆ. ಜಗದೇವಪ್ಪ ಮತ್ತು ಮೊಲ್ಲೆಬೊಮ್ಮಯ್ಯ ಅವರು ಬಿಜ್ಜಳನಲ್ಲಿ ಕಾವಲುಗಾರರಂತೆ ಸೇರಿ, ದೀವಟಿಗೆ ಹಿಡಿಯುವವರಾಗಿ, ಅರಸ ಬಿಜ್ಜಳನನ್ನು ಕೊಲೆಗೈಯುತ್ತಾರೆ. ಕಲ್ಯಾಣದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗುತ್ತದೆ.

ಜಗದೇವಪ್ಪನು ಸಿಂದಗಿ ತಾಲೂಕಿನ ಬಬಲೇಶ್ವರ ಎಂಬ ಗ್ರಾಮಕ್ಕೆ ಬರುತ್ತಾನೆ. ಬಬಲಾದ, ಆಲಮೇಲ ಮತ್ತು ಘುತ್ತರಗಿ ಎಂಬ ಗ್ರಾಮಗಳಲ್ಲಿ ದೇಸಗತಿಗಳನ್ನು ಸಂಪಾದಿಸಿಕೊಳ್ಳುತ್ತಾನೆ. ಮತ್ತೆ ಸಾವಿರಾರು ಎಕರೆ ಜಮೀನು ಗಳಿಸುತ್ತಾನೆ. ಆದರೆ ಮೊಲ್ಲಿಬೊಮ್ಮ ಏನಾದನೆಂದು ತಿಳಿದುಬರುವುದಿಲ್ಲ. ಈಗ ಬಬಲೇಶ್ವರದಲ್ಲಿರುವ ಜಗದೇವಪ್ಪನ ವಂಶಜರಾದ ದೇಸಾಯರ ಮನೆತನವರು ಹೇಳಿಕೊಳ್ಳುವ ಮೌಖಿಕ ಸಂಗತಿ ಇಷ್ಟು. ಇದರಲ್ಲಿ ನಡುಗನ್ನಡ ಕಾವ್ಯಗಳು ಹೇಳುವ ಕೆಲ ಸಂಗತಿಗಳೂ ಬೆರೆತುಕೊಂಡಿವೆ.

**ಹೆಳವರ ಬರಹ :**

ಈ ಎಲ್ಲ ಮೇಲಿನ ವಿಷಯಗಳಿಗೆ ಸಾಕ್ಷಿಯಾಗಿ ಹೆಳವರು ಬರೆದಿಡುವ ಒಂದು ದಾಖಲೆ ನಮಗೆ ದೊರೆಯುತ್ತದೆ. ಸಿಂದಗಿ–ಆಲಮೇಲ ಊರುಗಳ ನಡುವೆ ಇರುವ ಕಲ್ಲೂರ ಎಂಬ ಗ್ರಾಮದಲ್ಲಿ ಪರಪ್ಪ ಹೆಳವರ ಅವರ ಹತ್ತಿರ ಇರುವ ಕೈಬರಹದ ಹೊತ್ತಿಗೆಯೊಂದು ಜಗದೇವಪ್ಪ ಅವರ ಮನೆತನದ ವಂಶಾವಳಿಯನ್ನು ಹೇಳುತ್ತದೆ. ಈ ಪರಪ್ಪ ಹೆಳವರ ಅವರನ್ನು ಕಾಣಲು ನಾವು ಹೋದಾಗ (ದಿನಾಂಕ: ೨–೯–೨೦೧೨) ಅವರು ಶಿವಾಧೀನರಾದ ವಿಷಯ ತಿಳಿದುಬಂದಿತು. ನಂತರ ಅವರ ಮನೆಯಲ್ಲಿರುವ ಈ ವಂಶಾವಳಿಯನ್ನು ತರಿಸಿಕೊಂಡು ಪರಿಶೀಲಿಸಿದಾಗ, ಅದರಲ್ಲಿ ಜಗದೇವ ಮತ್ತು ಬೊಮಯ್ಯ ಎಂಬ ಹೆಸರುಗಳು ದಾಖಲಾಗಿರುವುದು ಕಂಡುಬಂದಿತು. ಬೊಮ್ಮಣ್ಣ ಅಥವಾ ಬೊಮ್ಮಯ್ಯನ ಹಿಂದೆ 'ಮೊಲ್ಲೆ' ಎಂಬ ಪದ ಹೆಳವರ ದಾಖಲೆಯಲ್ಲಿ ಇಲ್ಲ. ಇದೊಂದು ಗಮನಾರ್ಹ ಸಂಗತಿಯಾಗಿದೆ.

ಜಗದೇವ ಮತ್ತು ಬೊಮ್ಮಯ್ಯ ಇವರ ತಂದೆ ಗುರುಬಸಪ್ಪ. ಇವರಿಗೆ ಜಗದೇವಪ್ಪ, ಹಿರಿಯಬೊಮ್ಮಣ್ಣ, ಕಿರಿಯಜಗದೇವಪ್ಪ, ಕಿರಿಯಬೊಮ್ಮಣ್ಣ ಎಂಬ ಹೆಸರಿನ ನಾಲ್ಕು ಜನ ಮಕ್ಕಳು ಇರುವುದು ಹೆಳವರ ದಾಖಲೆಯಲ್ಲಿ ನಮೂದಾಗಿದೆ. ಈ ದೇಸಾಯರ ಮನೆತನದಲ್ಲಿ ಜಗದೇವ, ಬೊಮ್ಮಯ್ಯ ಎಂಬ ಹೆಸರುಗಳನ್ನು ಇಡುತ್ತ ಬಂದಿರುವುದು ಕಾಣುತ್ತದೆ. ಈಗಲೂ ಒಬ್ಬರ ಹೆಸರು ಜಗದೇವಪ್ಪ ಎಂದಿದೆ.

**ಅನುಮಾನಗಳು :**

ಜಗದೇವಪ್ಪ ಮತ್ತು ಮೊಲ್ಲೆಬೊಮ್ಮಯ್ಯ ಇಬ್ಬರೂ ಸಹೋದರರೆ? ಅಲ್ಲವೆ? ಎಂಬುದು ಒಂದು ಪ್ರಶ್ನೆಯಾಗಿ ಉಳಿಯುತ್ತದೆ. ಏಕೆಂದರೆ ಹೆಳವರ ದಾಖಲೆಯಲ್ಲಿ ಮೊಲ್ಲೆಬೊಮ್ಮಯ್ಯ ಎಂದಿರದೆ ಕೇವಲ ಬೊಮ್ಮಣ್ಣ ಎಂದಿರುವುದು ಅನುಮಾನಕ್ಕೆ ಆಸ್ಪದ ಮಾಡಿಕೊಡುತ್ತದೆ. ಇನ್ನೊಂದು ಮಹತ್ವದ ಸಂಗತಿ ಎಂದರೆ ಜಗದೇವಪ್ಪನ ವಂಶಜರು ಹೇಳುವಂತೆ ಮೊಲ್ಲೆಬೊಮ್ಮಯ್ಯ ಜಗದೇವಪ್ಪನ ಸಹೋದರ. ಬಿಜ್ಜಳನ ಕೊಲೆಯ ನಂತರ ಜಗದೇವಪ್ಪ ತನ್ನ ಗ್ರಾಮವಾದ ಬಬಲಾದಕ್ಕೆ ಬಂದನೆಂದರೆ ಜಗದೇವನ ಜೊತೆ ಮೊಲ್ಲೆಬೊಮ್ಮಯ್ಯ ಬಬಲೇಶ್ವರಕ್ಕೆ ಏಕೆ ಬರಲಿಲ್ಲ? ಎಂಬ ಸಂಗತಿ ಉಳಿದುಕೊಳ್ಳುತ್ತದೆ.

ಆದರೆ ಕಲ್ಯಾಣ ಕ್ರಾಂತಿಯ ನಂತರ ಜಗದೇವಪ್ಪ ಬಬಲೇಶ್ವರಕ್ಕೆ ಬಂದಂತಿಲ್ಲ. ಅವನು ಬಂದಿದ್ದರೆ ಬಬಲೇಶ್ವರದಲ್ಲಿ ಅವನ ಸಮಾಧಿಯಾದರೂ ಇರಬೇಕಾಗಿತ್ತು. ಅದೂ ಬಬಲೇಶ್ವರದಲ್ಲಿ ಕಾಣುತ್ತಿಲ್ಲ. ಜಗದೇವಪ್ಪ ಹಾಗೂ ಮೊಲ್ಲೆಬೊಮ್ಮ ಇಬ್ಬರ ಗುರುತುಗಳೂ ಅಲ್ಲಿ ಇಲ್ಲ.

**ನಡುಗನ್ನಡ ಕಾವ್ಯಗಳ ವಿವರಣೆ :**

ಬಿಜ್ಜಳನನ್ನು ಕೊಲೆಗೈದವರು ಜಗದೇವ ಮತ್ತು ಮೊಲ್ಲೆಬೊಮ್ಮಯ್ಯ ಎಂಬ ಸಂಗತಿಗಳನ್ನು ನಡುಗನ್ನಡ ಕಾವ್ಯಗಳು ಉಳಿಸಿಕೊಂಡು ಬಂದಿವೆ. ಕೆಲ ಕೃತಿಗಳು ಜಗದೇವಪ್ಪನ ಹೆಸರನ್ನು ಮಾತ್ರ ಉಲ್ಲೇಖಿಸಿದರೆ, ಕೆಲವು ಜಗದೇವಪ್ಪ ಮತ್ತು ಮೊಲ್ಲೆಬೊಮ್ಮಯ್ಯ ಇಬ್ಬರ ಹೆಸರುಗಳನ್ನೂ ಉಲ್ಲೇಖಿಸುತ್ತವೆ.

ಪಾಲ್ಕುರಿಕೆ ಸೋಮನಾಥನ ತೆಲುಗು 'ಬಸವ ಪುರಾಣ' ಹೇಳುವಂತೆ ಜಗದೇವಪ್ಪ ಬಿಜ್ಜಳನ ಒಬ್ಬ ಮಂತ್ರಿಯಾಗಿದ್ದು, ಬಸವಣ್ಣನವರ ಅನುಯಾಯಿಯಾಗಿದ್ದ. 'ಮೊಲ್ಲೆಬೊಮ್ಮಯ್ಯಗಳ ಕಾವ್ಯ' ಹೇಳುವಂತೆ ಶರಣ ಮೊಲ್ಲೆಬೊಮ್ಮಯ್ಯ ಈಗಿನ ಕೊಪ್ಪಳ ಜಿಲ್ಲೆಯ ರ್‍ಯಾವಣಕಿಯಿಂದ ಕಲ್ಯಾಣಕ್ಕೆ ಬಂದ ಒಬ್ಬ ಶರಣ. ಈತ ಜಗದೇವಪ್ಪನ ಸ್ನೇಹ ಪಡೆದಿರುವಂತೆ ತೋರುತ್ತದೆ.

ಪಾಲ್ಕುರಿಕೆ ಸೋಮನಾಥನು ಹೇಳುವಂತೆ ಜಗದೇವಪ್ಪ ಮಂತ್ರಿಯೇ ಆಗಿರುವುದರಿಂದ ಬಿಜ್ಜಳನ ಸಭಾಭವನ ಪ್ರವೇಶಿಸಲು ಅವರಿಗೆ ಯಾವ ಅಡಚಣೆಯೂ ಆಗಲಿಲ್ಲವೆಂದು ತೋರುತ್ತದೆ. ಮನೆಗೆ ಬಂದ ಜಗದೇವಪ್ಪ ತಾಯಿಗೆ ಬಿಜ್ಜಳನ ಕೊಲೆಯ ಸಮಾಚಾರವನ್ನು ತಿಳಿಸಿ, ತಾನು ತನ್ನ ಕತ್ತಿಯಿಂದಲೇ ತನ್ನ ಕುತ್ತಿಗೆಯನ್ನು ಕೊಯ್ದುಕೊಂಡು ಸಾವನ್ನಪ್ಪುತ್ತಾನೆ. ನಂತರ ಬಿಜ್ಜಳನ ಸೈನಿಕರು, ಜಗದೇವಪ್ಪನ ಮನೆಯವರನ್ನೆಲ್ಲ ಕೊಲೆಗೈಯ್ದಂತೆ ತೋರುತ್ತದೆ. (ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ, ಪು. ೪೭೩–೪೭೫). ಹೀಗಾಗಿಯೇ ಜಗದೇವಪ್ಪನ ಸ್ವಂತ ಗ್ರಾಮವಾದ ಬಬಲೇಶ್ವರದಲ್ಲಾಗಲಿ ಅಥವಾ ಮೊಲ್ಲೆಬೊಮ್ಮಯ್ಯನ ಗ್ರಾಮವಾದ ರ್‍ಯಾವಣಕಿಯಲ್ಲಾಗಲೀ ಜಗದೇವಪ್ಪನ ಸಮಾಧಿಯಾಗಲೀ ಮತ್ತಿತರ ಸಂಗತಿಗಳಾಗಲಿ ದೊರೆಯುತ್ತಿಲ್ಲವೆಂದು ತೋರುತ್ತದೆ.

'ಮೊಲ್ಲೆಬೊಮ್ಮಯ್ಯಗಳ ಕಾವ್ಯ' ಎಂಬ ಒಂದು ಕಾವ್ಯ ನಮಗೆ ದೊರೆಯುತ್ತದೆ. ಅದರ ಪ್ರಕಾರ ಮೊಲ್ಲಿಬೊಮ್ಮಯ್ಯ ಈಗಿನ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ರ್‍ಯಾವಣಕಿ ಎಂಬ ಗ್ರಾಮದವನು. ಬೊಮ್ಮಗೌಡ ಕಲ್ಲಮ್ಮ ತಾಯಿ–ತಂದೆಗಳು. ಮುಂದೆ ಶಿವನ ಅಪ್ಪಣೆಯ ಮೇರೆಗೆ ಮೊಲ್ಲಿಬೊಮ್ಮಯ್ಯ ಕಲ್ಯಾಣಕ್ಕೆ ಬಂದು ಜಗದೇವನನ್ನು ಕಂಡನು. ಹರಳಯ್ಯ ಮಧುವಯ್ಯಗಳ ಎಳೆಹೂಟೆ ಆದ ನಂತರ ಜಗದೇವಪ್ಪ ಮನೆಗೆ ಬರಲು, 'ತಾಯಿ ಶಿವಭಕ್ತರ ಕೊಂದವರ ಕೊಲ್ಲದೆ ಇರಬಾರದು' ಎಂದಳು. ಜಗದೇವ ಮೂರುವರೆ ತಿಂಗಳಲ್ಲಿ ದ್ರೋಹಿಗಳನ್ನು ಕೊಲ್ಲುವುದಾಗಿ ಪಣತೊಟ್ಟನು. 'ಅಲ್ಲಿಯವರೆಗೆ ನಾಯಿಯಂತೆ ತಿನ್ನು' ಎಂದು ತಾಯಿ ಅವನಿಗೆ ನೆಲದ ಮೇಲೆ ಉಣಬಡಿಸುತ್ತಿದ್ದಳು. ಮೊಲ್ಲಿಬೊಬ್ಬನು ಸ್ನೇಹಿತನಾದ ಜಗದೇವನ ಜೊತೆಗೂಡುವುದಾಗಿ ಹೇಳಿ, ತಾನೂ ನೆಲದ ಮೇಲೆಯೇ ಉಣ್ಣುವುದಾಗಿ ಹೇಳಿದನು. ಜಗದೇವಪ್ಪನ ತಾಯಿ ಇಬ್ಬರಿಗೂ ನೆಲದ ಮೇಲೆ ಉಣಬಡಿಸುತ್ತಿದ್ದಳು. ಬಿಜ್ಜಳನ ಆಸ್ಥಾನದಲ್ಲಿ ದೀವಟಿಗೆ ಹಿಡಿಯುವವರಾಗಿ ಸೇವೆಗೆ ಸೇರಿದರು. ದೀವಟಿಗೆಯಲ್ಲಿ ಖಡ್ಗಗಳನ್ನು ಬಚ್ಚಿಟ್ಟುಕೊಂಡು, ಒಂದು ದಿನ ಸಾಧಿಸಿ, ಖಡ್ಗದಿಂದ ಬಿಜ್ಜಳನನ್ನು ಕೊಲೆಗೈದರು. ಇದು ಕಾವ್ಯ ಹೇಳುವ ಕಥೆ.

**ರ್‍ಯಾವಣಕಿ, ಕಲ್ಲೂರಗಳಲ್ಲಿರುವ ಸಂಗತಿಗಳು :**

ರ್‍ಯಾವಣಕಿ ಸಮೀಪದ ಕಲ್ಲೂರಿನಲ್ಲಿ ಕಲ್ಲೇಶ್ವರ ದೇವಸ್ಥಾನದ ಗರ್ಭಗುಡಿಯ ಎಡಬಲದಲ್ಲಿ ಜಗದೇವ ಮೊಲ್ಲೆಬೊಮ್ಮಯ್ಯ ಎಂಬ ಹೆಸರಿನ ಎರಡು ಲಿಂಗಗಳು ಪೂಜೆಗೊಳ್ಳುತ್ತಿದ್ದು, ಅವು ಅವರಿಬ್ಬರ ಸಮಾಧಿಗಳೆಂದು ಜನ ನಂಬಿದ್ದಾರೆ. ಆದರೆ ಅವು ಅವರ ಸಮಾಧಿಗಳಲ್ಲ. ಅವರ ಸ್ಮರಣೆಗಾಗಿ ಸ್ಥಾಪಿಸಿದ ಶಿವಲಿಂಗಗಳಾಗಿವೆ. ಮೊಲ್ಲೆಬೊಮ್ಮಯ್ಯಗಳ ಸಮಾಧಿ ಅವರ ಹುಟ್ಟೂರಾದ ರ್‍ಯಾವಣಕಿಯ ಕಲ್ಲೇಶ್ವರ ದೇವಸ್ಥಾನದ ಹಿಂದೆ ತೋರಿಸುತ್ತಾರೆ. ಅಲ್ಲದೆ ರ್‍ಯಾವಣಕಿ ಗ್ರಾಮದ ಹಿರೇಮಠ ಮನೆತನದಲ್ಲಿ ಜಗದೇವ ಮಲ್ಲಿಬೊಮ್ಮ ಅವರು ಬಿಜ್ಜಳನ ಕೊಲೆಗೆ ಬಳಸಿದ ಖಡ್ಗಗಳು ಎಂದು ಹೇಳುವ ಎರಡು ಖಡ್ಗಗಳು ಇದ್ದು, ಅವು ಅವರ ಮನೆಯ ಜಗಲಿಯ ಮೇಲೆ ಪೂಜೆಗೊಳ್ಳುತ್ತಿವೆ.

ತೆಲುಗು 'ಬಸವ ಪುರಾಣ' ಹಾಗೂ 'ಮೊಲ್ಲೆಬೊಮ್ಮಯ್ಯಗಳ ಕಾವ್ಯ' ಜಗದೇವ ಮೊಲ್ಲಿಬೊಮ್ಮರು ಕಲ್ಯಾಣದಲ್ಲಿಯೇ ಭೇಟಿಯಾದ ಬಗ್ಗೆ ಹೇಳುತ್ತಿರುವುದನ್ನು ಗಮನಿಸಿದರೆ ಮೊಲ್ಲೆಬೊಮ್ಮಯ್ಯ ಜಗದೇವಪ್ಪನ ಸಹೋದರನಲ್ಲ ಎನಿಸುತ್ತದೆ. ಹೆಳವರ ದಾಖಲೆಯಲ್ಲಿ ಕಾಣುವ ಜಗದೇವನ ಕಿರಿಯ ಸಹೋದರ 'ಬೊಮ್ಮಣ' ಬಿಜ್ಜಳನ ಕೊಲೆಯಲ್ಲಿ ಭಾಗಿಯಾದ 'ಮೊಲ್ಲೆಬೊಮ್ಮಯ್ಯ' ಇಬ್ಬರೂ ಬೇರೆ ಬೇರೆ ವ್ಯಕ್ತಿಗಳಾಗಿದ್ದಾರೆ. ಹೀಗಾಗಿ ಜಗದೇವಪ್ಪ ಬಬಲೇಶ್ವರದ ಕುಟುಂಬಕ್ಕೆ ಸಂಬಂಧಿಸಿದವನಾಗಿದ್ದು, ಮೊಲ್ಲೆಬೊಮ್ಮಯ್ಯ ರ್‍ಯಾವಣಕಿ ಗ್ರಾಮದ ಕುಟುಂಬಕ್ಕೆ ಸಂಬಂಧಿಸಿದವನು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

**ಬಿಜ್ಜಳನನ್ನು ಕೊಲೆ ಮಾಡಿದವರು ಈ ಶರಣರೇ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಾಗುತ್ತಿಲ್ಲ ಎಂಬ ಸಂಗತಿ ಅನೇಕ ಸಂಶೋಧಕರ ಚರ್ಚೆಗಳಿಂದ ಗೊತ್ತಾಗುತ್ತದೆ. ಬಿಜ್ಜಳನನ್ನು ಸಿಂಹಾಸನದಿಂದ ಕೆಳಗಿಳಿಸಿದವರು ಅವರ ಮಕ್ಕಳು. ಅವರ ಕೌಟುಂಬಿಕ ವಲಯದಲ್ಲಿಯೇ ಬಿಜ್ಜಳನ ಬಗೆಗೆ ಉತ್ತಮ ಬಾಂಧವ್ಯಗಳು ಇರಲಿಲ್ಲವೆಂಬುದು ಸ್ಪಷ್ಟ. ಹೀಗಾಗಿ ಬಿಜ್ಜಳನ ಅಂತ್ಯದಲ್ಲಿ ಅವರ ಕುಟುಂಬದವರ, ಸಂಬಂಧಿಗಳ ಪಾಲು ಇರಲು ಸಾಧ್ಯವಿದೆ. ಈ ಬಗೆಗೆ ಇನ್ನೂ ಹೆಚ್ಚಿನ ಶೋಧಗಳು ನಡೆಯಬೇಕು.**

**ಸಹಾಯಕ ಗ್ರಂಥಗಳು :**


೧. ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ, ಅನು. ಪಿ.ವಿ.ನಾರಾಯಣ, –ತರಳಬಾಳು ಪ್ರಕಾಶನ, ಸಿರಿಗೆರೆ, ೧೯೮೨.

೨. ಮೊಲ್ಲೆಬೊಮ್ಮಯ್ಯಗಳ ಕಾವ್ಯ, ಸಂ. ಬಿ. ವಿ. ಶಿರೂರ, ಜ.ತೋಂಟದಾರ್ಯಮಠ, ಗದಗ, ೧೯೮೭.


■■

# ನಿರಾಕಾರ ಲಿಂಗವನರಿದವಂಗೆ ಸಾಕಾರ ಲಿಂಗದ ಹಂಗೇಕೆ?

● ವೆಂಕಟೇಶ ಕೆ. ಜನಾದ್ರಿ

"ಒಲುಮೆಯ ಕೂಟಕ್ಕೆ ಹಾಸಿಗೆಯ ಹಂಗೇಕೆ?" ಎಂದು ಅಲ್ಲಮರು ಇಷ್ಟಲಿಂಗದ ಕುರಿತಾಗಿ ಚರ್ಚೆಯನ್ನು ಹುಟ್ಟುಹಾಕಿದ್ದ ಸಂದರ್ಭದಲ್ಲಿಯೇ ಶರಣ ನುಲಿಯ ಚಂದಯ್ಯನವರು ಕಾಯಕ ನಿರತರಾದಾಗ ಅವರ ಕೊರಳಲ್ಲಿಯ ಇಷ್ಟಲಿಂಗ ಕಳಚಿ ಬೀಳುತ್ತದೆ. ಆ ಇಷ್ಟಲಿಂಗವನ್ನು ಮತ್ತೇ ಪಡೆಯಲು ಚೆಂದಯ್ಯ ನಿರಾಕರಿಸುತ್ತಾರೆ. ಇಷ್ಟಲಿಂಗ ತಾನಾಗಿಯೇ ಕೆಳಗೆ ಬಿದ್ದಿದೆ ಅದನ್ನು ತೆಗೆದುಕೊಳ್ಳುವ ಅವಶ್ಯಕತೆ ನನಗೆ ಇಲ್ಲವೆನ್ನುತ್ತಾರೆ. ಹಾಗೆಂದು ಮತ್ತೇ ತಾವು ಕಾಯಕನಿರತರಾಗುತ್ತಾರೆ. ಅವರಿಗೆ ಇಷ್ಟಲಿಂಗಕ್ಕಿಂತ ಕಾಯಕ ಮುಖ್ಯವಾಗುತ್ತದೆ ಇಲ್ಲಿ ಸಾಧಕನಿಗೆ ತನ್ನೊಳಗೇ ಇರುವ ನಿರಾಕಾರ ದೇವನೊಬ್ಬನೇ ಸಾಕು, ಬೇರೆ ಸಾಕಾರ ಲಿಂಗದ ಅವಶ್ಯಕತೆ ಇದೆಯೇ? ಎಂಬ ಪ್ರಶ್ನೆ ಸಹಜವಾಗುತ್ತದೆ.

ಈ ಸಂದರ್ಭದಲ್ಲಿ ಚೆಂದಯ್ಯನವರು ಕೆಳಗೆ ಬಿದ್ದ ತಮ್ಮ ಕೊರಳ ಇಷ್ಟಲಿಂಗವನ್ನು ಎತ್ತಿಕೊಳ್ಳದೇ ತಮ್ಮ ಕಾಯಕದಲ್ಲಿ ಮುನ್ನಡೆದಾಗ ಆ ಇಷ್ಟಲಿಂಗ ಇವರ ಬೆನ್ನತ್ತಿ ಬರುತ್ತದೆ ಎಂಬ ಜನಪದ ಕತೆಯೊಂದಿದೆ. ಹಾಗೆ ಬಂದ ಲಿಂಗಕ್ಕೆ ಕಾಯಕ ಮಾಡಲು ಇವರು ತಿಳಿಸುವುದು ಈ ಎಲ್ಲಾ ಪ್ರಸಂಗ ಬಹುಶಃ ತಮಗೆಲ್ಲಾ ತಿಳಿದಿದೆ. ಈ ಇಷ್ಟಲಿಂಗ ನಿರಾಕರಣೆಯ ಸಂದರ್ಭ ಮತ್ತೇ ಅನುಭವ ಮಂಟಪದಲ್ಲಿ ಚರ್ಚೆಯಾಗುತ್ತದೆ. "ನಿರಾಕಾರ ಲಿಂಗವನ್ನನುಭವಿಸಿದ ನನಗೆ ಸಾಕಾರ ಲಿಂಗದ ಅವಶ್ಯಕತೆ ಇಲ್ಲ" ಎಂದು ಚೆಂದಯ್ಯ ವಾದಿಸುತ್ತಾರೆ, ಆಗ ಮಡಿವಾಳ ಮಾಚಯ್ಯನವರು ಬಹಳ ಮಾರ್ಮಿಕವಾಗಿ "ಸವಿ ಬೇಕು, ಹಣ್ಣು ಬೇಡ" ಎಂದರೆ ಹೇಗೆ? ಚೆಂದಯ್ಯ. ನೀನು ಹಣ್ಣಿನ ಸವಿಯನ್ನು ಸವಿಯಬೇಕಾದರೆ ಹಣ್ಣನ್ನು ಸ್ವೀಕರಿಸಿ ಅದನ್ನು ತಿಂದು ಅನುಭವಿಸಿದಾಗ ಮಾತ್ರ ಸಾಧ್ಯವಲ್ಲವೇ? ಎಂದು ಪ್ರಶ್ನಿಸುತ್ತಾರೆ. ಇಲ್ಲಿ ಹಣ್ಣು ಸಾಕಾರ ರೂಪವಾದ ಇಷ್ಟಲಿಂಗವಾದರೆ ಅದರ ಸವಿ ನಿರಾಕಾರವಾದ ಒಳಗಿನ ಅರಿವು ಆಗಿದೆ. ಇಲ್ಲಿ ಹಣ್ಣು ಮತ್ತು ಸವಿ ಕೂಡಿರುವಂತೆ, ಸಾಕಾರವಾದ ಇಷ್ಟಲಿಂಗ ಮತ್ತು ನಿರಾಕಾರದ ಅರಿವು ಒಂದರೊಳಗೊಂದೊಡಗೂಡಿಯೇ ಇರುತ್ತವೆ. ಈ ಎರಡಳಿದು ಒಂದಾಗುವುದೇ ದೇವರನ್ನು ಅಂದರೆ ಲಿಂಗಭಾವವನ್ನನುಭವಿಸುವುದರ ಪ್ರತೀಕವಾಗಿದೆ.

ಹೀಗೆ ಅಂಗದೊಳಗಿನ ಲಿಂಗತತ್ವ ಅರಿಯಲು ಇಷ್ಟಲಿಂಗವೆಂಬುದು ಹಣ್ಣು, ಒಳಗಿನ ಅರಿವು, ಜೀವಾತ್ಮ, ದೇವ, ಲಿಂಗತತ್ವವೆಲ್ಲ ಆ ಹಣ್ಣಿನಲ್ಲಿ ಅಂತರ್ಗತವಾದ ಸವಿ ಇದ್ದಂತೆ ಎಂದು ಇಷ್ಟಲಿಂಗದ ಮಹತ್ವವನ್ನು ನಿರೂಪಿಸಿ, ಇಷ್ಟಲಿಂಗ ಬೇಡ ಭಾವಲಿಂಗವೇ ಸಾಕು ಎಂಬುದು ನಿನ್ನ ಭ್ರಮೆಯಾಗಿದೆ, ನಿರಾಕಾರವಾದ ದೇವರನ್ನು ಅನುಭಾವಿಸಲು ಸಾಕಾರವಾದ ಇಷ್ಟಲಿಂಗವೆಂಬ ಕುರುಹು ಅವಶ್ಯವೆನ್ನುತ್ತಾರೆ. ಹೀಗೆ ಮಡಿವಾಳ ಮಾಚಯ್ಯನವರು ಪ್ರತಿಪಾದಿಸಿದ ಇಷ್ಟಲಿಂಗದ ಅವಶ್ಯಕತೆಯ ಕುರಿತು ಮನವರಿಕೆ ಮಾಡಿದಾಗ್ಯೂ ನುಲಿಯ ಚೆಂದಯ್ಯನವರ ನಿಲುವು ವಿಭಿನ್ನವಾಗಿಯೇ ಉಳಿಯುತ್ತದೆ. ಅವರು "ನಿರಾಕಾರ ಲಿಂಗವನರಿದವಂಗೆ ಸಾಕಾರ ಲಿಂಗದ ಹಂಗೇಕೆ?" ಎಂಬ ದೃಢ ನಿರ್ಧಾರವನ್ನೇ ತಾಳುತ್ತಾರೆ. ಈ ಕುರಿತು ಇಂದಿಗೂ ಇಷ್ಟ ಲಿಂಗವುಳ್ಳವರದ್ದೊಂದು ಧೋರಣೆಯಾದರೆ, ಇಷ್ಟಲಿಂಗವಿಲ್ಲದೇ ಭಾವಲಿಂಗವನ್ನಳವಡಿಸಿಕೊಂಡವರದ್ದೊಂದು ವಿಶಿಷ್ಠ ಬಗೆಯ ಧೋರಣೆ ಇರುತ್ತದೆ. ಇರಲಿ. ಅನುಭಾವಿಕ ನೆಲೆಯಲ್ಲಿ ಸಂವಾದಿತಗೊಳ್ಳಬೇಕಾದರೆ ಇವೆಲ್ಲ ಅವಶ್ಯಕ.

ಬಸವಾದಿ ಪ್ರಮಥರಲ್ಲಿಯೇ ವಿಶಿಷ್ಠ ಶರಣರೆನಿಸಿಕೊಂಡಿರುವ ನುಲಿಯ ಚೆಂದಯ್ಯನವರು ಒಂದರ್ಥದಲ್ಲಿ ಸಾಕಾರಲಿಂಗವನ್ನು ಸಾರಾಸಗಟಾಗಿ ನಿರಾಕರಿಸಿಬಿಡುತ್ತಾರೆ. ಅದಕ್ಕೆ ಕಾರಣ ಅವರ ಮನದೊಳಗೇ ನಿರಾಕಾರ ಲಿಂಗವನ್ನು ದೃಢವಾಗಿ ಅನುಷ್ಠಾನಗೊಳಿಸಿಕೊಂಡಿರುವ ಭದ್ರ ಭಾವವೇ ಇರಬಹುದು. ಕ್ರಿ. ಶ. ೧೧೬೦ ಇವರ ಕಾಲವಾಗಿದೆ. ಇಂದಿನ ಬಿಜಾಪುರ ಜಿಲ್ಲೆಯ ಶಿವಣಗಿ ಎಂಬ ಗ್ರಾಮದಲ್ಲಿ ಜನಿಸಿರುವ ಇವರು ಹಲವಾರು ವಚನಗಳ ರಚನೆ ಮಾಡಿರುವ ಸಾಧ್ಯತೆಗಳಿವೆಯಾದರೂ ಇಂದು ಅಧ್ಯಯನಕ್ಕೆ ಲಭ್ಯವಿರುವುದು ಕೇವಲ ೪೮ ವಚನಗಳು. ಇವೆಲ್ಲವೂ

ಲೆಕ್ಕಪತ್ರ ಅಧೀಕ್ಷಕ, ಈಕರಸಾ.ಸಂಸ್ಥೆ , ಕೇಂದ್ರ ಕಛೇರಿ, ಕಲಬುರ್ಗಿ-೫೮೫೧೦೨ ಮೊ: ೯೯೪೫೩೩೦೪೯೨

ಮೌಲ್ಯಾಧಾರಿತವಾದವುಗಳೇ ಆಗಿವೆ. "ಚಂದೇಶ್ವರ ಲಿಂಗ" ಎಂಬ ವಚನಾಂಕಿತದಲ್ಲಿ ಸೃಜನಗೊಂಡಿರುವ ಇವರೆಲ್ಲ ವಚನಗಳಲ್ಲಿ ಕಾಯಕ ನಿಷ್ಠೆಯ ಪ್ರತಿಪಾದನೆಯೇ ಇದೆ. ಇಷ್ಟಲಿಂಗ ಪೂಜೆಗಿಂತ ಕಾಯಕ ಪೂಜೆಯಲ್ಲಿಯೇ ನಿರತರಾಗಿ, ಕಾಯಕ ಪೂಜೆಯೇ ಇವರ ಇಷ್ಟಲಿಂಗ ಪೂಜೆಯಾಗಿದೆ. ಕಾಯಕದ ವಿಷಯ ಬಂದಾಗ ಇಷ್ಟಲಿಂಗವನ್ನು ನಿರಾಕರಿಸಿಬಿಡುವಷ್ಟು ದೃಢ ಮನಸ್ಥಿತಿ ಇವರದ್ದು. ನೂಲಿನಿಂದ ಹಗ್ಗ ಹೊಸೆದು ಹಗ್ಗ ಮತ್ತು ಹಗ್ಗದಿಂದ ಮಾಡಿದ ಕೃಷಿ ಪರಿಕರಗಳನ್ನು ಮಾರುವುದೇ ಇವರ ಕಾಯಕವಾಗಿತ್ತು. ಆ ಕಾರಣಕ್ಕಾಗಿ ಇವರಿಗೆ "ನುಲಿಯ ಚೆಂದಯ್ಯ" ಎಂಬ ಹೆಸರು.

ಅಂದಿನ ಕೃಷಿ ಕಾಯಕಕ್ಕೆ ಮತ್ತು ದೈನಂದಿನ ಬಳಕೆಗೆ ತೀರಾ ಅವಶ್ಯವಾಗಿದ್ದ ಈ ಹಗ್ಗಗಳನ್ನು ಬಹಳ ಭಕ್ತಿ ಭಾವದಲ್ಲಿ ಸಿದ್ದಪಡಿಸಿ ಮಾರುತ್ತಿದ್ದ ಇವರ ಕಾಯಕಕ್ಕೆ ಎಲ್ಲಿಲ್ಲದ ಮೌಲ್ಯವಿತ್ತು. ಇವರ ಹಗ್ಗಗಳನ್ನು ಕೊಂಡು ಕಾಯಕ ಮಾಡಿದರೆ ಅವೆಲ್ಲವೂ ಸತ್ಪಾತ್ರಕ್ಕೆ ಸಲ್ಲಿಕೆಯಾಗುತ್ತದೆ ಎಂಬ ಭಾವ ಜನಮಾನಸದಲ್ಲಿತ್ತು. ಅಷ್ಟೊಂದು ಭಕ್ತಿಯ ಕಾಯಕ ಇವರದ್ದು.

"ಜಂಗಮ ನಮಸ್ಕಾರವೇ ಗುರುಪೂಜೆ, ಜಂಗಮ ಪೂಜೆಯೆ ಲಿಂಗಪೂಜೆ, ಜಂಗಮ ತೃಪ್ತಿಯೆ ತನಗೆ ಪ್ರಸನ್ನ ತನಗೆ ಪ್ರಸನ್ನವಾದುದೆ ನಿತ್ಯಪ್ರಸಾದವಾಗಿ, ಚೆನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ ಕಟ್ಟುಗೊತ್ತು ಕಾಣಾ ಸಂಗನ ಬಸವಣ್ಣಪ್ರಭುವೆ" ಎಂಬ ವಚನದಲ್ಲಿ ಜಂಗಮತ್ವದ ಮಹತ್ವ ಅದರ ವ್ಯಾಪ್ತಿಯನ್ನು ಚೆಂದಯ್ಯನವರು ಹಿಗ್ಗಿಸಿದ್ದಾರೆ. ಗುರುವಿನ ಪೂಜೆ ಎಂದರೆ ನಮಗೆ ಅರಿವು ನೀಡಿದ ಜಂಗಮಕ್ಕೆ ನಮಿಸುವುದೇ ಆಗಿದೆ, ಜಂಗಮ ಪೂಜೆ ಎಂದರೆ ಅಂಗಮಯವಾಗಿದ್ದ ಭೌತಿಕ ಶರೀರದಲ್ಲಿ ಲಿಂಗಗುಣವಳವಟ್ಟು ಅಂಗವೇ ಲಿಂಗವಾದ ಲಿಂಗಕ್ಕೆ ಪೂಜೆ ಮಾಡಿದಂತೆಯೇ ಹೀಗಾಗಿ ಜಂಗಮ ತೃಪ್ತಿಯಾಗಿ ಪ್ರಸನ್ನನಾದರೆ ಅದೇ ಶರಣನಿಗೆ ನಿತ್ಯ ಪ್ರಸಾದವೆನ್ನುತ್ತಾರೆ. ಹೀಗೆ ಸತ್ಯ ಶುದ್ಧ ಕಾಯಕದಿಂದ ಪಡೆದ ಪ್ರಸಾದ ಜಂಗಮಕ್ಕೆ ದಾಸೋಹ ಮಾಡಿ ತಾನೂ ಪ್ರಸಾದ ಪಡೆದು ಸಂತೃಪ್ತಿ ಪಡೆಯುವುದೇ ನಿಜವಾದ ಚಂದೇಶ್ವರ ಲಿಂಗಕ್ಕೆ ಅರ್ಪಿಸುವ ನಿತ್ಯ ಪ್ರಸಾದವೆನ್ನುತ್ತಾರೆ. ಇಲ್ಲಿ ದೇವಪೂಜೆಯನ್ನು ಸರಳೀಕರಿಸಿದ್ದಾರೆ. ಅಂದಿನ ಶರಣರೆಲ್ಲ ಈ ನಿಲುವನ್ನು ಹೊಂದಿದವರಾಗಿದ್ದರು.

"ಜಲಚರಕೇಕೆ ತೆಪ್ಪದ ಹಂಗು? ವಿಹಂಗಗೇಕೆ ಅಡಿವಜ್ಜಿಯ ಮೆಟ್ಟು? ಮಧುರ ರಸಕ್ಕೇಕೆ ಮೇಲಪ್ಪ ಸಿಹಿ? ಕಲ್ಪವೃಕ್ಷಕ್ಕೇಕೆ ಕಾಲದ ಹಂಗು? ದಾಸೋಹವನರಿದು ಮಾಡುವಂಗೆ ಇನ್ನೇತರ ಪೂಜೆ ಪುಣ್ಯ? ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ ಎಡೆದೆರಪಿಲ್ಲ." ಇಲ್ಲಿ ಜಂಗಮತ್ವದ ವ್ಯಾಪ್ತಿ, ಮಹತ್ವ ತಿಳಿಸುತ್ತಲೇ ಇಷ್ಟಲಿಂಗದೊರತುಪಡಿಸಿ ಇನ್ನಿತರ ಆಡಂಬರದ ಪೂಜೆಯ ಅವಶ್ಯಕತೆ ಇಲ್ಲವೆನ್ನುವುದನ್ನು ಬಿಂಬಿಸುತ್ತಾರೆ. ಸದಾ ನೀರಲ್ಲಿರುವ ಜೀವಿಗಳಿಗೆ ತೆಪ್ಪದ ಅವಶ್ಯಕತೆಯೇ? ಗಗನವಿಹಾರಿಗಳಿಗೆ ಮೆಟ್ಟಿಲುಗಳೇಕೆ? ಸವಿಯಾದ ಜೇನಿಗೆ ಮತ್ತೇಕೆ ಬೇರೆ ಸಕ್ಕರೆಯಂಥ ಸಿಹಿ? ಸಕಲವನ್ನು ಬೇಕೆಂದಾಗ ಕೊಡುವ ಕಲ್ಪವೃಕ್ಷಕ್ಕೆ ಕಾಲನ ಹಂಗೇಕೆ? ಎನ್ನುವಂತೆ ತನ್ನ ಪರಿಶುದ್ಧವಾದ ಕಾಯಕದಿಂದ ಬಂದ ಪ್ರಸಾದದಲ್ಲಿ ಸತ್ಪಾತ್ರಕ್ಕೆ ಸಲ್ಲುವಂತೆ ದಾಸೋಹ ಮಾಡುವಾತನಿಗೇಕೆ ಇನ್ನಿತರ ಪೂಜೆ? ಎನ್ನುತ್ತಾರೆ. ಅಂಥ ಪೂಜೆಯ ಪುಣ್ಯವೂ ಆತನಿಗೆ ಬೇಕಿಲ್ಲ.

ಸಾಕಾರ ಇಷ್ಟಲಿಂಗದ ಪೂಜೆಯ ಕುರಿತಾಗಿಯೂ ಚೆಂದಯ್ಯನವರು ಅಷ್ಟೊಂದು ಒಲವನ್ನು ತೋರಿಸರು. ಕೊರಡೂ ಕೊನರುವಂತೆ ತನ್ನೊಳಗೇ ಇರುವ ಅರಿವು ಮತ್ತು ಕಾಯಕ–ಪ್ರಸಾದ–ದಾಸೋಹಗಳೆಂಬ ಲಿಂಗಗುಣದಲ್ಲಿ ಇಷ್ಟಲಿಂಗವನ್ನು ಕಂಡುಕೊಂಡಾಗ ಮತ್ತೊಂದು ಸಾಕಾರ ಲಿಂಗ ಬೇಕೆ? ಎಂಬ ಪ್ರಶ್ನೆಯೂ ಅವರದ್ದು. ಸಮಯವನ್ನು ನೋಡಿಕೊಳ್ಳಲು ಗಡಿಯಾರದ ಅವಶ್ಯಕತೆ ಇರಬಹುದು, ಆದರೆ ಗಡಿಯಾರವೇ ಸಮಯವಲ್ಲ. ಸಮಯದ ಅಸ್ತಿತ್ವಕ್ಕೆ ಗಡಿಯಾರದ ಅವಶ್ಯಕತೆ ಇಲ್ಲ. ಗಡಿಯಾರ ಇಲ್ಲದೆಯೂ ಸಮಯ ತನ್ನ ಚಲನಶೀಲತೆಯನ್ನು ಹೊಂದಿರುತ್ತದೆ. ಇಲ್ಲಿ ಗಡಿಯಾರ ಸಮಯ ತೋರಲೊಂದು ಸಾಧನವಷ್ಟೇ, ಈ ಗಡಿಯಾರವೆಂಬ ಸಾಧನವಿಲ್ಲದೇ ಸಾಧನೆ ಮಾಡಿ ಸಮಯವನ್ನು ಅರಿಯಬಹುದೆಂಬುದು ಚೆಂದಯ್ಯನವರ ಸಿದ್ಧಾಂತ.

"ಲಿಂಗ ಹೋಯಿತ್ತೆಂಬ ಸಂದೇಹ ಉಂಟಾಯಿತ್ತಾದಡೆ, ಅಂಗ ಉಳಿಯಬಲ್ಲುದೆ? ಆತ್ಮ ಹೋದಲ್ಲಿ ಘಟ ಎಷ್ಟು ದಿನ ಉಳಿಯುವುದು? ಚಂದೇಶ್ವರಲಿಂಗಕ್ಕೆ ಸಂದಿಲ್ಲ, ಮಡಿವಾಳಯ್ಯಾ" ಚರಲಿಂಗ ಹೋದರೆ ಆತ್ಮ ಲಿಂಗ ಇದ್ದೇ ಇರುತ್ತದೆಯಲ್ಲವೆಂಬ ವಾದ ನುಲಿಯ ಚೆಂದಯ್ಯನದ್ದು. ಮಡಿವಾಳ ಮಾಚಿದೇವರೊಂದಿಗೆ ವಿಭಿನ್ನ ಮಾದರಿಯಲ್ಲಿ ಈ ಚರ್ಚೆ ನಡೆಯುತ್ತದೆ. ಇಷ್ಟಲಿಂಗವೆಂಬುದು ಭೌತಿಕ ಲಿಂಗ ಅದು ಹೋದರೆ ಲಿಂಗ ತತ್ವ ಹೋಗುತ್ತದೆಯೇ? ಹಾಗೆಯೇ ಈ ಭೌತಿಕ ಅಂಗ ಒಂದು ದಿನ ಇಲ್ಲವಾಗುತ್ತದೆ. ಆದರೆ ಅಂಗದೊಂದಿಗೆ ಇರುವ ಆತ್ಮವೆಂಬ ಲಿಂಗತತ್ವ ಅಳಿಯುತ್ತದೆಯೇ? ಲಿಂಗತತ್ವದ ಅಸ್ತಿತ್ವಕ್ಕೆ ಅಂಗವೆಂಬುದೊಂದು ಸಾಧನವಾಗಿದೆ. ಹಾಗಾಗಿ ನಿರಾಕಾರ ದೇವನನ್ನರಿಯಲು ಸಾಕಾರವಾದ ಇಷ್ಟಲಿಂಗವೆಂಬುದೊಂದು ಸಾಧನವಷ್ಟೇ ಇದನ್ನು ಅರಿಯಬೇಕೆನ್ನುತ್ತಾರೆ ಚೆಂದಯ್ಯನವರು.

ಕೆಲವರು ಇಷ್ಟಲಿಂಗ ಹೋಯಿತೆಂದರೆ ತಾವೇ ಇಲ್ಲವೇನೋ ಎಂಬಂತೆ ತಲ್ಲಣವಾಗುತ್ತಾರೆ ಹಾಗೆ ಭಾವಿಸಬಾರದು. ಆದರೆ ಆತ್ಮಲಿಂಗ ಹೋದರೆ ಈ ಶರೀರ ಉಳಿಯದು ಅದಕ್ಕಾಗಿ ಆತ್ಮಲಿಂಗ ಅಂದರೆ ಅಂಗದೊಳಗಿನ ಲಿಂಗಗುಣ ಪ್ರಮುಖವಾದದ್ದು, ಮನುಷ್ಯರೊಳಗಿರುವ ಜೀವಾತ್ಮಕ್ಕೆ ಆತನ ಅಂಗವೊಂದು ಸಾಧನ ಎನ್ನುವುದು ಇವರ ನಿಲುವು. ನನ್ನೊಳಗಿರುವ ಲಿಂಗಯ್ಯನೇ ಸಾಕು, ನನ್ನ ಕೊರಳ ಲಿಂಗಯ್ಯ ಹೋದರೆ ಹೋಗಲಿ ಬಿಡಿ ಎನ್ನುತ್ತಾರೆ. ಈ ಧೈರ್ಯ ಬರಬೇಕಾದರೆ ಅವರೊಳಗಿನ ಆಂತರ್ಯದ ಲಿಂಗಯ್ಯನನ್ನು ಅವರು ಅರಿತುಕೊಂಡಿದ್ದರು. ಹೀಗೆ ವಿಶಿಷ್ಠ ಬಗೆಯಲ್ಲಿ ಅವರು ನಿರಾಕಾರ ಲಿಂಗಯ್ಯನನ್ನು ಕಂಡುಕೊಂಡಿದ್ದರು.

"ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತ ವಿಚ್ಛಂದವಾಗದಿರಬೇಕು, ನೇಮದ ಕೂಲಿಯಿಂದಿನ ನಿತ್ಯ ನೇಮದಲ್ಲಿ ಸಂದಿಲ್ಲದಿರಬೇಕು. ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದಡೆ ತಾ ಮಾಡುವ ಸೇವೆ ನಷ್ಟವಯ್ಯಾ, ನಿನ್ನಾಸೆಯ ವೇಷದ ಪಾಶಕ್ಕೆ ನೀನೆ ಹೋಗು, ನನಗೆ ನಮ್ಮ ಜಂಗಮದ ಪ್ರಸಾದದಾಗೆ ಚಂದೇಶ್ವರಲಿಂಗಕ್ಕೆ ಪ್ರಾಣವಯ್ಯ" ಎಂದು ತಮ್ಮ ಕೊರಳ ಲಿಂಗಯ್ಯ ಜಾರಿ ಬಿದ್ದು ಮತ್ತೇ ತಮ್ಮ ಹಿಂದೆ ಬಂದಾಗ ಹಗ್ಗ ಮಾಡಿ ಮಾರಿಕೊಂಡು ಬರಲು ತಿಳಿಸುತ್ತಾರೆ. ಹಾಗೆ ಹಗ್ಗ ಮಾರಿ ವಾಸ್ತವಕ್ಕಿಂತಲೂ ಹೆಚ್ಚಿನ ಹಣ ತಂದಾಗ ನೇಮದ ಕೂಲಿ ಬಿಟ್ಟು ಹೇಮದ ಆಶೆಗೆ ಮಾಡಿದ ನಿನ್ನ ಸೇವೆ ನಷ್ಟವೇ ಸರಿ. ಅದು ಎಂದಿಗೂ ಸತ್ಪಾತ್ರಕ್ಕೆ ಸಲ್ಲಿಕೆಯಾಗದು. "ನನ್ನ ಜೊತೆ ಇರಬೇಡ ನೀ ಹೋಗು" ಎನ್ನುತ್ತಾರೆ ನಿಷ್ಠುರವಾಗಿ. ದೇವರೇ ಆಗಲಿ ಕಾಯಕ–ಪ್ರಸಾದ–ದಾಸೋಹಕ್ಕೆ ಬದ್ದರಾಗಿರಬೇಕು. ಸರಳತೆ ಇರಬೇಕು. ಪರಧನಕ್ಕೆರಗಬಾರದೆಂಬುದನ್ನು ನಿಷ್ಠುರವಾಗಿ ಲಿಂಗಯ್ಯನಿಗೆ ಹೇಳುತ್ತಾರೆ. "ಬುದ್ಧಿ ಕೆಟ್ಟಿದಿಯಾ ಲಿಂಗಯ್ಯಾ? ಕಾಯಕಕ್ಕೆ ಸಮನಾದ ಕೂಲಿಯನ್ನು ಕೊಳ್ಳಬೇಕಲ್ಲದೆ ದುರಾಶಾಪರರಾಗಿ ಮಿಗಿಲಾದ ದ್ರವ್ಯಕ್ಕಾಶಿಸಿದರೆ ಮಾಡುವ ಕಾಯಕದ ಪಾವಿತ್ರ್ಯ ಉಳಿಯಬಲ್ಲದು ಹೇಗೆ?" ಎನ್ನುವಂಥ ಇವರ ಮಾತಿನಲ್ಲಿ ಅದೆಂಥಹ ನೈತಿಕ ಎಚ್ಚರದ ಮಾತುಗಳಿವೆ ಎಂಬುದನ್ನು ಗಮನಿಸಬೇಕಿದೆ.

ಇಂದಿನ ಕೆಲವು ಅಧಿಕಾರಿಗಳು, ಧನದಾಹಿ ರಾಜಕಾರಣಿಗಳು, ಸ್ವಾರ್ಥಿಗಳು, ಭ್ರಷ್ಠರು, ಸೋಮಾರಿಗಳು ಹಾಗೂ ವಂಚಕರಿಗೆ ಇದೊಂದು ಪಾಠವಾಗಬೇಕು, ಅಷ್ಟೇ ಅಲ್ಲ ಇವರ ನಿಲುವು ಆದರ್ಶವಾಗಬೇಕಿದೆ. ಹೀಗೆ ಸಾಕ್ಷಾತ್ ಶಿವನಿಂದಲೇ ಕಾಯಕ ಮಾಡಿಸಿದ ದಿಟ್ಟ ಶರಣರಿವರು. ಹುಲ್ಲನ್ನು ಕೊಯ್ದು ಹೊಸೆದು ಹಗ್ಗ ಮಾಡಿ ಕಣ್ಣಿ ಮತ್ತಿತರ ಪರಿಕರಗಳನ್ನಾಗಿಸಿ ರೈತರಿಗೆ ಮಾರಿ ಬಂದ ಫಲದಿಂದ ತನ್ನ ಉದರವನ್ನಷ್ಟೇ ಪೋಷಿಸಿಕೊಳ್ಳದೇ ಗುರು–ಜಂಗಮರಿಗೆ ದಾಸೋಹಿಸಿ ಲಿಂಗಾನಂದವನ್ನು ಹೊಂದಿದ್ದ ಲಿಂಗಾನುಭಾವಿ ಶರಣರಿವರು. ಇವರಿಗೆ ಇಂಥ ಸೇವೆಯೇ ನಿಜವಾದ ಶಿವಪೂಜೆಯಾಗಿತ್ತು.

ಇಂಥ ಅನುಭಾವಿಕ ನೆಲೆಯಲ್ಲಿ ತಮ್ಮ ಅನುಭವದಿಂದಲೇ ವಚನಗಳನ್ನು ಸೃಜಿಸಿದ ಚೆಂದಯ್ಯನವರು ಮುಂದುವರೆದು, "ಗುರುಪೂಜಕರು ಲಿಂಗವನೆತ್ತ ಬಲ್ಲರು? ಲಿಂಗಪೂಜಕರು ಜಂಗಮವನೆತ್ತ ಬಲ್ಲರು? ಜಂಗಮ–ದಾಸೋಹವೆಂಬುದು ಉಭಯದ ಸಂಗನಾಸ್ತಿ; ಚಂದೇಶ್ವಲಿಂಗವೆಂಬ ಲಿಂಗದ ಪೂಜೆ." ಇಲ್ಲಿ ಲಿಂಗ–ಜಂಗಮದ ಸಾರವರಿಯಬೇಕಿದೆ. ದಾಸೋಹವೇ ಪೂಜೆಯೆಂಬ ಭಾವವನ್ನು ತೋರಿಸಿದ್ದಾರೆ. "ಕಾಶಿಯ ಕಾಯಿ ಕಾಡಿನ ಸೊಪ್ಪಾಯಿತ್ತಾದಡೂ ಕಾಯಕದಿಂದ ಬಂದುದು ಲಿಂಗಾರ್ಪಿತ. ಚೆನ್ನಬಸವಣ್ಣಪ್ರಿಯ ಚೆಂದೇಶ್ವರಲಿಂಗಕ್ಕೆ ನೈವೇದ್ಯ ಸಂದಿತ್ತು" ಎನ್ನುವ ಮೂಲಕ ಸಾಮಾನ್ಯವಾದ ಕಾರೆಯ ಸೊಪ್ಪೇ ಆಗಿರಲಿ ಶುದ್ಧ ಕಾಯಕದಿಂದಲೇ ಬಂದಿದ್ದನ್ನು ದಾಸೋಹ ಮಾಡಬೇಕೆನ್ನುತ್ತಾರೆ. ಪರಿಶುದ್ಧವಾದ ಕಾಯಕದ ಪ್ರತಿಫಲ ಮಾತ್ರ ಪ್ರಸಾದವಾಗುತ್ತದೆ. ಅಂಥ ಪ್ರಸಾದ ಮಾತ್ರವೇ ದಾಸೋಹಕ್ಕೆ ಯೋಗ್ಯವೆನ್ನುತ್ತರೆ.

"ಇಷ್ಟಲಿಂಗ ಗುರುವಿನ ಹಂಗು, ಚಿತ್ತ ಕಾಮನ ಹಂಗು, ಪೂಜೆ–ಪುಣ್ಯ ಮಹಾದೇವನ ಹಂಗು, ಎನ್ನ ದಾಸೋಹ ಆರ ಹಂಗೂ ಇಲ್ಲ. ಚೆನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವೆ, ಕಣ್ಣಿಯ ಮಾಡಬಲ್ಲಡೆ ಬಾ, ಎನ್ನ ತಂದೆ." ಇಲ್ಲಿಯು ವಿಚಾರವನ್ನೊಮ್ಮೆ ಸೂಕ್ಷ್ಮವಾಗಿ ಅವಲೋಕಿಸಿದಾಗ, ನಾವು ಕೇವಲ ಇಷ್ಟಲಿಂಗ ಪೂಜೆ ಮಾಡಿಕೊಂಡೇ ಸಾಧಿಸುತ್ತೇವೆಂದರೆ ಆ ಇಷ್ಟಲಿಂಗ ಕೊಡುವಾತ ಗುರು ಆ ಗುರುವಿನ ಹಂಗಿನಲ್ಲಿರಬೇಕಾಗುತ್ತದೆ. ಇಷ್ಟಲಿಂಗ ಪೂಜೆ ಮಾಡಿಕೊಳ್ಳುವಾಗ ಚಿತ್ತ ಕೇಂದ್ರೀಕರಿಸಬೇಕಾದಾಗ ಅದು ನಮ್ಮ ಕಾಮನ ನಿಯಂತ್ರಣದಲ್ಲಿರುವ ಕಾರಣ ಕಾಮನ ಹಂಗು, ಪೂಜೆಯ ಪುಣ್ಯ ನಿರೀಕ್ಷಿಸುವುದೆಂದರೆ ಅದು ಮಹಾದೇವನ ಹಂಗು ಆಗುತ್ತದೆ. ಹಾಗಾಗಿ ನಾನು ಕಾಯಕ ಮತ್ತು ದಾಸೋಹವನ್ನೇ ನಂಬಿಕೊಂಡಾಗ ಕಾಯಕದಿಂದ ಪಡೆದ ಪ್ರಸಾದ ನನ್ನದೇ ಆಗಿರುವುದರಿಂದ ಅದನ್ನು ದಾಸೋಹ ಮಾಡುವಾಗ ಆ ದಾಸೋಹಕ್ಕೆ ಯಾರ ಹಂಗೂ ಅಲ್ಲ. ಇಂಥ ಕಾಯಕ ದಾಸೋಹವನ್ನೇ ನಾನು ಪೂಜೆಯೆಂದುಕೊಂಡಿರುವೆ. ನೀನೂ ಕಣ್ಣಿಯ ಕಾಯಕ

ಮಾಡುವುದಾದರೆ ಬಾ ಎನ್ನ ತಂದೆ ಎಂದು ಕಾಯಕ ಮಾಡಲು ಲಿಂಗಕ್ಕೆ ಹೇಳುತ್ತಾರೆ.

"ಒಲುಮೆಯ ಕೂಟಕ್ಕೆ ಹಾಸಿಗೆಯ ಹಂಗೇಕೆ?"..ಎಂಬ ಅಲ್ಲಮರ ನಿಲುವಿನಂತೆ ನಿರಾಕಾರ ಲಿಂಗವನ್ನು ತನ್ನಲ್ಲಿ ಇಂಬಿಟ್ಟುಕೊಂಡಾತನಿಗೆ ಮತ್ತೊಂದು ಸಾಕಾರ ಲಿಂಗದ್ದಂಗೇಕೆ? ಎನ್ನುತ್ತಾರೆ. "ನಡೆನುಡಿ ಶುದ್ಧವಾಗಿಲ್ಲದಿದ್ದರೆ ಚಂದೇಶ್ವರ ಲಿಂಗವಾದರೂ ತಪ್ಪನೊಳಕೊಳ್ಳ ಕಾಣಾ ಮಡಿವಾಳ ಮಾಚಯ್ಯ" ಎಂಬಲ್ಲಿ ದೇವರಿಗೂ ನುಡಿದಂತೆ ನಡೆಯಲು ಹೇಳಿಕೊಟ್ಟ ದಿಟ್ಟತನವನ್ನಿಲ್ಲಿ ಕಾಣುತ್ತೇವೆ. ಮಡಿವಾಳ ಮಾಚಯ್ಯನವರು ಇಷ್ಟಲಿಂಗದ ಪ್ರತಿಪಾದನೆ ಮಾಡಿದರೂ ಸಹ ವಿನಯದಿಂದಲೇ ವಿಭಿನ್ನವಾದ ಅಭಿಪ್ರಾಯವನ್ನು ಮಂಡಿಸಿ ಎಲ್ಲರನ್ನೂ ಬೆರಗುಗೊಳಿಸುತ್ತಾರೆ ಚಂದಯ್ಯನವರು.

ಕಲ್ಯಾಣಕ್ರಾಂತಿಯ ಫಲಶ್ರುತಿಯಾಗಿ ವಚನಗಳ ಜೊತೆಗೆ ವಿವಿಧ ಶರಣರು ವಿಧವಿಧವಾದ ಸ್ಥಳಗಳಿಗೆ ತೆರಳುತ್ತಾರೆ. ಅವರಿಗೆ ತಮ್ಮ ಜೀವಕ್ಕಿಂತ ತಮ್ಮ ಜೀವದುಸಿರಾಗಿರುವ ವಚನಗಳನ್ನುಳಿಸಿಕೊಳ್ಳಬೇಕೆಂಬ ತಲ್ಲಣ ತವಕವಿತ್ತು. ಹಾಗೆ ನುಲಿಯ ಚೆಂದಯ್ಯನವರೂ ಸಹ ಅಕ್ಕನಾಗಮ್ಮನವರ ಗುಂಪನ್ನು ಕೂಡಿಕೊಳ್ಳುತ್ತಾರೆ. ಅವರಿಗೆ ಬಲಗೈ ಆಗಿ ತಮ್ಮದೇ ನೆಲೆಯಲ್ಲಿ ಹೋರಾಡುತ್ತಾರೆ. ನಂತರ ತುಂಗಾ ತೀರದ ಪ್ರದೇಶದಲ್ಲಿ ಅನುಭಾವಿಸುತ್ತಾ ಈಗಿನ ತರೀಕೆರೆಯ ಸಮೀಪದ ಎಣ್ಣೆಹೊಳೆ ಎಂಬ ಊರಿಗೆ ಬಂದು ಶರಣಧರ್ಮದ ಪುನಶ್ಚೇತನಕ್ಕೆ ಶ್ರಮಿಸುತ್ತಾರೆ. ಕಾಲಾನಂತರ ಚೆಂದಯ್ಯನವರೂ ಎಣ್ಣೆ ಹೊಳೆಯಲ್ಲಿ ಬಹುಕಾಲವಿರದೆ ಧರ್ಮಜಾಗೃತಿ ಮಾಡುತ್ತಲೇ ಅಮೃತಾಪುರ ಎಂಬ ಹೋಬಳಿಯ ನಂದಿಗ್ರಾಮಕ್ಕೆ ಬಂದು ನೆಲೆಸಿ ಅಲ್ಲಿ ತಮ್ಮ ಜೋಳಿಗೆ ಬೆತ್ತಗಳನ್ನು ಬಿಟ್ಟು ಮುಂದೆ ಕಲ್ಲುಹತ್ತಿಗಿರಿಗೆ ಹೊರಡುತ್ತಾರೆ.

ಮುಂದೆ ಕ್ರಿ. ಶ. ೧೧೮೨ರಲ್ಲಿ ಪದ್ಮಾವತಿ ಎಂಬ ಊರಿಗೆ ಬರುತ್ತಾರೆ. ಅಲ್ಲಿ ಅನುಭಾವಿಕ ನೆಲೆಯಲ್ಲಿ ಸಾಧನೆ ಮಾಡುತ್ತಲೇ ಈಗಿನ ಹೊಳಲ್ಕೆರೆ ತಾಲ್ಲೂಕಿನ "ನುಲೇನೂರು"ಎಂಬ ಊರಲ್ಲಿ ಲಿಂಗೈಕ್ಯರಾಗುತ್ತಾರೆಂಬುದು ಪ್ರತೀತಿ. ಈ ಊರಲ್ಲಿ ಚೆಂದಯ್ಯನವರ ಹೆಸರಿನಲ್ಲಿ ಒಂದು ಭಾವಿಯೂ ಇದೆ. ಬಸವಕಲ್ಯಾಣದಲ್ಲಿ ನುಲಿಯ ಚಂದಯ್ಯನವರ ಗುಹೆಯೊಂದಿದೆ. ಇವೆಲ್ಲ ಅವರಿಗೆ ಸಂಬಂಧಿಸಿದ ಭೌತಿಕ ಪಳೆಯುಳಿಕೆಗಳು. ಇವೆಲ್ಲಕ್ಕಿಂತ ಇವರ ಅನುಭಾವಿಕ ನೆಲೆಯಲ್ಲಿ ಮಂಡಿಸಿದ ವಿಚಾರಗಳನ್ನು ಮತ್ತಿವರ ಇನ್ನಷ್ಟು ವಚನಗಳನ್ನು ಶೋಧಿಸಬೇಕಾದ ಅಗತ್ಯವಿದೆ. ಇಲ್ಲವಾದರೆ ನುಲಿಯ ಚೆಂದಯ್ಯನಂಥ ಅನೇಕ ಶರಣರ ವಿಚಾರಗಳು ಬಯಲಾಗದೇ ಅಕ್ಷರಶಃ ಲಿಂಗೈಕ್ಯವಾಗಿಬಿಡುತ್ತವೆ.

ನುಲಿಯ ಚೆಂದಯ್ಯನ ಲಿಂಗದುಸಿರಿನ ಕನವರಿಕೆಯಂತೆ "ನಿರಾಕಾರಲಿಂಗವನರಿದವಂಗೆ ಸಾಕಾರಲಿಂಗದ ಹಂಗೇಕೆ"? ಎಂದು ಪ್ರಶ್ನಿಸುತ್ತಲೇ ಸಾಕಾರಲಿಂಗಯ್ಯನೇ ತನ್ನೊಳಗೊಂದಾಗಿ ಆತನೇ ನಿರಾಕಾರಲಿಂಗವಾಗಿ ತಾನೇ ಲಿಂಗವಾಗುವ ಮೂಲಕ ತನ್ನೊಳಗೇ ಇರುವ ನಿರಾಕಾರಲಿಂಗದ ಕುರಿತು ಅನುಭಾವಿಸುತ್ತಾರೆ. ಹಾಗೆಯೇ ಇಷ್ಟಲಿಂಗವನ್ನೇ ಮತ್ತೊಂದು ಬಗೆಯ ದೇವರನ್ನಾಗಿಸಿ ಸೀಮಿತಗೊಳಿಸಿಕೊಳ್ಳುವ ಅಪಾಯದಿಂದ ವಿಮುಖವಾಗಿ ಯೋಚಿಸಿ, ಸಾಕಾರವಾದ ಇಷ್ಟಲಿಂಗವನ್ನು ಮತ್ತೇ ಜಗದಗಲ ಮುಗಿಲಗಲ ಮಿಗೆಯಗಲದಿಂದತ್ತತ್ತಲೂ ವಿಸ್ತರಿಸಿಕೊಳ್ಳುತ್ತಲೇ ಕೊರಡೂ ಕೊನರಿಸುತ್ತಾರೆ. ನಿರಾಕಾರ ಲಿಂಗದ ನೆಲೆಯಲ್ಲಿ ತಮ್ಮರಿವನ್ನು ಅಳವಡಿಸಿಕೊಂಡು ಸಕಲ ಜೀವಿಗಳಲ್ಲಿಯೂ ಲೇಸ ಬಯಸುವಂತೆ ನಾವೆಲ್ಲರೂ ವಿಶ್ವಬಂಧುವಾಗಬೇಕಿದೆ.

ಎಲ್ಲಾ ಬಂಧುಗಳಿಗೆ ಅನ್ನವಾಗುವ ರೈತನುಪಯೋಗಿಸುವ ಹಗ್ಗ, ಕಣ್ಣಿ ಮತ್ತೇನೆಲ್ಲ ಪರಿಕರಗಳು ನುಲಿಯ ಚೆಂದಯ್ಯನ ಕಾಯಕದ ಫಲವಾಗಿವೆ ಎಂಬುದನ್ನರಿತು ನಮ್ಮ ಕಾಯಕ ಮತ್ತು ದಾಸೋಹವನ್ನೆಲ್ಲ ಸತ್ಪಾತ್ರಕ್ಕೆ ಸಲ್ಲಿಕೆಯಾಗುವಂಥ ನಡೆಯು ನಮ್ಮದಾದಲ್ಲಿ ನಮ್ಮೊಳಗಣ ಲಿಂಗವೇ ಮೆಚ್ಚಿ ಹೌದಹುದೆನ್ನುತ್ತದೆ. ನಮ್ಮ ನುಡಿ ಮೌನವಾಗಿ, ನಡೆ ದಾಸೋಹವಾಗಬೇಕಿದೆ. ಹಾಗಾದಾಗಲೇ ನಮ್ಮೊಳಗಿನ ಇಷ್ಟಲಿಂಗಕ್ಕೆ ಮೆಚ್ಚುಗೆಯಾಗುತ್ತದೆ. ಅಂಥ ಲಿಂಗಿಗಳಾದವರ ನಡೆಯೇ ವಿಶ್ವಲಿಂಗದ ನಡೆಯಾಗಿ ವಿಶ್ವದ ಲಿಂಗವಾದ ಪರಮಾತ್ಮನೆಂಬ ಲಿಂಗಕ್ಕಾ ನಡೆ ಮೆಚ್ಚುಗೆಯಾಗಿ ವಿಶ್ವಲಿಂಗವೇ ಮೆಚ್ಚಿ ಹೌದಹುದೆನ್ನುವಂತಾಗುತ್ತದೆ.

■■

# ಅಕ್ಕನಾಗಮ್ಮ

● ಡಾ. ಶರಣಮ್ಮ ಗೊರೇಬಾಳ

ಶತಶತಮಾನಗಳಿಂದ ಮೂಕರಾಗಿದ್ದ ಮಹಿಳೆಯರಿಗೆ ಬಾಯಿ ಬಂದದ್ದೇ ೧೨ನೆಯ ಶತಮಾನದಲ್ಲಿ. ಉಸುರುಗಟ್ಟುವ ವಾತಾವರಣದಲ್ಲಿ, ವಾಕ್ ಸ್ವಾತಂತ್ರ್ಯವಿಲ್ಲದೆ ಬದುಕುತ್ತಿದ್ದ ಮಹಿಳೆಯರಿಗೆ ಶಿವಶರಣರು ಅವಕಾಶ ನೀಡಿ ಸಾಮಾಜಿಕ ನ್ಯಾಯದ ಆಧಾರದ ಮೇಲೆ ಸ್ತ್ರೀ ಸಮಾಜವನ್ನೇ ಕಟ್ಟಲು ಹೆಣಗಿದರು. ಸುಮಾರು ೩೫ ಜನ ವಚನಕಾರ್ತಿಯರು ಅಥವಾ ಶಿವಶರಣೆಯರು ಏಕಕಾಲಕ್ಕೆ ಸಾಹಿತ್ಯದ ಕ್ಷಿತಿಜದ ಮೇಲೆ ಕಾಣಿಸಿಕೊಂಡದ್ದು ಪರಮ ಆಶ್ಚರ್ಯ. ಸಮಾಜದಲ್ಲಿ ಕಾಣುವ ಅಸಮಾನತೆ, ಸ್ತ್ರೀ ಶೋಷಣೆ ಕಂಡ ಶರಣರು ಸ್ತ್ರೀ ಪುರುಷ ಭೇದವಿಲ್ಲದ ಉಭಯಪ್ರಧಾನ ಕುಟುಂಬ ಪದ್ಧತಿಯನ್ನೂ ಶ್ರೇಷ್ಠವೆಂದು ಗೌರವಿಸಿದರು. ಹೆಣ್ಣಿಗೆ ಲೌಕಿಕ ಮಾತ್ರವಲ್ಲ, ಪಾರಮಾರ್ಥಿಕ ವಲಯಕ್ಕೂ ಅವಳ ಕಾರ್ಯಕ್ಷೇತ್ರ ವಿಸ್ತರಿಸಿ ಎರಡು ನೆಲೆಯಲ್ಲಿ ಅವಕಾಶಕೊಟ್ಟರು.

ಆತ್ಮಕ್ಕೆ ಲಿಂಗಭೇದವಿಲ್ಲ 'ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಮೀಸೆ ಕಾಸೆ ಬಂದಡೆ ಗಂಡೆಂಬರು, ನಡುವೆ ಸುಳಿವ ಆತ್ಮನು ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥ' ಎಂಬ ಮಾತು, 'ಹೆಣ್ಣು, ಹೊನ್ನು, ಮಣ್ಣು ಮಾಯೆಯೆಂಬರು ಆದರೆ ಮನದ ಮುಂದಣ ಆಶೆಯೇ ಮಾಯೆ' ಎನ್ನುವ ವಿಚಾರ, 'ಹೆಣ್ಣು ಹೆಣ್ಣಲ್ಲ ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಸಾಕ್ಷಾತ್ ಕಪಿಲಸಿದ್ಧಮಲ್ಲಿಕಾರ್ಜುನ' ಎಂದು ಅವಳಲ್ಲಿ ದೇವತ್ವವನ್ನು ಕಂಡುಕೊಂಡರು. ಹೀಗೆ ಹೆಣ್ಣಿಗೆ ಒಂದು ಸ್ಥಾನಮಾನ ಕಲ್ಪಿಸಿಕೊಟ್ಟಾಗ ಅನೇಕ ಮಹಿಳೆಯರು ಸಾಹಿತ್ಯ ಸೃಷ್ಟಿ ಮಾಡಿದರು. ಕೆಲವರು ದಾಂಪತ್ಯದಲ್ಲಿ ಇದ್ದುಕೊಂಡೇ ಅಧ್ಯಾತ್ಮದ–ಅನುಭಾವದ ತುತ್ತ ತುದಿಯನ್ನೇರಿದರು. ಕೆಲವರು ಲೌಕಿಕ ಬಂಧನಗಳನ್ನು ದೂರವಿರಿಸಿದರು.

ಈ ರೀತಿ ಸೃಷ್ಟಿಗೊಂಡ ಶರಣ ಸಾಹಿತ್ಯ ಅಥವಾ ವಚನ ಸಾಹಿತ್ಯವನ್ನು ಅವಲೋಕಿಸಿದಾಗ ಶಿವಶರಣೆಯರು ಬದುಕಿನ ಘಟನೆಗಳು, ಬದುಕಿನ ಮೌಲ್ಯಗಳನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ವಚನ ರಚಿಸಿದ್ದಾರೆ. ವಚನಕಾರ್ತಿಯರು ತಮ್ಮದೇ ಆದ ರೀತಿಯಲ್ಲಿ ಅಸಮಾನತೆಯ ವಿರುದ್ಧ ಅಂಧಾಚರಣೆಗಳ ವಿರುದ್ಧ ಕಿಡಿಕಾರಿದ್ದಾರೆ. ಬದುಕಿನಾಳದಿಂದ ಬಂದ ಇವರ ನುಡಿಗಳೇ ಚಳುವಳಿಗೆ ಪ್ರೇರಕಗಳಾದವು, ಸಿದ್ಧಾಂತಗಳಾದವು, ಸಮಾಜ ವಿಜ್ಞಾನವಾದವು, ಸಾಧಕರಿಗೆ ಅಧ್ಯಾತ್ಮ ಮಾರ್ಗವಾದವು.

ಶಿವಶರಣೆಯರಲ್ಲಿ ವಚನಗಳ ಸಂಖ್ಯೆ ದೃಷ್ಟಿಯಿಂದ, ಪ್ರಚಾರದ ದೃಷ್ಟಿಯಿಂದ ಪ್ರತಿಯೊಬ್ಬರಿಗೂ ಗೊತ್ತಿರುವ ಹೆಸರು ಅಕ್ಕಮಹಾದೇವಿ. ಆದರೆ ಎಲೆಮರೆಯ ಕಾಯಿಯಂತೆ, ಬೆಳಕಿಗೆ ಬಾರದೆ ಇರುವ ಅನೇಕ ಶಿವಶರಣೆಯರಂತೆ ಅಕ್ಕನಾಗಮ್ಮನ ಹೆಸರು ಕೂಡ ಕೇಳಿಬರುವುದಿಲ್ಲ. ಅಕ್ಕನಾಗಮ್ಮನ ೧೫ ವಚನಗಳು ಮಾತ್ರ ದೊರೆತಿವೆ. ಅವಳ ವೈಯಕ್ತಿಕ ಜೀವನ ಕುರಿತಾಗಿಯೂ ಹೆಚ್ಚಿನ ಮಾಹಿತಿ ದೊರಕುವುದಿಲ್ಲ.

ಕ್ರಾಂತಿಕಾರಿ, ಜಗಜ್ಯೋತಿ, ಭಕ್ತಿಭಂಡಾರಿ ಬಸವಣ್ಣನ ಸಹೋದರಿ, ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವಣ್ಣನ ತಾಯಿ ಅಕ್ಕನಾಗಮ್ಮ. ವಿರೂಪಾಕ್ಷ ಪಂಡಿತರ ಚೆನ್ನಬಸವ ಪುರಾಣದಲ್ಲಿ ಹೇಳುವಂತೆ ಮಾದರಸ ಮಾದಲಾಂಬಿಕೆ ವಿಪ್ರ ದಂಪತಿಗಳ ಉದರದಲ್ಲಿ ಪಾರ್ವತಿಯ ಚಿತ್ಕಳೆಯೆ ಉದಿಸಿ ಬಂದಂತೆ ನಾಗಲಾಂಬಿಕೆ ಜನಿಸಿದಳು ಎಂಬ ವಿವರ ದೊರೆಯುತ್ತದೆ. ನಾಗಲಾಂಬಿಕೆ, ಅಕ್ಕನಾಗಮ್ಮ ಎಂಬ ವಿವಿಧ ಹೆಸರುಗಳಿಂದ ಕರೆಯಲ್ಪಡುವ ಈ ಶಿವಶರಣೆ ಬಸವಣ್ಣನವರ ಅಕ್ಕನೆಂತಲೂ, ಬಸವಣ್ಣನವರ ತಂಗಿಯೆಂತಲೂ ಸಾಕಷ್ಟು ಚರ್ಚೆಗಳಿದ್ದರೂ ಅವನ ಸಹೋದರಿಯಾಗಿ, ಪೋಷಕಳಾಗಿ ನಿಂತವಳು.

ಅಕ್ಕನಾಗಮ್ಮನ ಗಂಡ ಶಿವದೇವ, ಬಸವಣ್ಣನವರು ಕಲ್ಯಾಣಕ್ಕೆ ಬಂದು ನೆಲೆಸಿದ ಮೇಲೂ ಅಕ್ಕನಾಗಮ್ಮ ಪತಿಯೊಂದಿಗೆ ಅವರ ಮಹಾಮನೆಯಲ್ಲಿಯೇ ಉಳಿದುಕೊಂಡಿರುವ ವಿಚಾರ ಬರುತ್ತದೆ. ಇಲ್ಲಿ ಬಸವಣ್ಣನವರ ಪರಿವಾರದಲ್ಲಿ ಮುಖ್ಯವಾದವರ ಹೆಸರುಗಳಲ್ಲಿ ಶಿವಸ್ವಾಮಿಯ ಹೆಸರೂ ಒಂದಾಗಿದೆ. ಅಕ್ಕನಾಗಮ್ಮ ಕಪ್ಪಡಿಸಂಗಮಕ್ಕೆ ಬಂದ

ಸಮಯಕ್ಕಾಗಲೆ ಚೆನ್ನಬಸವಣ್ಣನ ಜನನವಾಗಿರಬಹುದೆಂದೂ, ಅಕ್ಕನಾಗಮ್ಮ ಪತಿ ಶಿವಸ್ವಾಮಿ ಮಗು ಚೆನ್ನಬಸವಣ್ಣನೊಂದಿಗೆ ಕಪ್ಪಡಿ ಸಂಗಮಕ್ಕೆ ಬಂದಿರಬಹುದೆಂದೂ, ಶಿವಸ್ವಾಮಿ ಇಂಗಳೇಶ್ವರ ಗ್ರಾಮನಿವಾಸಿ ಆಗಿರಬಹುದೆಂದೂ ಫ. ಗು. ಹಳಕಟ್ಟಿಯವರು ಅಭಿಪ್ರಾಯ ಪಡುತ್ತಾರೆ. ಜನಪದ ಕಥನ ಕಾವ್ಯಗಳಲ್ಲಿ ಪುಣ್ಯಕಥೆಗಳೆನಿಸಿಕೊಳ್ಳುವ ಕೆಲವು ಹಾಡುಗಳಲ್ಲಿ ಅಕ್ಕನಾಗಮ್ಮನ ಪುಣ್ಯಕಥಾನಕವು ಒಂದು.

ಅಕ್ಕನಾಗಮ್ಮನಿಗೆ ಸಂಬಂಧಿಸಿದ ಎರಡು ಬಗೆಯ ಹಾಡುಗಳು ಜನಪದರಲ್ಲಿ ಪ್ರಚಾರದಲ್ಲಿವೆ.

೧) ಪ್ರಸಾದ ಸೇವನೆಯಿಂದ ಗರ್ಭಧಾರಣೆಯಾಯಿತು, ಅಯೋನಿಜನಾಗಿ ಚೆನ್ನಬಸವಣ್ಣ ಜನಿಸಿದ. ಈ ಪ್ರಸಂಗ ಕಲ್ಯಾಣದ ಪರಿಸರದಲ್ಲಿ ನಡೆದಂತೆ ವರ್ಣಿಸುವುದು.

೨) ಇನ್ನೊಂದು ವಿಷಯ, ಅಕ್ಕನಾಗಮ್ಮ ಶಿವದೇವನನ್ನು ಮದುವೆಯಾದದ್ದು, ಅಕ್ಕನಾಗಮ್ಮನ ಒಂದು ವಚನ.

**ಅಂಗದಿಂದುದಯವಾದಾತ ಮಡಿವಾಳಯ್ಯ**
**ಲಿಂಗದಿಂದುದಯವಾದಾತ ರೇವಣಸಿದ್ಧಯ್ಯ**
**ಭಸ್ಮದಿಂದುದಯವಾದಾತ ಸಿದ್ಧರಾಮಯ್ಯ**
**ಪಾದೋದಕದಿಂದುದಯವಾದವಳು ಅಕ್ಕಮಹಾದೇವಿ**
**ಮಂತ್ರದಿಂದುದಯವಾದಾತ ನಿಮ್ಮ ಸೋದರಮಾವ**
**ಬಸವಯ್ಯ, ಪ್ರಸಾದದಿಂದುದಯವಾದಾತ ನೀನಲ್ಲವೇ**
**ಚೆನ್ನಬಸವಯ್ಯ ಬಸವಪ್ರಿಯ ಚೆನ್ನಸಂಗಯ್ಯ**

ಇದನ್ನು ನೋಡಿದಾಗ ಶಿವಶರಣರ ಹುಟ್ಟಿಗೆ ಅಲೌಕಿಕ ಸಂಗತಿಗಳು ಕಂಡುಬರುತ್ತವೆ. ಇನ್ನೊಂದು ಹಾಡಿನಲ್ಲಿ ತಿಳಿಯುವಂತೆ ಮಾದಲಾಂಬಿಕೆಯ ತಮ್ಮ ನೀಲಕಂಠನ ಮಗನಾದ ಶಿವದೇವನ ಜೊತೆ ನಾಗಮ್ಮನ ಬಾಲ್ಯ ವಿವಾಹವಾಗಿದೆ. ಮದುವೆ ದಿನ ಎಲ್ಲವೂ ಸಾಂಗವಾಗಿ ನೆರವೇರಿದೆ. ಅಕ್ಷತೆಯ ಕಾರ್ಯಕ್ರಮವೂ ಮುಗಿದಿದೆ. ಆದರೆ ಆ ನಡುವೆ ಅಕಸ್ಮಾತ್ತಾಗಿ ಬೀಗಬೀಗರಲ್ಲಿ ಕದನ ನಡೆದಿದೆ. ಯಾವುದೋ ಸಣ್ಣ ಕಾರಣಕ್ಕಾಗಿ ಮದುವೆ ಸಂಭ್ರಮದಲ್ಲಿ ಅಡೆತಡೆಗಳು ಮಾತಿಗೆ ಮಾತು ಬೆಳೆದು ಸಂಬಂಧವನ್ನು ಮುರಿಯುವವರೆಗೆ ಜಗಳ ಹೋಗಿದೆ.

ಈ ಜಗಳ ಹಾಗೆ ಮುಂದುವರೆದು ೧೨ ವರ್ಷಗಳಾದರೂ ಒಬ್ಬರ ಮುಖ ಒಬ್ಬರು ನೋಡಿಲ್ಲ. ಒಮ್ಮೆ ಅಕ್ಕನಾಗಮ್ಮ ಮಾಳಿಗೆ ಮೇಲೆ ಹೋಗಿದ್ದಾಳೆ. ಅದೇ ವೇಳೆಗೆ ಶಿವದೇವ ಬಾವಿ ನೀರಿಗೆ ಬಂದಾಗ ಸತಿಯ ಅಳುವ ಶಬ್ದ ಕಿವಿಗೆ ಬಿದ್ದು, ಏನೋ ತಳಮಳ, ಸೆಳೆತ, ಸಂತಾಪ ಆ ಹಾಡಿನಲ್ಲಿ ಕಂಡುಬರುತ್ತದೆ. ನಾಗಮ್ಮನೇ ತಂದೆ ತಾಯಿಗೆ ಪತಿಯನ್ನು ಸೇರುವ ಆಸೆ ವ್ಯಕ್ತಪಡಿಸುತ್ತಾಳೆ. ಅಳಿಯನು ಮನೆಗೆ ಬರುತ್ತೇನೆಂದು ಒಪ್ಪಿಗೆ ಸೂಚಿಸಿದಾಗ ಅಕ್ಕನಾಗಮ್ಮನ ತಂದೆ ತಾಯಿ ಒಪ್ಪಿಗೆ ಸೂಚಿಸುತ್ತಾರೆ. ಮುಂದೆ ಅಕ್ಕನಾಗಮ್ಮ ಗರ್ಭಿಣಿಯಾದಾಗ ಸಂತೋಷದಿಂದ ಗಂಡನ ಮನೆಗೆ ಕಳಿಸುತ್ತಾರೆ. ಆದರೆ ಬೀಗರಿಗೆ ಸಂತೋಷವಾಗಲಿಲ್ಲ. ಅದರ ಬದಲಿಗೆ ಆಪಾದನೆಗಳನ್ನು ಮಾಡುತ್ತಾರೆ. ಅಕ್ಕನಾಗಮ್ಮ ಸತ್ಯ ಹೇಳಿದರೂ ಕಾದ ಎಣ್ಣೆಯಲ್ಲಿಯ ದುಡ್ಡನ್ನು ಬೆರಳೆದ್ದಿ ತೆಗೆಯುವ ಉಗ್ರ ಪರೀಕ್ಷೆ ಅವಳಿಗೆ ಎದುರಾಗುತ್ತದೆ. ಅಸಹಾಯಕತೆಯಿಂದ ಮಗ ಒಳ ಮನೆಯಲ್ಲಿ ಅಳುತ್ತಿರುವುದನ್ನು ಕಂಡು ತಂದೆ ಸಂತೈಸುವುದು, ಕೊನೆಗೆ ಅವರನ್ನು ಒಪ್ಪಿಕೊಳ್ಳುವುದು ಹೀಗೊಂದು ಕಥೆ ಜನಪದ ಹಾಡಿನಲ್ಲಿ ಉಂಟು:

**ಅಯ್ಯಾ ನಾನಧವೆ, ಅಯ್ಯಯ್ಯ ಕೈಯ**
**ಕೋಲಕೊಂಬರೆ? ಅಯ್ಯಾ ಎಳೆಗರುವಿನ**
**ಎಳಗಂತಿಯನೆಳೆದೊಯ್ವರೆ ಭಕ್ತರು? ಅಯ್ಯೋ ಅಯ್ಯೋ**
**ಎನಲೊಂಯ್ವರೆ ಬಸವಣ್ಣಪ್ರಿಯ ಚೆನ್ನಸಂಗಯ್ಯಾ**

ಈ ವಚನವನ್ನು ಅವಲೋಕಿಸಿದಾಗ, ತನ್ನಿಂದ ತನ್ನ ಗಂಡನನ್ನು ಹಿರಿಯರೆಲ್ಲ ಕೂಡಿ ಒತ್ತಾಯಪೂರ್ವಕವಾಗಿ ದೂರಮಾಡಿದ್ದನ್ನು ಅಕ್ಕನಾಗಮ್ಮ ಪ್ರಸ್ತಾಪಿಸಿದ್ದಾಳೆ. ಅಯ್ಯಾ ನಾನಧವೆ ಎಂದರೆ ಗಂಡನಿಂದ ದೂರವಿದ್ದವಳು ಎಂಬ ಅರ್ಥ ಕೊಡುತ್ತದೆ. ತನ್ನ ಆಸರೆಯಾದ ಗಂಡನನ್ನು ದೂರಮಾಡಿದ್ದನ್ನು ಕೈಯ ಕೋಲಕೊಂಬರೆ, ಎನ್ನುವುದು ತಾಯಿಯಿಂದ ಕರುವನ್ನೂ ಬೇರ್ಪಡಿಸಿದ ದೃಷ್ಟಾಂತವನ್ನೂ ನೀಡುತ್ತಾಳೆ.

ಅಕ್ಕನಾಗಮ್ಮನ ವಚನಗಳ ವಿಶೇಷತೆ ಎಂದರೆ ಬಸವಸ್ತುತಿ, ಶರಣಸ್ತುತಿ ಹಾಗು ಅಧ್ಯಾತ್ಮದಲ್ಲಿ ಸಾಧಿಸಿದ ನಿಲುವು, ಶ್ರದ್ಧೆ. ಅಕ್ಕನಾಗಮ್ಮನಿಗೆ ಬಸವಣ್ಣನೆಂದರೆ ಪ್ರಾಣ, ಬಸವಣ್ಣನೆಂದರೆ ಭಕ್ತಿ, ಬಸವಣ್ಣನೆಂದರೆ ಪ್ರೀತಿ, ಬಸವಣ್ಣನಿಗೆ ಆಕೆ ತೋರಿಸಿದ್ದು ಮಾತ್ರ ಪ್ರೇಮ.

**ಬಸವನೇ ಮುಖಸಜ್ಜೆ ಬಸವನೇ ಅಮಲೋಕ್ಯ**
**ಬಸವನ ನಾನೆತ್ತಿ ಮುದ್ದಾಡಿಸುವೆನು**
**ಬಸವಾ, ಸಂಗನಬಸವಿದೇವಾ ಜಯತು**
**ಬಸವಾ, ಸಂಗನಬಸವಲಿಂಗಾ ಜಯತು**
**ಬಸವಗೂ ಎನಗೂ ಭಾವಭೇದವಿಲ್ಲ**
**ಬಸವಗೂ ಎನಗೂ ರಾಸಿಕೂಟವುಂಟು**
**ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ**

**ಬಸವನ ಬೆಸಲಾದ ಬಾಣತಿ ನಾನಯ್ಯ.**
**ಬಸವಾ, ಬಸವಾ, ಬಸವಾ**

ಎಂಬ ವಚನದಲ್ಲಿ ಆಕೆಯ ಭಾವವು ಬಲುಸ್ಫುಟವಾಗಿ ಒಡಮೂಡಿಬಂದಿದೆ.

ಸಂಸಾರದ ನೋವು–ನಲಿವುಗಳನ್ನು ಅನುಭವಿಸಿದ ಅಕ್ಕನಾಗಮ್ಮ ತಿಳಿಯದೆ ಭವದ ಬಂಧನದಲ್ಲಿ ಸಿಲುಕಿಕೊಂಡೆ ಎಂಬ ಭಾವನೆಯನ್ನು:

**ಅರಿಯದೆ ಮರಹಿಂದ ಭವದಲ್ಲಿ ಬಂದೆನಲ್ಲದೆ**
**ಇನ್ನು ಅರಿದ ಬಳಿಕ ಬರಲುಂಟೆ?**
**ಹೃದಯ ಕಮಲದಲ್ಲಿ ನಿಜವು ನೆಲೆಗೊಂಡ ಬಳಿಕ**
**ಪುಣ್ಯಪಾಪವೆಂಬುದಕ್ಕೆ ಹೊರಗಾದೆನು**
**ಭುವನಹದಿನಾಲ್ಕರೊಳಗೆ ಪರಿಪೂರ್ಣ**
**ನಿರಂಜನಜ್ಯೋತಿಯಾಗಿ ಬೆಳಗುವ ಪ್ರಭುವ ಕಂಡು**
**ಬದುಕಿದೆನು ಕಾಣಾ ಬಸವಣ್ಣಪ್ರಿಯ ಚೆನ್ನಸಂಗಯ್ಯ**

ಎಂದು ಲೌಕಿಕ ಜೀವನ ತೊರೆದು ಕತ್ತಲೆಯಿಂದ ಮುಕ್ತಿ ಪಡೆಯಲು ಹಂಬಲಿಸುತ್ತಾಳೆ.

ಭವಬಂಧನದಿಂದ ಮುಕ್ತರಾಗಲು ಭಕ್ತರಿಗೆ ಸಾಧನೆ ಅಗತ್ಯ. ಅಂತಹ ಸಾಧನೆಯ ಮೂಲಕ ನಿಜವಾದ ಅರಿವು ಪಡೆದ ಅಕ್ಕನಾಗಮ್ಮ ತನಗೆ ಪುಣ್ಯಪಾಪಗಳ ಗೊಡವೆಯೇ ಇಲ್ಲ ಎಂದು ಹೇಳಿದ್ದಾಳೆ. ಇಂತಹ ಮಾತುಗಳು ಆಕೆಯ ನಿಶ್ಚಿಂತ ನಿಲುವಿಗೆ ನಿದರ್ಶನಗಳಾಗಿವೆ. ಜನರ ಅಪವಾದಕ್ಕೆ ಹೆದರದ ಗಟ್ಟಿ ಮನಸ್ಸು ಇನ್ನೊಂದೆಡೆ ವ್ಯಕ್ತವಾಗಿದೆ.

**ಮನದೊಡೆಯ ಮಹಾದೇವ ಮನವ ನೋಡಿಹನೆಂದು**
**ಮನುಜರ ಕೈಯಿಂದ ಒಂದೊಂದ ನುಡಿಸುವನು**
**ಇದಕ್ಕೆ ಕಳವಳಿಸದಿರು ಮನವೆ, ಕಾತರಿಸದಿರು ತನುವೆ**
**ನಿಜವ ಮರೆಯದಿರು ಕಂಡಾ, ನಿಶ್ಚಿಂತನಾಗಿರು ಮನವೆ**
**ಬಸವಣ್ಣಪ್ರಿಯ ಚೆನ್ನಸಂಗಯ್ಯನು**
**ಬೆಟ್ಟದನಿತಪರಾಧವನು ಒಂದು ಬೊಟ್ಟಿನಲಿ ತೊಡೆವನು**

ಎಂದು ಸಾಮಾನ್ಯ ಜನರ ಮಾತುಗಳಿಂದ ಕಳವಳಗೊಳ್ಳದೆ, ಏನೇ ಅಪವಾದಗಳು ಬಂದರೂ ಎದುರಿಸುವ ಧೈರ್ಯ, ಪರಮಾತ್ಮನಲ್ಲಿ ಅಚಲ ವಿಶ್ವಾಸ ಈ ವಚನದಲ್ಲಿ ನಿಚ್ಚಳವಾಗಿ ಕಂಡುಬರುತ್ತದೆ. ಬಸವಣ್ಣನವರು ಅಕ್ಕನಾಗಮ್ಮನಿಗೆ ಸಹೋದರ ಮಾತ್ರವಲ್ಲ ತಂದೆಯ ಸ್ಥಾನದಲ್ಲಿದ್ದಾನೆ. ಗುರುವಿನ ಸ್ಥಾನದಲ್ಲೂ ಇದ್ದಾನೆ. ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುವ ಗುರು, ಮುಕ್ತಿ ಮಾರ್ಗವ ತೋರಿಸುವ ಗುರು, ಏನೆಲ್ಲಾ ಬಸವಣ್ಣನೆ ಆಗಿದ್ದಾನೆ. ಆಕೆಯ ಒಂದು ವಚನ ಹೀಗಿದೆ:

**ಎನ್ನ ಕುಲಸೂತಕವ ಕಳೆದಾತ ಬಸವಣ್ಣ**
**ಎನ್ನ ಛಲಸೂತಕವ ಕಳೆದಾತ ಬಸವಣ್ಣ**
**ಎನ್ನ ತನುಸೂತಕವ ಕಳೆದಾತ ಬಸವಣ್ಣ**
**ಎನ್ನ ಮನಸೂತಕವ ಕಳೆದಾತ ಬಸವಣ್ಣ**
**ಎನ್ನ ನೆನಹುಸೂತಕವ ಕಳೆದಾತ ಬಸವಣ್ಣ**
**ಎನ್ನ ಅರುಹುಮರುಹಿನ ಸಂದುಸಂಶಯವ ಬಿಡಿಸಿದಾತ ಬಸವಣ್ಣ**
**ತನ್ನ ತನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ**
**ನಿಜದ ನಿರ್ವಯಲ ಬಾಗಿಲ ನಿಜವ ತೋರಿದಾತ ಬಸವಣ್ಣ**
**ಬಸವಣ್ಣಪ್ರಿಯ ಚೆನ್ನಸಂಗಯ್ಯನ ಹೃದಯ ಕಮಲದಲ್ಲಿ**
**ನಿಜನಿವಾಸಿಯಾಗಿರಿಸಿದ ಎನ್ನ ತಂದೆ ಸಂಗನಬಸವಣ್ಣನು.**

ಅಕ್ಕನಾಗಮ್ಮ ಹಿರಿಯಳಾಗಿದ್ದರೂ ಕೂಡಾ ತನ್ನ ಜೀವನದ ಸಾರ್ಥಕತೆಗೆ ತನುಮನದ ಪರಿಶುದ್ಧತೆಗೆ ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು ಇವರೇ ಕಾರಣ ಎನ್ನುವ ಮತ್ತೊಂದು ವಚನ ಹೀಗಿದೆ:

**ಎನ್ನ ಭವದ ಬಳ್ಳಿಯ ಬೇರು ಹರಿಯಿತ್ತಯ್ಯಾ**
**ಸಂಗನ ಬಸವಣ್ಣನ ಒಕ್ಕುದ ಕೊಂಡೆನಾಗಿ**
**ಎನ್ನ ಮನದ ಕಪಟ ಹಿಂಗಿತ್ತಯ್ಯಾ**
**ಚೆನ್ನಬಸವಣ್ಣನ ಕರುಣವ ಪಡೆದೆನಾಗಿ**
**ಎನ್ನಂತರಂಗದ ಸಂದುಸಂಶಯ ತೊಲಗಿತ್ತಿಂದು**
**ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ**
**ಎನ್ನ ಪರಮಗುರು ಅಲ್ಲಮ ಪ್ರಭುದೇವರ**
**ಶ್ರೀ ಚರಣವ ಕಂಡೆನಾಗಿ**

ಚೆನ್ನಬಸವಣ್ಣ ಮಗನಾದರೂ ಆತನ ದಿವ್ಯಜ್ಞಾನಕ್ಕೆ ತಲೆಬಾಗಿದ ಅಕ್ಕನಾಗಮ್ಮ ಇಲ್ಲಿ ಇತರೆ ಹಿರಿಯ ಶರಣರ ಜೊತೆ ಆತನನ್ನೂ ಸ್ಮರಿಸಿದ್ದಾಳೆ.

**ಎನ್ನ ಆಚಾರ–ವಿಚಾರ ಬಸವಣ್ಣಂಗರ್ಪಿತವಾದವು**
**ಎನ್ನ ಅವಧಾನ–ಅನುಭಾವ ಬಸವಣ್ಣಂಗರ್ಪಿತವಾದವು**
**ಎನ್ನ ಸರ್ವಾಚಾರ ಸಂಪತ್ತು ಬಸವಣ್ಣನಲ್ಲಿ ವೇದ್ಯವಾಯಿತು**
**ಬಸವಣ್ಣ ಪ್ರಿಯ ಕೂಡಲಚೆನ್ನಸಂಗಮದೇವರಲ್ಲಿ**
**ನಿಜನಿವಾಸಿಯಾಗಿರ್ದೆನು**

ಎಂದು ತನ್ನ ಸರ್ವಾಚಾರ ಸಂಪತ್ತನ್ನೆಲ್ಲ ಬಸವಣ್ಣನಿಗೆ ಅರ್ಪಿಸಿಬಿಟ್ಟು ಶಿವಯೋಗ ಸಾಧನೆಯಲ್ಲಿ ನಿರತಳಾಗಿದ್ದ ಅಕ್ಕನಾಗಮ್ಮನಿಗೆ ಬಸವಣ್ಣನ ಅಗಲಿಕೆ ಬರಸಿಡಿಲೆರಗಿದಂತಾಯ್ತು.

ತನ್ನ ಸಮಸ್ತ ಬದುಕಿನ ರೂವಾರಿಯಾಗಿ ಸಲುಹಿದ್ದ, ಗುರುವಾಗಿ ಅನುಗ್ರಹಿಸಿದ್ದ ಬಸವಣ್ಣನವರು ಐಕ್ಯರಾದಾಗ

ಅಕ್ಕನಾಗಮ್ಮನಿಗೆ ಸಹಿಸಲಸಾಧ್ಯವಾದ ದುಃಖವಾಗಿತ್ತು. ಬಸವಣ್ಣನನ್ನು ಕಳೆದುಕೊಂಡ ಆಕೆಗೆ ಎಲ್ಲವೂ ಬರಿದುಬರಿದಾಗಿ ಕಾಣುತ್ತದೆ. ಆಕೆಯ ನೀವೇದನೆ ಈ ರೀತಿ ಇದೆ:

**ಬಸವಣ್ಣಾ ನೀವು ಮರ್ತ್ಯಕ್ಕೆ ಬಂದು ನಿಂದಡೆ**
**ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲಾ ಪಸರಿಸಿತ್ತಲ್ಲಾ**
**ಅಯ್ಯಾ, ಸ್ವರ್ಗ ಮರ್ತ್ಯ ಪಾತಾಳದೊಳೆಗೆಲ್ಲಾ**
**ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರು?**
**ಅಣ್ಣಾ ಶಶಿಧರನಟ್ಟಿದ ಮಣಿಹ ಪೂರೈಸಿತ್ತೆಂದು**
**ನೀವು ಲಿಂಗೈಕ್ಯವಾದೊಡೆ ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ**
**ನಿಮ್ಮೊಡನೆ ಸದಾಚಾರ ಹೋಯಿತ್ತಯ್ಯಾ**
**ನಿಮ್ಮೊಡನೆ ಅಸಂಖ್ಯಾತ ಮಹಾಗಣಂಗಳು ಹೋದರಣ್ಣಾ**
**ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತಲ್ಲಾ ಬಸವಣ್ಣ**
**ಎನ್ನನೊಯ್ಯದೆ ಹೋದೆಯಲ್ಲಾ ಪಂಚಪರುಷಮೂರ್ತಿ ಬಸವಣ್ಣಾ**
**ಬಸವಣ್ಣಪ್ರಿಯ ಚೆನ್ನಸಂಗಯ್ಯಂಗೆ**
**ಪ್ರಾಣಲಿಂಗವಾಗಿ ಹೋದೆಯಲ್ಲಾ ಬಸವಣ್ಣ**

ಎಂದು ಶೋಕಿಸಬೇಕಾದರೆ ಕಲ್ಯಾಣದ ಬದಲಾದ ಪರಿಸರ ನಿರಾಶೆಯುಂಟು ಮಾಡಿರಬೇಕು. ಸಾಕಷ್ಟು ದುಃಖವಾಗಿದ್ದರೂ ಆಘಾತದಿಂದ ತತ್ತರಿಸಿದ್ದರೂ, ಕರ್ತವ್ಯದ ಕರೆ ಅವಳಲ್ಲಿ ಧೈರ್ಯ ತುಂಬುತ್ತದೆ. ಬಸವಣ್ಣ ಹೋದರೂ ಅವನು ತನ್ನ ಹಿಂದೆ ಬಿಟ್ಟುಹೋದ ಉಜ್ವಲ ಪರಂಪರೆಯನ್ನು ಕಾಯ್ದುಕೊಳ್ಳಬೇಕಾಗಿತ್ತು. ಹೀಗಾಗಿ ಬಸವಣ್ಣನವರು ಬಿಟ್ಟು ಹೋದ ಅಧ್ಯಾತ್ಮದ ಅಪಾರ ಸಂಪತ್ತಿಗೆ ಚೆನ್ನಬಸವಣ್ಣ ಧರ್ಮದರ್ಶಿಯಾಗಿ ನಿಂತರೆ ಅಕ್ಕನಾಗಮ್ಮ ಅವರ ಬೆಂಗಾವಲಾಗಿ ನಿಂತಳು. ಬಸವಣ್ಣ, ಚೆನ್ನಬಸವಣ್ಣನಂತಹ ಮಹಾಶರಣರ ಜೀವನವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿದ ಅಕ್ಕನಾಗಮ್ಮ ಮುಂದೆ ಬಸವಣ್ಣನ ಹೆಂಡತಿಯರಿಗೂ ಮಾರ್ಗದರ್ಶಕಿಯಾಗುತ್ತಾಳೆ. ಅಕ್ಕನಾಗಮ್ಮನ ಹಿರಿತನದಲ್ಲಿ ಶಿವಶರಣೆಯರೆಲ್ಲ ಒಟ್ಟುಗೂಡಿ ಖಡ್ಗಹಿಡಿದು ಹೋರಾಡಬೇಕಾದ ಪ್ರಸಂಗದಲ್ಲಿ ಗಂಗಾಂಬಿಕೆ ಮುಖ್ಯ ಸಹಾಯಕಳಾದಳು. ಕವಿಯಿತ್ರಿಯಾದ ಶಿವಶರಣೆ ಅಕ್ಕನಾಗಮ್ಮ ಕಲಿಯಾಗಿ ಯುದ್ಧವನ್ನು ಮಾಡಿದಳು ಎಂಬುದು ಹೆಮ್ಮೆಯ ವಿಷಯ.

ಕಾದರವಳ್ಳಿಯ ಕಾಳಗವು ಕೊನೆಗೊಂಡ ಮೇಲೆ ಶಿವಶರಣರು ಉಳವೆಯತ್ತ ತಮ್ಮ ಪ್ರಯಾಣ ಮುಂದುವರೆಸಿದರು. ಅಕ್ಕನಾಗಮ್ಮನು ಅವರನ್ನು ಹಿಂಬಾಲಿಸಿದಳು. ಉಳುವೆಯಲ್ಲಿ ಅಕ್ಕನಾಗಮ್ಮನ ಹೆಸರಿನ ಗುಹೆಯಿದೆ, ಆಕೆಯ ಸಮಾಧಿಯೂ ಅಲ್ಲಿಯೇ ಇದೆ ಎಂದು ಶ್ರೀಮತಿ ಸರಸ್ವತಿ ಗೌಡರವರು ತಮ್ಮ ಲೇಖನದಲ್ಲಿ ತಿಳಿಸಿದರೆ ಕಾದರವಳ್ಳಿಯ ಕಾಳಗದಲ್ಲಿ ಪಾಲ್ಗೊಂಡು ಹೋರಾಡಿ ಕೊನೆಗೆ ಕರಿಹೊಳೆಯ ದಂಡೆಯ ಮೇಲಿನ ಗುಹೆಯಲ್ಲಿ ಐಕ್ಯಳಾದಳು ಎಂಬ ವಿಷಯ ಚೆನ್ನಬಸವಪುರಾಣದಿಂದ ತಿಳಿದುಬರುತ್ತದೆ. ಈಗಲೂ ಅಲ್ಲಿಯೇ ಸಮಾಧಿ ಸ್ಥಾನವನ್ನು ತೋರಿಸಲಾಗಿದೆ.

ಒಟ್ಟಿನಲ್ಲಿ ಅಕ್ಕನಾಗಮ್ಮ ಅಕ್ಕನಾಗಿ, ತಾಯಿಯಾಗಿ, ಶಿವಶರಣೆಯರಲ್ಲಿ ಹಿರಿಯಳಾಗಿ, ಮಾರ್ಗದರ್ಶಕಿಯಾಗಿ, ಮಹಾಮನೆಯ ಸಂಚಾಲಕಿಯಾಗಿ ತುಂಬು ಜೀವನದ ಹೊಣೆಗಾರಿಕೆ ಹೊತ್ತು ಅಧ್ಯಾತ್ಮದ ಮೆಟ್ಟಿಲೇರಿ ಸಾರ್ಥಕ ಬದುಕನ್ನು ಸಾಗಿಸಿದಳು.

■■

## ಅಕ್ಕನಾಗಮ್ಮ

ಬಸವಣ್ಣನವರ ಪರಿಕಲ್ಪನೆಯಲ್ಲಿ ಬಡವ–ಬಲ್ಲಿದ, ಸ್ತ್ರೀ–ಪುರುಷ, ಉಚ್ಚ–ನೀಚವೆಂಬ ಯಾವ ಭೇದವೂ ಇಲ್ಲ. ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ, ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ? ಎಂದು ಪ್ರಶ್ನಿಸುವ ಅವರು ಹುಟ್ಟಿನಿಂದ ಎಲ್ಲರೂ ಸಮಾನರು ಎಂಬ ತತ್ವವನ್ನು ಜಗಕ್ಕೆ ಸಾರಿದವರು. ಅವರ ಆ ಅಂತರಂಗದ ಕರೆಗೆ ಮನ್ನಣೆಕೊಟ್ಟು ಸಮಾನತೆಯ ಸೂತ್ರದಲ್ಲಿ ಬಂಧಿತರಾದವರು ಅಸಂಖ್ಯಾತ ಜನರು. ಮಹಿಳೆಯರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನಿರಾಕರಿಸಿದ್ದ ಅಂದಿನ ದಿನಗಳಲ್ಲಿ ಬಸವಣ್ಣನವರ ಈ ಸಮಾನತೆಯ ಸಂದೇಶ ವರದಾನವಾಗಿ ಲಭಿಸಿತು. ಆ ಕಾಲದ ಎಲ್ಲ ವರ್ಗದ ಮಹಿಳೆಯರು ಮೈಕೊಡವಿಕೊಂಡು ಮೇಲೆದ್ದರು. ಸಮಾನತೆಯ ಅವಕಾಶವನ್ನು ಪಡೆದ ಮಹಿಳೆಯರು ಧಾರ್ಮಿಕವಾಗಿ ಆಧ್ಯಾತ್ಮಿಕವಾಗಿ ಉನ್ನತವಾದುದನ್ನು ಸಾಧಿಸಿದರು. ಹೀಗೆ ಆಧ್ಯಾತ್ಮಿಕ ಔನ್ನತ್ಯವನ್ನು ಸಾಧಿಸಿದ ಮಹಿಳೆಯರಲ್ಲಿ ಬಸವಣ್ಣನವರ ಸಹೋದರಿ ನಾಗಮ್ಮ ಅಗ್ರಗಣ್ಯಳಾಗಿದ್ದಾಳೆ.

# ಗುಪ್ತಭಕ್ತ ಮಾದಾರ ಚನ್ನಯ್ಯ

● ಶ್ರೀ ಶ್ರೀಶೈಲ ಪ. ಕಳಸದ

ಹಿರಿಯ ಶಿವಶರಣ ಮಾದಾರ ಚನ್ನಯ್ಯನ ಮೂಲನೆಲೆಯ ಬಗ್ಗೆ ಸಂಶೋಧಕರಲ್ಲಿ ಒಮ್ಮತವಿಲ್ಲ. ಸಂಶೋಧಕರಾದ ಡಾ. ಎಂ. ಚಿದಾನಂದಮೂರ್ತಿ ಅವರು– ಮಾದಾರ ಚನ್ನಯ್ಯ ಉತ್ತರ ಕರ್ನಾಟಕದ ಕಲಬುರಗಿ ಭಾಗದಲ್ಲಿ ಜನಿಸಿದವ ಎಂದು ಬರೆದು ಮತ್ತೊಂದು ಲೇಖನದಲ್ಲಿ ಈಗಿನ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಬಳ್ಳಿಗಾವೆ ಆದರೂ ಆಗಿರಬಹುದು–ಎಂದಿದ್ದಾರೆ. ಈ ಮಾತಿಗೆ ಡಾ. ವಿದ್ಯಾಶಂಕರ ಅವರು ಚನ್ನಯ್ಯಗಳು ಇಬ್ಬರಿರಬಹುದು. ಒಬ್ಬ ಕರ್ನಾಟಕದಲ್ಲೇ ಹುಟ್ಟಿದ್ದ; ಇನ್ನೊಬ್ಬ ತಮಿಳನಾಡಿನಲ್ಲಿ ಹುಟ್ಟಿರಬಹುದು. ಸಂಶೋಧಕರಲ್ಲಿ ಒಮ್ಮತ ಮೂಡುವವರೆಗೆ ದೊರೆತ ಮಾಹಿತಿಯಲ್ಲೆ ಹೊಂದಿಸಿಕೊಳ್ಳೋಣ.

ಮಾದಾರ ಚನ್ನಯ್ಯ ಬಳ್ಳಿಗಾವೆಯಲ್ಲಿ ತನ್ನ ಕುಲಕಸುಬಾದ ಚರ್ಮಗಾರಿಕೆಯನ್ನು ಮಾಡುತ್ತ ಪತ್ನಿ ಗಂಗಮ್ಮಳೊಡನೆ ತನ್ನ ಪಾಡಿಗೆ ತಾನಿದ್ದ. ಪೂರ್ವಾರ್ಜಿತ ಪುಣ್ಯದಿಂದಲೋ ಏನೋ ಶಿವಭಕ್ತಿಯೆಂಬುದು ತನ್ನಿಂತಾನೆ ಹುಟ್ಟಿ ಆಚಾರವನ್ನು ಕಲಿಸಿತ್ತು. ಅದರಂತೆ ಪ್ರತಿದಿನ ನಸುಕಿನಲ್ಲೇ ಏಳುವದು, ಸ್ನಾನ ಮಾಡುವದು, ಮಡಿವಸ್ತ್ರ, ವಿಭೂತಿ ಧರಿಸಿ ಮೌನ ಜಪ ಮಾಡುತ್ತಿದ್ದ–ಅದೂ ಗುಟ್ಟಾಗಿ! ಏಕೆಂದರೆ ಅಂತ್ಯಜರಿಗೆ ದೇವಾಲಯುಗಳು ಮುಕ್ತವಾಗಿರಲಿಲ್ಲ. ಕುಲಬಾಂಧವರೂ ಗೇಲಿ ಮಾಡುತ್ತಿದ್ದರು. ಏನು ಕಾರಣವೊ ಏನೋ ಚನ್ನಯ್ಯ ಬಳ್ಳಿಗಾಮೆಯನ್ನು ಬಿಟ್ಟು, ಗುಳೆ ಕಟ್ಟಿಕೊಂಡು ಪತ್ನೀ ಸಮೇತ ತಮಿಳನಾಡಿನ ತಂಜಾವೂರಿಗೆ ಹೋದ. ಕಾವೇರಿ ತೀರದ ತಂಜಾವೂರು ಚೋಳ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಅದರ ಪ್ರಭು ಕರಿಕಾಲ ವಿಕ್ರಮ ಚೋಳನಿದ್ದನು. ಆತ ಅಪ್ಪಟ ಶಿವಭಕ್ತ; ಆಚಾರವಂತ. ಪ್ರತಿದಿನ ನಿಷ್ಠೆಯಿಂದ ಶಿವಪೂಜೆ ಮಾಡಿ ನೈವೇದ್ಯೆಯ ಕಾಲಕ್ಕೆ ಅತ್ಯಂತ ಭಕ್ತಿಯಿಂದ ಶಿವನನ್ನು ಆಹ್ವಾನಿಸುತ್ತಿದ್ದ. ರಾಜನ ನಿಷ್ಠೆಗೆ ಸಂತುಷ್ಟನಾಗಿ ಶಿವ ಪ್ರತ್ಯಕ್ಷನಾಗುತ್ತಿದ್ದ; ಸಾಮ್ರಾಟ ಅರ್ಪಿಸಿದ ಮೃಷ್ಟಾನ್ನವನ್ನು ಪ್ರೀತಿಯಿಂದ ಸ್ವೀಕರಿಸುತ್ತಿದ್ದ.

ಚನ್ನಯ್ಯ ಅಲ್ಲಿಯ ಕುದುರೆ ಲಾಯದಲ್ಲಿ ಚಾಕರಿ ಗಿಟ್ಟಿಸಿಕೊಂಡ. ಅಡವಿಯಿಂದ ಹುಲ್ಲು ತಂದು ಕೊರೆದು ಕುದುರೆಗೆ ಹಾಕುವದು, ಕಾಲ ಕಾಲಕ್ಕೆ ದಾಣೆ ತಿನ್ನಿಸುವದು, ಕುದುರೆಯ ಮೈತಿಕ್ಕಿ ತೊಳೆಯುವದು, ಸುತ್ತಾಡಿಸಿಕೊಂಡು ಬರುವದು ಮಾಡುತ್ತಿದ್ದ. ಬಿಡುವಿನ ವೇಳೆಯಲ್ಲಿ ತನ್ನ ಗುಡಿಸಿಲಿನಲ್ಲಿ, ತನ್ನ ಕುಲಕಸುಬಾದ ಚರ್ಮಗಾರಿಕೆಯನ್ನು ಮಾಡುತ್ತಿದ್ದ. ಚರ್ಮ ಹದಗೊಳಿಸಿ ಪಾದರಕ್ಷೆಗಳನ್ನು ತಯಾರಿಸುವದು, ಕುದುರೆಯ ಮೂಗುದಾರ, ಬಾರಕೋಲು, ಲಗಾಮು, ಜೀನು ಮುಂತಾದ ವಸ್ತುಗಳನ್ನು ಮಾಡಿಕೊಡುತ್ತಿದ್ದ. ಏನೇ ಮಾಡಲಿ ಹೃದಯದಲ್ಲಿರುವ ಶಿವನನ್ನು ಸ್ಮರಿಸುತ್ತಲೇ ಮಾಡುತ್ತಿದ್ದ. ಭಕ್ತನ ಕಾಯಕ ನಿಷ್ಠೆಯನ್ನು ಕಂಡುಶಿವನೇ ಅಭಿಮಾನದಿಂದ ಬೀಗುತ್ತಿದ್ದ. ಇಂತಹ ಅಪ್ರತಿಮ ಭಕ್ತನ ಗುಪ್ತಭಕ್ತಿ ಕೇವಲ ಒಂದು ಕುಟೀರದಲ್ಲೆ ಕಮರಿ ಹೋಗಬಾರದು. ಬಯಲಿಗೆ ಬರಬೇಕು ಚನ್ನಯ್ಯನ ಭಕ್ತಿ ಜಗಜ್ಜಾಹೀರಾಗಬೇಕು ಎಂದುಕೊಂಡು ಅವಕಾಶಕ್ಕಾಗಿ ಕಾಯುತ್ತಿದ್ದ.

ಪ್ರತಿದಿನ ಚನ್ನಯ್ಯನ ಶಿವಪೂಜೆ ಮುಗಿಯುವ ಹೊತ್ತಿಗೆ ಪತ್ನಿ ಗಂಗಮ್ಮ ರುಚಿ ಶುಚಿಯಾದ ಅಂಬಲಿಯನ್ನು ಮಣ್ಣಿನ ಪಾತ್ರೆಯಲ್ಲಿ ಹಾಕಿ ನೈವೇದ್ಯಕ್ಕಿಡುತ್ತಿದ್ದಳು. ಚನ್ನಯ್ಯ ಅದನ್ನು ಶಿವನಿಗೆ ನಿವೇದಿಸುತ್ತಿದ್ದ. ಆಗ ಅದು ಕೇವಲ ಅಂಬಲಿಯುಲ್ಲ ಮುಹಾಪ್ರಸಾದ ಎಂದು ಇಬ್ಬರೂ ಸೇವಿಸುತ್ತಿದ್ದರು. ಇದೇ ರೀತಿ ಒಂದುದಿನ ಶಿವನಿಗೆ ಅರ್ಪಿಸಿದಾಗ ಶಿವನ ಛಾಯೆಯೊಂದು ಆವಿರ್ಭವಿಸಿ, ಅಂಬಲಿ ಪಾತ್ರೆಯನ್ನು ಕೈಗೆತ್ತಿಕೊಂಡು ಅಂಬಲಿಯನ್ನು ಸುರಿದುಕೊಳ್ಳತೊಡಗಿತು. ಚನ್ನಯ್ಯ ಗಂಗಮ್ಮ ಮೂಕವಿಸ್ಮಿತರಾಗಿ ಶಿವಲೀಲೆಯನ್ನು ವೀಕ್ಷಿಸುತ್ತಿದ್ದರು. ಶಿವ– ಆಹಾ! ಈ ಅಂಬಲಿ ಎಷ್ಟು ರುಚಿಯಾಗಿದೆಯಲ್ಲ! ಎನ್ನುತ್ತ ಮತ್ತೆ ಮತ್ತೆ ಹಾಕಿಸಿಕೊಂಡು ಸುರಿದು ಸುರಿದು ಹೊಟ್ಟೆಯ ಮೇಲೆ ಕೈಯಾಡಿಸಿಕೊಳ್ಳುತ್ತ ಡೇಗುತ್ತ ಅತ್ಯಂತ ಆನಂದಿತನಾಗಿ

ಶ್ರೀಶೈಲ ಪ. ಕಳಸದ, ಬಸವನಗರ, ಹಿರೇಬಾಗೇವಾಡಿ ಮೊ–೯೯೦೨೯೦೫೫೫೦

ಪತಿ ಪತ್ನಿಗೆ ಆಶೀರ್ವದಿಸಿ ಅಂತರ್ಧಾನನಾದ. ಇದು ಹೇಗೆ ಸಾಧ್ಯವಾಯಿತು ಅಂದರೆ ನೈವೇದ್ಯವನ್ನು ಅರ್ಪಿಸುವದು ಮುಖ್ಯವಲ್ಲ ಅರ್ಪಿಸುವ ಭಕ್ತಿ ಭಾವ ಮುಖ್ಯ. ಅದೇ ಸಮಯ ಕರಿಕಾಲ ಚೋಳನೂ ಎಂದಿನಂತೆ ತನ್ನ ಪೂಜಾಗೃಹದಲ್ಲಿ ಶಿವನಿಗೆ ಪೂಜೆ ಸಲ್ಲಿಸಿ ರಾಜೋಚಿತ ಮೃಷ್ಟಾನ್ನವನ್ನು ನೈವೇದ್ಯೆಗಿಟ್ಟು ಶಿವನನ್ನು ಆಹ್ವಾನಿಸಿದ. ಶಿವ ಪ್ರತ್ಯಕ್ಷನಾಗಿ ಡೇಗುತ್ತ–ಈ ದಿನ ನಾನು ಇಲ್ಲಿ ಏನನ್ನೂ ಸೇವಿಸಲಾರೆ. ಮಾದಾರ ಚನ್ನಯ್ಯನ ಝೋಪಡಿಯಲ್ಲಿ ಅಮೃತ ಸಮಾನವಾದ ಅಂಬಲಿಯನ್ನು ಹೊಟ್ಟೆತುಂಬ ಸುರಿದುಕೊಂಡು ಬಂದಿದ್ದೇನೆ. ನನಗೆ ಹಸಿವಿಲ್ಲ–ಎನ್ನುತ್ತ ಮರೆಯಾದ. ಕರಿಕಾಲ ಚೋಳನಿಗೆ ಸಖೇದಾಶ್ಚರ್ಯ! ಶಿವನನ್ನು ಆಹ್ವಾನಿಸಿಕೊಂಡು ಪ್ರಸಾದ ಮಾಡಿಸುತ್ತಿದ್ದವ ತಾನೊಬ್ಬನೇ ಎಂದು ಬೀಗುತ್ತಿದ್ದ. ಆದರೆ ಆತನಿಗೆ ಸೋಲಿನ ಅನುಭವವೇನೂ ಆಗಿರಲಿಲ್ಲ. ತನಗಿಂತ ಶ್ರೇಷ್ಠ ಭಕ್ತ, ಅಂತ್ಯಜ ಕುಲದವ ತನ್ನ ರಾಜ್ಯದಲ್ಲಿ ಇದ್ದಾನಲ್ಲ ಎಂಬ ಅಭಿಮಾನ ಮೂಡಿತು. ಈಗಲೇ ಆತನ ಗುಡಿಸಲಿಗೆ ಹೋಗಿ, ಆತನ ದರ್ಶನ ಪಡೆದು ಅಂಬಲಿಯ ರುಚಿ ನೋಡಬೇಕು ಅನಿಸಿತು. ಹೊಲೆಗೇರಿಗೆ ಹೊರಟೇಬಿಟ್ಟ. ಚನ್ನಯ್ಯ ತನ್ನ ನೇಮದಂತೆ ದಾಸೋಹ ತೀರಿಸಿ ಉಳಿದ ಪ್ರಸಾದವನ್ನು ಸೇವಿಸುತ್ತಿದ್ದ. ರಾಜ ಅವನ ಹತ್ತಿರಕ್ಕೆ ಹೋಗಿ, ಚನ್ನಯ್ಯ ಉಣ್ಣುತ್ತಿದ್ದ ಎಂಜಲು ಅಂಬಲಿಯನ್ನೇ ಎತ್ತಿ ಗಟಗಟ ಕುಡಿದು ಬಿಟ್ಟ. ಶಿವನ ಮಾತು ಸತ್ಯ; ಇಂತಹ ರುಚಿ ನಮ್ಮ ಮೃಷ್ಟಾನ್ನಕ್ಕೂ ಇಲ್ಲ.–ಚನ್ನಯ್ಯ ನೀನೇ ಧನ್ಯ! ನಿನ್ನ ಪಾದಕ್ಕೆ ನಮೋ ನಮೋ ಎನ್ನುತ್ತ ತನ್ನ ಕಿರೀಟವನ್ನು ತೆಗೆದು ಚನ್ನಯ್ಯನ ಪಾದದಲ್ಲಿ ಇರಿಸಿದ. ನಿಮ್ಮ ಕೆರವುಗಳಿಗೆ ನನ್ನ ಕಿರೀಟ ಸಮನಾಗಲಾರದು. ಎಂದು ಬಾಯಿ ತುಂಬಾ ಹೊಗಳಿದ. ಅಷ್ಟೇ ಅಲ್ಲ ಆತನನ್ನು ಆನೆಯ ಮೇಲೆ ಕೂಡ್ರಿಸಿಕೊಂಡು ಮೆರವಣಿಗೆ ಮಾಡುತ್ತ ಶಿವಾಲಯಕ್ಕೆ ಕರೆದೊಯ್ದ. ಚನ್ನಯ್ಯ ಶಿವಾಲಯದ ವೈಭವವನ್ನು ಕಂಡು ರೋಮಾಂಚಿತನಾದ. ಶಿವ ಪ್ರತ್ಯಕ್ಷನಾಗಿ ಚನ್ನಯ್ಯನನ್ನು ಅಪ್ಪಿಕೊಂಡ. ಆದರೆ ಅದರಿಂದ ಚನ್ನಯ್ಯನಿಗೆ ಬಹಳ ಸಂತೋಷವೇನೂ ಆಗಲಿಲ್ಲ. ಒಳಗೊಳಗೇ ಬಹುದೊಡ್ಡ ಆಘಾತವಾದಂತಾಯಿತು. ಇಷ್ಟು ವರುಷ ನಾನು ಪಾಲಿಸಿಕೊಂಡು ಬಂದಿದ್ದ ಗುಪ್ತಭಕ್ತಿ ಬಹಿರಂಗವಾಯಿತಲ್ಲ ಎಂದು ಚಿಂತಿಸತೊಡಗಿದ.

ಆದರೆ ಪುರೋಹಿತರ ಸೆರೆಯಲ್ಲಿದ್ದ ಶಿವನನ್ನು ಬಿಡಿಸಿದ. ಕೀಳು ಕುಲದವರಿಗಷ್ಟೇ ಅಲ್ಲ ಸರ್ವರಿಗೂ ಮುಕ್ತವಾಯಿತು. ಆನಂತರ ಚೋಳರಾಜ ಚನ್ನಯ್ಯನ ಹೆಸರಿನಲ್ಲಿ ಒಂದು ಊರನ್ನೇ ಕಟ್ಟಿಸಿ ಅದಕ್ಕೆ ಮಾದಾರ ಚನ್ನಯ್ಯನೂರು ಎಂದೇ ಹೆಸರಿಟ್ಟ. ಕಾಲಾಂತರದಲ್ಲಿ ಮಾದಾರ ಅದು 'ಮದ್ರಾಸ' ಆಗಿ ಚನ್ನಯ್ಯ 'ಚೆನ್ನೈ' ಆಗಿದೆ ಎಂದು ಬಲ್ಲವರು ತರ್ಕಿಸಿದ್ದಾರೆ.

ಚನ್ನಯ್ಯ ತನ್ನ ಜೀವಮಾನವೆಲ್ಲ ಕಾಯ್ದುಕೊಂಡುಬಂದಿದ್ದ ಗುಪ್ತಭಕ್ತಿ ವ್ರತ ವ್ಯರ್ಥವಾಯಿತಲ್ಲ ಇನ್ನು ತಾನೇಕೆ ಬದುಕಿರಬೇಕು.. ..ಎಂದು ಆತ್ಮಹತ್ಯೆಗೂ ಮುಂದಾದ. ಅದೇ ಸಮಯ ಕಲ್ಯಾಣದಿಂದ ಕೆಲವು ಶಿವಶರಣರು ಬಸವಣ್ಣನವರ ಆದೇಶದಂತೆ ಶರಣ ತತ್ವ ಪ್ರಚಾರಕ್ಕಾಗಿ ಚೋಳನಾಡಿಗೆ ಬಂದರು. ಚನ್ನಯ್ಯ ಸಾಕ್ಷಾತ್ ಶಿವನಿಗೆ ಅಂಬಲಿಯನ್ನುಣಿಸಿದ ಸುದ್ದಿ ಜನಜನಿತವಾಗಿತ್ತು. ಆ ಪುಣ್ಯಾತ್ಮನ ದರ್ಶನ ಪಡೆಯಲು ಆತನ ಝೋಪಡಿಗೆ ಬಂದರು. ಚನ್ನಯ್ಯ ಮೊದಲು ಅವರಿಗೆ ಅಂಬಲಿಯನ್ನು ಉಣಬಡಿಸಿದ. ಆನಂತರ ಉಭಯ ಕುಶಲೋಪರಿ. ಚನ್ನಯ್ಯ ಮೊದಲು ಅವರ ಕುತೂಹಲಕ್ಕೆ ಕಾರಣವಾದ ವಿಚಾರ ತಿಳಿಸಿದ. ತನ್ನ ಗುಪ್ತಭಕ್ತಿ ಬಹಿರಂಗವಾದದ್ದಕ್ಕೆ ಬೇಸರ ವ್ಯಕ್ತ ಪಡಿಸಿದ. ಕಲ್ಯಾಣದ ಶರಣರು– ಗುಪ್ತಭಕ್ತಿ ವೈಯಕ್ತಿಕವಾಯಿತು. ಅದೇ ಬಹಿರಂಗವಾಗಿದ್ದರೆ ಸಮಷ್ಟಿಯಲ್ಲಿ ಹಂಚಿಕೆಯಾಗುತ್ತಿತ್ತು. ಆ ಮಂಡಲಿಯಲ್ಲಿ ಭಾಗಿಗಳಾದವರಿಗೂ ಶಿವದರ್ಶನದ ಲಾಭವಾಗುತ್ತಿತ್ತು. ಅವರೆಲ್ಲರೂ ನಿನ್ನ ದೆಶೆಯಿಂದ ಪುಣ್ಯಕ್ಕೆ ಭಾಗಿಯಾಗುತ್ತಿದ್ದರು. ಇಲ್ಲಿ ಅಂತಹ ವಾತಾವರಣದ ಕೊರತೆ ಇದ್ದರೆ ಕಲ್ಯಾಣಕ್ಕೆ ಬನ್ನಿರಿ ಈಗಿರುವ ಶರಣರಿಗೆಲ್ಲ ಹಿರಿಯರಾಗಿರಿ. ನಿಮ್ಮ ಪವಿತ್ರಭಕ್ತಿಯ ರುಚಿ ತೋರಿಸಿರಿ. ಅಲ್ಲಿ ಬಸವೇಶ್ವರರು, ಅಲ್ಲಮ ಪ್ರಭುಗಳು, ಚೆನ್ನಬಸವೇಶ್ವರ, ಸಿದ್ಧರಾಮೇಶ್ವರ ಮುಂತಾದ ಘಟಾನುಘಟಿ ಶಿವಶರಣರಿದ್ದಾರೆ. ಅನುಭವ ಮಂಟಪವಿದೆ. ಅನುಭಾವಿಗಳಿದ್ದಾರೆ. ಅವರೆಲ್ಲ ನಿನ್ನನ್ನು ಹೆಗಲ ಮೇಲೆ ಕೂಡ್ರಿಸಿಕೊಂಡು ಮೆರೆಸುತ್ತಾರೆ. ಮಹಾಮನೆ ಇದೆ. ಅಲ್ಲಿ ಸದಾ ಕಾಲ ಅನ್ನ ದಾಸೋಹ ನಡೆಯುತ್ತಿರುತ್ತದೆ. ಅಲ್ಲಿ ಕುಲವಿಲ್ಲ, ಗೋತ್ರವಿಲ್ಲ, ಅಲ್ಲಿರುವವು ಎರಡೇ ಜಾತಿ ಗಂಡು ಮತ್ತು ಹೆಣ್ಣು. ಸ್ಪೃಶ್ಯ–ಅಸ್ಪೃಶ್ಯ ಭೇದವಿಲ್ಲ. ಆರ್ಯ ನಿರ್ಮಿತ ಜಾತಿ, ಪಂಥ, ಧರ್ಮ ಎಲ್ಲವೂ ಶರಣ ಧರ್ಮದೊಳಗೆ ವಿಲೀನವಾಗಿವೆ. ಚನ್ನಯ್ಯ ಕಲ್ಯಾಣದ ಧಾರ್ಮಿಕ ಕ್ರಾಂತಿಯ ಬಗ್ಗೆ ಅಲ್ಪ ಸ್ವಲ್ಪ ಕೇಳಿದ್ದ. ಈಗ ಶರಣರ ಒಂದೊಂದು ಶಬ್ದವೂ ಚನ್ನಯ್ಯನ ಮೇಲೆ ಪ್ರಭಾವ ಬೀರಿದವು. ಆತನ ಆತ್ಮಹತ್ಯೆಯ ವಿಚಾರ ಮರೆಯಾಯಿತು. ಕಲ್ಯಾಣದ ಕಡೆಗೆ ಚಿತ್ತ ಹರಿಯಿತು. ಗುಳೆ ಕಟ್ಟಿಕೊಂಡು ಕಲ್ಯಾಣಕ್ಕೆ ಹೊರಟು ನಿಂತ. ಸುದ್ದಿ ತಿಳಿದ ರಾಜಾ ಕರಿಕಾಲ

ಚೋಳ ತನ್ನ ರಾಜ್ಯದೊಳಗಿದ್ದ ಓರ್ವ ಮಹಾ ಪುರುಷನನ್ನು ಕಳೆದುಕೊಳ್ಳುತ್ತೇನಲ್ಲ ಎಂದು ದುಃಖಿಸಿದ. ಒಂದು ಕುದುರೆ ಗಾಡಿಯನ್ನು ಸವಾರನೊಡನೆ ಕೊಟ್ಟು ಕಳುಹಿಸಿದ.

ಮಾದಾರ ಚನ್ನಯ್ಯನ ಸವಾರಿ ಕಲ್ಯಾಣ ನಗರದ ಸಮೀಪಕ್ಕೆ ಬರುತ್ತಿದ್ದಂತೆ ಒಬ್ಬ ಮುಂದೆ ಹೋಗಿ ಬಸವಣ್ಣನವರಿಗೆ ಸುದ್ದಿ ಮುಟ್ಟಿಸಿದ. ಅವರೆಲ್ಲ ಚನ್ನಯ್ಯನನ್ನು ಇದಿರುಗೊಳ್ಳಲು ಬಂದರು. ಅಣ್ಣನವರೇ ಮುಂದಾಗಿ ಚನ್ನಯ್ಯನ ಪಾದ ಸ್ಪರ್ಶ ಮಾಡಬೇಕು ಎನ್ನುತ್ತಿರುವಾಗಲೇ ಚನ್ನಯ್ಯ ಹಿಂದೆ ಸರಿದು ಅಣ್ಣನವರ ಪಾದಗಳಿಗೆ ಎರಗುತ್ತಿದ್ದಂತೆ ಅಣ್ಣನವರು ಚನ್ನಯ್ಯನನ್ನು ಬಿಗಿದಪ್ಪಿ ಸ್ವಾಗತಿಸಿದರು.

ಅಲ್ಲಿಯ ಮಾದಾರ ಕೇರಿಯ ಬಂಧುಗಳು ಚನ್ನಯ್ಯನಿಗಾಗಿ ಒಂದು ಗುಡಿಸಲನ್ನು ನಿರ್ಮಿಸಿಕೊಟ್ಟರು. ಅಣ್ಣನವರು ಚನ್ನಯ್ಯ ದಂಪತಿಗಳಿಗೆ ಇಷ್ಟಲಿಂಗ ದೀಕ್ಷೆ ಕೊಡಿಸಿ ಶಿವಶರಣರನ್ನಾಗಿ ಮಾಡಿದರು. ಚನ್ನಯ್ಯ ತನ್ನ ಕಸುಬನ್ನು ಮಾಡುತ್ತ ದಾಸೋಹ ಮಾಡುತ್ತ ದಿನಗಳೆಯತೊಡಗಿದರು. ಚನ್ನಯ್ಯ ಭಕ್ತಿಯನ್ನು ಗುಪ್ತವಾಗಿ ಮಾಡುತ್ತಿದ್ದಂತೆ ರಾಮಾಯಣ, ಮಹಾಭಾರತ, ಉಪನಿಷತ್ತುಗಳ ಕಥಾರೂಪದ ಚಿಕ್ಕ ಚಿಕ್ಕ ಘಟನೆಗಳನ್ನು ಕುರಿತು ಅಧ್ಯಯನ ಮಾಡಿದ್ದ. ಅಲ್ಲಿಯ ವರೆಗೆ ತಾನು ಸಂಪಾದಿಸಿದ ಜ್ಞಾನ, ಅನುಭವಗಳನ್ನು ವಚನ ರೂಪದಿಂದ ಹೊರಹಾಕತೊಡಗಿದ. ವಚನಕಾರರೆಲ್ಲ ತಮ್ಮ ತಮ್ಮ ವಚನಗಳಿಗೆ ತಮ್ಮ ಅಭಿಮಾನೀ ದೇವರುಗಳ ಅಥವಾ ಗುರುಗಳ ಹೆಸರನ್ನೆ ಮುದ್ರಿಕೆಯಾಗಿ ಬಳಸಿಕೊಂಡಿದ್ದಾರೆ. ಆದರೆ ಚನ್ನಯ್ಯ ತನಗೆ ಅಂಬಲಿ ನೀಡುವ ಕಸುಬಿನ ಪರಿಕರಗಳ ಹೆಸರುಗಳನ್ನು ಉಪಯೋಗಿಸಿಕೊಂಡಿದ್ದಾನೆ. 'ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ ಅರಿ ನಿಜಾತ್ಮ ರಾಮರಾಮನಾ' ಅಂದರೆ ಕೈಯುಳಿ(ಚರ್ಮವನ್ನು ಹದಗೊಳಿಸುವ ಸಾಧನ) ಅಡಿಗೂಂಟ(ಪಾದರಕ್ಷೆಯ ಪಟ್ಟಿಯನ್ನು ಅಳತೆ ಆಕಾರಗಳಿಗನುಸಾರವಾಗಿ ತೀಡುವ ಸಾಧನ) ಎಂದು ಇರಿಸಿಕೊಂಡಿದ್ದಾನೆ. ಚನ್ನಯ್ಯ ಸಾವಿರಾರು ವಚನಗಳನ್ನು ರಚಿಸಿದ್ದಾನಂತೆ. ಆದರೆ ಸಂಶೋಧಕರಿಗೆ ದೊರೆತವು ಕೇವಲ ಹತ್ತಿಪ್ಪತ್ತು! ಅವುಗಳಲ್ಲೇ ಬೆಡಗಿನ ವಚನಗಳೂ ಉಂಟು. ವರ್ಗೀಕೃತ ಸಮಾಜದಲ್ಲಿ ಉಚ್ಚ ವರ್ಣೀಯರು, ಶೂದ್ರರನ್ನು, ಅಸ್ಪೃಶ್ಯರನ್ನು ಕೀಳು ಕುಲದವರೆಂದು ಅವರನ್ನು ಹಂದಿ, ನಾಯಿಗಳಿಗಿಂತಲೂ ಕಡೆಯಾಗಿ ಕಾಣುತ್ತಿದ್ದರು. ಪೂಜ್ಯ ಬಸವೇಶ್ವರರು ಈ ತಾರತಮ್ಯವನ್ನು ಹೋಗಲಾಡಿಸಲು ತಮ್ಮ ಇಡೀ ಜೀವನವನ್ನೆ ಮುಡಿಪಾಗಿಟ್ಟರು. ಈ ಕಾರ್ಯದಲ್ಲಿ ಚನ್ನಯ್ಯ ಅವರಿಗೆ ಶಕ್ತಿ ಮೀರಿ ನೆರವಾದ. ಅಣ್ಣನವರಿಗೆ ಅತ್ಯಂತ ಆನಂದವಾಯಿತು. ಚನ್ನಯ್ಯ, ಜೇಡರ ದಾಸೀಮಯ್ಯ, ಡೋಹರ ಕಕ್ಕಯ್ಯನಿಗಿಂತಲೂ ವಯಸ್ಸಿನಲ್ಲಿ ಹಿರಿಯ. ಆತ ವಚನಕಾರನೂ ಹೌದು.

**'ವೇದಶಾಸ್ತ್ರಕ್ಕೆ ಹಾರುವನಾಗಿ, ವೀರ ವಿತರಣಕ್ಕೆ ಕ್ಷತ್ರಿಯನಾಗಿ, ಸರ್ವವನಾರೈದು ನೋಡುವಲ್ಲಿ ವೈಶ್ಯನಾಗಿ ವ್ಯಾಪಾರದೊಳಗಾಗಿ, ಕೃಷಿಯ ಮಾಡುವುದಕ್ಕೆ ಶೂದ್ರನಾಗಿ ಈ ಉಭಯವನರಿದು ಮರೆಯಲಿಲ್ಲ ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ ಅರಿ ನಿಜಾತ್ಮ ರಾಮರಾಮನಾ'**

ಹೀಗೆ ಬ್ರಾಹ್ಮಣ,ಕ್ಷತ್ರಿಯ, ವೈಶ್ಯ, ಶೂದ್ರ ಎಂದು ವರ್ಗೀಕರಿಸಿ ಮಾನವ ಮಾನವರಲ್ಲೇ ಭೇದ ಹುಟ್ಟಿಸಿ ಸಮಾಜದಲ್ಲಿ ಅಶಾಂತಿಗೆ ಕಾರಣವಾದ ಈ ಅನಿಷ್ಟ ಪದ್ಧತಿಯು ಇನ್ನೂ ಜೀವಂತವಾಗಿರುವುದು ಮಾನವ ಕುಲಕ್ಕೇ ಕಲಂಕ!

**'ನಡೆ ನುಡಿ ಸಿದ್ಧಾಂತವಾದಲ್ಲಿ ಕುಲಹೊಲೆ ಎಂಬ ಸೂತಕವಿಲ್ಲ ನುಡಿ ಲೇಸು ನಡೆ ಅಧಮವಾದಲ್ಲಿ ಅದೇ ಬಿಡುಗಡೆ ಇಲ್ಲದ ಹೊಲೆ. ಹುಸಿ ಕಳವು ಪರದಾರಂಗಳಲ್ಲಿ ಹಲಬನರಿಯದೆ ಕೆಟ್ಟು ನಡೆವತ್ತ ಮತ್ತೆ ಕುಲಜರೆಂಬರುಂಟೆ ಆಚಾರವೇ ಕುಲ ಅನಾಚಾರವೇ ಹೊಲೆ ಇಂತೀ ಉಭಯವ ತಿಳಿದರಬೇಕು ಕೈಯುಳಿಗತ್ತಿ ಅಡಿಗೂಂಟಕ್ಕಡಿಯಾಗಬೇಡ ಅರಿ ನಿಜಾತ್ಮ ರಾಮರಾಮನ"**

ನುಡಿದಂತೆ ನಡೆಯವದು ನಡೆದಂತೆ ನುಡಿಯುವದು ನಿರ್ಧಾರವಾದಮೇಲೆ ಕುಲ ಹೊಲೆ ಎಂಬ ಸೂತಕವಿಲ್ಲ. ನಡೆ ನುಡಿ ಒಂದಾಗದಿದ್ದರೆ ಅದೇ ಹೊಲೆ, ಸುಳ್ಳು, ಕಳ್ಳತನ, ಪರಸ್ತ್ರೀಯಲ್ಲಿ ಮೋಹ ಇಂಥ ಕೆಟ್ಟ ಕೃತ್ಯಗಳಿಂದ ಕೂಡಿದವನಿಗೆ ಕುಲಜನೆನ್ನಲಾಗದು. ಆಚಾರವೇ ಕುಲ ಅನಾಚಾರವೇ ಹೊಲೆ. ಇವೆರಡನ್ನು ತಿಳಿದಿರಬೇಕು.

**'ನರಕುಲ ಹಲವಾದಲ್ಲಿ ಯೋನಿಯುತ್ಪತ್ತಿ ಒಂದೇ ಭೇದ ಮಾತಿನ ರಚನೆ ಎಷ್ಟಾದಡೇನು ನಿಹಿತವರಿಯುವುದು ಒಂದೇ ಭೇದ.. .. ..**

ನರಕುಲ ಒಡೆದು ಹಲವು ಮಾಡಿ ತೋರಿಸಿದರೂ ಒಂದೇ ಭೇದ–ಗಂಡು ಹೆಣ್ಣು, ಪ್ರಕೃತಿಯಲ್ಲಿ ಅನೇಕ ವಸ್ತುಗಳು ಗೋಚರಿಸಿದರೂ ಅವುಗಳ ನೋಡುವ ದೃಷ್ಟಿ ಒಂದೇ. ಜೋಡಿಸಿಟ್ಟ ಗೊಂಬೆಗಳು ಅನೇಕ ಕಂಡರೂ ನೋಡುವ ದೃಷ್ಟಿ ಒಂದೇ. ಅದರಂತೆ ಹಲವು ಕುಲವಾದರೂ ಹೊಲೆ ಇಲ್ಲ; ಎಲ್ಲವೂ ಒಂದೆ!

**'ಸಾಂಖ್ಯ ಸ್ವಪಚ ಅಗಸ್ತ್ಯ ಕಬ್ಬಿಲ.. .. ..'**

ದೇವಾನುದೇವತೆಗಳಿಗೂ ಪೂಜ್ಯರೆನಿಸಿದ ಸಪ್ತಋಷಿಗಳೂ ನೀಚಕುಲದವರೇ: ಸಾಂಖ್ಯ ಋಷಿ ಶ್ವಪಚ(ಅಸ್ಪೃಶ್ಯ) ಅಗಸ್ತ್ಯ ಅಂಬಿಗ, ದೂರ್ವಾಸ ಮಚ್ಚಿಗ, ದಧೀಚಿ ಕೀಲಿಗ(ಬಡಿಗ), ಕಶ್ಯಪ ಕಮ್ಮಾರ, ರೋಮಜ ಕಂಚುಗಾರ, ಕೌಂಡಿಣ್ಯ ನಾವಿದ, ಇದನ್ನೆಲ್ಲ ತಿಳಿದ ಮೇಲೂ ಕೀಳೆಂಬುದೇಕೆ? ಹೀಗಿದ್ದರೂ ಸಪ್ತಋಷಿಗಳು ಸತ್ಯದಿಂದ ಮುಕ್ತರಾಗಿಲ್ಲ. ಸತ್ಯ ಸಾಧನೆಗೆ ಕುಲ ಮುಖ್ಯವಲ್ಲ ಸಾಧನೆ ಮುಖ್ಯ.

ಮಾದಾರ ಚನ್ನಯ್ಯ ತನ್ನ ವಚನಗಳನ್ನು ಆಗಾಗ ಅನುಭವಮಂಟಪದಲ್ಲಿ ಸಭಿಕರೆದುರಿಗೆ ಓದುತ್ತಿದ್ದ. ವಿದ್ವಾಂಸರುಗಳು ತಲೆದೂಗುತ್ತಿದ್ದರು. ಆ ವಚನಗಳ ಬಗ್ಗೆ ಚರ್ಚಿಸಿ ಚನ್ನಯ್ಯನನ್ನು ಪ್ರೋತ್ಸಾಹಿಸುತ್ತಿದ್ದರು. ಬಸವಣ್ಣನವರಂತೂ ತಮ್ಮ ಅನೇಕ ವಚನಗಳಲ್ಲಿ ಚನ್ನಯ್ಯನ ಕುರಿತು ಹೊಗಳಿದ್ದಾರೆ. ಚನ್ನಯ್ಯನ ಗುಪ್ತಭಕ್ತಿ, ಆತ್ಮಸಾಧನೆಗಳಿಂದ ಶಿವ ಸಂತುಷ್ಟನಾಗಿ ಆತನ ಸಾಧನೆಯನ್ನು ಬಹಿರಂಗಗೊಳಿಸಿದ್ದಾನೆ. ಚನ್ನಯ್ಯನ ಮನೆಯಲುಂಡ ಕಾರಣ 'ವೇದ ನಡುನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿತ್ತಯ್ಯ.. ..

**'ನಡೆ ಚನ್ನ ನುಡಿ ಚನ್ನ ಎಲ್ಲಿ ನೋಡಿದರೂ.. .. ..'**

ಚನ್ನಯ್ಯನ ಮನೆಯಲ್ಲಿ ಅಂಬಲಿಯನ್ನುಂಡ ಶಿವ, ಅಮೃತಕ್ಕಿಂತ ಶ್ರೇಷ್ಠವಾದ ಈ ಅಂಬಲಿಯ ಒಂದು ಸುರುಕೆಗೆ ಕೈಲಾಸವನ್ನೇ ಕೊಟ್ಟೆ ಇನ್ನೊಂದು ಸುರುಕಿಗೆ ಏನು ಕೊಡಲಿ? ಸಾಕು ಎಂದು ನಿರ್ಧರಿಸಿಕೊಂಡೇ ಚನ್ನಯ್ಯನ ಗುಪ್ತಭಕ್ತಿಯನ್ನು ಬಹಿರಂಗ ಪಡಿಸುತ್ತಾನೆ.

**'ಭಕ್ತರೇ ಸಮರ್ಥರು ಅಸಮರ್ಥರೆನಲುಂಟೆ?..**

ಕರಿಕಾಲ ಚೋಳರಾಜನ ಕುದುರೆ ಲಾಯದಲ್ಲಿ ಹುಲ್ಲು ತರುವ ಕೆಲಸ ಮಾಡುತ್ತ ಗುಪ್ತಭಕ್ತಿಯ ಸಾಮರ್ಥ್ಯ ಶಿವನನ್ನು ಒಲಿಸಿಕೊಂಡು ಅಂಬಲಿಯನ್ನು ಉಣಿಸಿದ. ಸಮಾಜದಲ್ಲಿರುವ ಮೇಲು-ಕೀಳುಗಳನ್ನು ಮೀರಿ ಮೇಲಕ್ಕೇರುತ್ತಾನೆ.

**'ಮಾದಾರ ಶಿವಭಕ್ತನಾದರೆ**
**ಆತನ ಹೊರೆಯಲ್ಲಿ ಭೃತ್ಯನಾಗಿಪ್ಪುದು ಕರ ಲೇಸಯ್ಯ..**
**'ದೇವಾ ನಿಮ್ಮ ಪೂಜಿಸಿ ಚನ್ನನಕುಲ ಚೆನ್ನಾಯ್ತು.. .**

ಚನ್ನನ ವ್ಯಕ್ತಿತ್ವ ಕುರಿತು 'ಚನ್ನ ನಡೆ ಚೆನ್ನ, ಚೆನ್ನನ ನುಡಿಚೆನ್ನ ಚನ್ನನ ಸಕಳಾಯಂ ಚನ್ನನಮೃತ ಸಮುದ್ರಂ ಚನ್ನ ರಕ್ಷಿಸುಗೆನ್ನಂ ಚನ್ನನ ಸುತನೆಂದು'

**'ಕುಲಕ್ಕೆ ತಿಲಕ ನಮ್ಮ ಮಾದಾರ ಚನ್ನಯ್ಯ.. .. ..'**
**'ಮಾದಾರ ಚನ್ನಯ್ಯನ ಮನೆಯ ಮಗ ನಾನು.. ..**
**'ಅಪ್ಪನು ನಮ್ಮ ಡೋಹರ ಕಕ್ಕಯ್ಯ**
**ಬೊಪ್ಪನು ನಮ್ಮ ಮಾದಾರ ಚನ್ನಯ್ಯ.. ..'**

ಮಾದಾರ ಚನ್ನಯ್ಯ ಬಸವೇಶ್ವರರಂತೆ ಉದಾರ ಹೃದಯದಿಂದ ಕಲ್ಯಾಣದ ಪ್ರಜೆಯೊಡನೆ ಹೊಂದಿಕೊಳ್ಳುವದು ತಡವಾಗಲಿಲ್ಲ. ಆತ ತನ್ನ ನೇಮದಂತೆ ಚರ್ಮಕಾರಿಕೆ ಕಾಯಕ, ಅಂಬಲಿ ದಾಸೋಹ ಮಾಡುತ್ತ ಶರಣರ ಸಂಗದಲ್ಲಿ ಮಹತ್ವದ ಸ್ಥಾನ ಪಡೆದ. ಸಾಧ್ವಿ ಗಂಗಮ್ಮನ ಅಂಬಲಿಯ ಕೀರ್ತಿ ಕಲ್ಯಾಣ ಪ್ರಾಂತದ ತುಂಬ ಹರಡಿತು. ರಾಜಾಬಿಜ್ಜಳನ ಕಿವಿಗೂ ಬಿತ್ತು. ಆತನೂ ಅಂಬಲಿಯ ರುಚಿ ನೋಡಬಯಸಿದ. ಓರ್ವ ರಾಜಭಟನ ಕೈಯಲ್ಲಿ ಬಂಗಾರದ ತಂಬಿಗೆಯನ್ನು ಕೊಟ್ಟು ಚನ್ನಯ್ಯನ ಮನೆಯಿಂದ ಅಂಬಲಿ ತರಲಿಕ್ಕೆ ಹೇಳಿದ. ಭಟ ಚನ್ನಯ್ಯನ ಗುಡಿಸಲಿಗೆ ಹೋಗಿ ಮಹಾರಾಜರಿಗಾಗಿ ಅಂಬಲಿ ಬೇಡಿದ. ಚನ್ನಯ್ಯ- ಈ ಪವಿತ್ರ ಅಂಬಲಿಯನ್ನು ಭವಿಗಳಿಗೆ ಕೊಡಲಾಗದು. ಎಂದು ನಿಷ್ಠುರವಾಗೆ ಹೇಳಿದ. ಚನ್ನಯ್ಯ ರಾಜಾಜ್ಞೆಯನ್ನು ಮೀರಿದನೆಂದು ಭಟ ಕೋಪದಿಂದ ಅಂಬಲಿ ಗಡಿಗೆಯನ್ನೇ ಒದ್ದುಬಿಟ್ಟ. ತಾನೂ ಬಿದ್ದ. ಅಂಬಲಿ ಉಕ್ಕಿ ಹರಿಯತೊಡಗಿತು. ನೋಡು ನೋಡುತ್ತಿದ್ದಂತೆ ಬೀದಿಗೆ ಹರಿದು, ನದಿಗೆ ಮಹಾಪೂರ ಬಂದಂತಾಯಿತು. ಬಸವಣ್ಣನವರಿಗೂ ಸುದ್ದಿ ಮುಟ್ಟಿತು. ಅವರು ಧಾವಿಸಿ ಬಂದರು. ಅಂಬಲಿ ಉಕ್ಕಿಉಕ್ಕಿ ಹರಿಯುತ್ತಿತ್ತು. ಕಾರಣ ತಿಳಿದು ಬಿಜ್ಜಳನಲ್ಲಿಗೆ ನಡೆದು, ಈಗಲೇ ಹೋಗಿ ಚನ್ನಯ್ಯನಲ್ಲಿ ಕ್ಷಮೆ ಬೇಡಬೇಕು. ತಡ ಮಾಡಿದರೆ ಕಲ್ಯಾಣ ನಗರವೇ ಅಂಬಲಿಯಲ್ಲಿ ಮುಳುಗಿ ಹೋಗುತ್ತದೆ ಎಂದು ಎಚ್ಚರಿಸಿದರು. ಬಿಜ್ಜಳ ಮರುಮಾತಾಡದೆ ಹೋಗಿ ಚನ್ನಯ್ಯನಲ್ಲಿ ಕ್ಷಮೆ ಕೇಳಿದ. ತಕ್ಷಣ ಅಂಬಲಿ ಉಕ್ಕುವದು ನಿಂತಿತು. ಈಗಾಗಲೇ ಹರಿದ ಅಂಬಲಿ ನಗರದಾಚೆಯ ಒಂದು ದೊಡ್ಡ ತಗ್ಗಿನಲ್ಲಿ ಸಂಗ್ರಹವಾಗಿ ಕೆರೆಯಂತಾಗಿತ್ತು. ಅದಕ್ಕೆ ಜನರು ಅಂಬಲಿಕುಂಡ ಎಂದರು. ಅದುಸಸ್ತಾಪೂರ-ಉಮ್ಮರ್ಗಾ ಮಾರ್ಗದಲ್ಲಿ ಹತ್ತು ಕಿ.ಮೀ. ಅಂತರದಲ್ಲಿದೆ. ಆ ಸ್ಥಾನವು ಪ್ರಕೃತಿಯ ಮಡಿಲಲ್ಲಿ ಸುಂದರವಾಗಿದೆ. ಆ ಕುಂಡ ಈಗಲೂ ಇದೆಯಂತೆ. ಅದರ ನೀರು ಅಂಬಲಿಯ ರುಚಿಯಾಗಿದ್ದು ಆ ನೀರು ಕುಡಿದರೆ ರೋಗ ರುಜಿನುಗಳು ದೂರಾಗುತ್ತವಂತೆ!

■■

# ವೆಂಕಣ್ಣಯ್ಯನವರ 'ಶಿವತತ್ತ್ವಸಾರ' : ಲಿಂಗಾಯತ ವಿಚಾರ

● ಡಾ. ಗುರುಪಾದ ಮರಿಗುದ್ದಿ

ಕುವೆಂಪು ಅವರಂತಹ ಅತಿರಥ ಮಹಾರಥರಿಗೆ ಗುರುಗಳೂ, ಮಾರ್ಗದರ್ಶಕರೂ ಆಗಿದ್ದ ಟಿ. ಎಸ್. ವೆಂಕಣ್ಣಯ್ಯ ಅವರು (೧೮೮೫–೧೯೩೯) ಹೆಚ್ಚು ಬರೆಯದಿದ್ದರೂ, ಕೆಲವು ಲೇಖನ, ಸಂಪಾದನೆ, ಇತರ ಬರಹಗಳಿಂದ ಆಧುನಿಕ ಕನ್ನಡದ ಸಂಶೋಧನೆ, ವಿಮರ್ಶೆಗಳಿಗೆ ಚಾಲನೆ ನೀಡಿದವರು. ಬೆಂಗಳೂರು ಕಾಲೇಜು, ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಅಧ್ಯಯನಕ್ಕೆ ಭದ್ರ ಬುನಾದಿ ಹಾಕಿದ ಅವರು ಎ. ಆರ್. ಕೃಷ್ಣಶಾಸ್ತ್ರಿ ಅವರ ಜೊತೆಗೆ ಸೇರಿಕೊಂಡು ಪ್ರಬುದ್ಧ ಕರ್ನಾಟಕ ಪತ್ರಿಕೆ ಆರಂಭಿಸಿ ಕರ್ನಾಟಕ ಸಂಘ ಆರಂಭಿಸಿ ಸಾಹಿತ್ಯದ, ಸಂಸ್ಕೃತಿಯ ಕೆಲಸ ಕಾರ್ಯಗಳಿಗೆ ಶಕ್ತಿ ತುಂಬಿದರು. ಅವರು ಸಾಧಿಸಿದ ಹಲವು ಪ್ರಥಮಗಳಲ್ಲಿ 'ಬಸವರಾಜದೇವರ ರಗಳೆ'ಯೂ ಒಂದಾಗಿದೆ. ೧೯೩೦ ರಲ್ಲಿ ನಾಲ್ಕು ಪ್ರತಿಗಳ ಸಹಾಯದಿಂದ ಮೊದಲ ಸಲ ಈ ರಗಳೆಯನ್ನು ಸಂಪಾದಿಸಿ ಪ್ರಕಟಿಸಿದ್ದು, ಅದಕ್ಕೆ ಉಪಯುಕ್ತವಾದ, ದೀರ್ಘವಾದ ಪೀಠಿಕೆ ಬರೆದಿದ್ದಾರೆ.

ಅವರ ಮಹತ್ವದ ಲೇಖನಗಳಿರುವ 'ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಇತರ ಲೇಖನಗಳು' ಕೃತಿ ೧೯೫೮ ರಲ್ಲಿ ಹೊರಬಂದಿದೆ. ಇದರಲ್ಲಿ ಬಸವರಾಜದೇವರ ರಗಳೆ, ಬಿಜ್ಜಳನು ಜೈನನೇ, ಹನ್ನೆರಡು ಹದಿಮೂರನೆಯ ಶತಮಾನಗಳ ಕನ್ನಡ ಸಾಹಿತ್ಯ ಚರಿತ್ರೆ, ಶಿವತತ್ತ್ವಸಾರ ಎಂಬ ನಾಲ್ಕು ಲೇಖನಗಳು ಶರಣರಿಗೆ ಸಂಬಂಧಪಡುವ ಲೇಖನಗಳಿವೆ. 'ಶಿವತತ್ತ್ವಸಾರ'ವನ್ನು ಹೊರತುಪಡಿಸಿದರೆ, ಉಳಿದ ಮೂರು ಲೇಖನಗಳಲ್ಲಿ ಅವರು ಹೇಳಿರುವ ಮಹತ್ವದ ಅಂಶಗಳಿವು. ೧) ಹರಿಹರಕವಿ ಬಸವರಾಜದೇವರ ರಗಳೆಯಲ್ಲಿ ಕೇವಲ ಬಸವಣ್ಣನ ಧಾರ್ಮಿಕ ಬದುಕಿಗೆ ಒತ್ತುಕೊಟ್ಟು ಚಿತ್ರಣ ನೀಡಿದ್ದು, ಲೌಕಿಕ ವಿವರಗಳು ಕವಿಗೆ ಮುಖ್ಯ ಎನಿಸಿಲ್ಲವಾಗಿ ಆ ಬಗೆಯ ಚಿತ್ರಣ ಬರುವುದಿಲ್ಲ. ೨) ಕಾವ್ಯ ಮತ್ತು ಶಾಸನಗಳ ಆಧಾರಗಳು ಬಿಜ್ಜಳ ಶೈವವೆಂಬುದಕ್ಕೆ ಪೂರಕವಾಗಿವೆ; ಸಂಖ್ಯೆ ಮತ್ತು ಆ ಕಾಲದ ಮತಪ್ರಚಾರಕರ ಉತ್ಸಾಹ ಕಂಡರೆ ಬಸವೇಶ್ವರರು 'ಮತಸ್ಥಾಪಕರಲ್ಲದಿದ್ದರೆ ಒಬ್ಬ ದೊಡ್ಡ ಮತಸಂಸ್ಕಾರಕರ್ತರಾದರೂ' ಆಗಿರಬೇಕು.

ಆದರೆ ವೆಂಕಣ್ಣಯ್ಯ ಅವರು ಬರೆದ ಮೂವತ್ತೈದು ಪುಟ ವ್ಯಾಪ್ತಿಯ 'ಶಿವತತ್ತ್ವಸಾರ' ಲೇಖನವು ಲಿಂಗಾಯತ ತತ್ತ್ವಜ್ಞಾನ, ಧರ್ಮಗಳ ಸ್ವರೂಪದ ಮೇಲೆ ಅಂದಿನ ಕಾಲಕ್ಕಾಗಲೆ ಹೊಸ ಬೆಳಕು ಬೀರಿರುವುದನ್ನು ಗುರುತಿಸಬೇಕಿದೆ. ಪೂರ್ವದಲ್ಲಿ ಇದ್ದ ವೀರಶೈವ ಮತವನ್ನು ಶರಣರು ಸಂಸ್ಕರಿಸಿದರೆಂದು, ವಚನಕಾರರು ಹೊಸ ಮತವನ್ನು ಆರಂಭಿಸಿದರೆಂದು ಎರಡು ಅಭಿಮತಗಳಿರುವುದನ್ನು ಗಮನಿಸುವ ಲೇಖಕರು ಹನ್ನೆರಡನೆಯ ಶತಮಾನಕ್ಕೆ ಹಿಂದೆ ಕನ್ನಡದಲ್ಲಿ, ಭಾರತೀಯ ಇತರ ದೇಶ ಭಾಷೆಗಳಲ್ಲಿ ವಚನ ಸಾಹಿತ್ಯ ಇರಲಿಲ್ಲ ಎಂದಿದ್ದಾರೆ. 'ಶಿವತತ್ತ್ವಸಾರ' ಎಂಬುದು ತೆಲಗು ಭಾಷೆಯಲ್ಲಿ ಹನ್ನೆರಡನೆಯ ಶತಮಾನದ ಕೊನೆಯಲ್ಲಿ ಹೊರಬಂದಿರುವ ಕಾವ್ಯಕೃತಿ, ಶಾಸ್ತ್ರಕೃತಿ ಆಗಿದೆ. ಇದನ್ನು ವೀರಶೈವ ಆರಾಧ್ಯರಾದ ಕವಿ ಮಲ್ಲಿಕಾರ್ಜುನ ರಚಿಸಿದ್ದು, ಕವಿ ಬಸವಣ್ಣನವರಿಂದ ಸಾಕಷ್ಟು ಪ್ರಭಾವಿತನಾಗಿದ್ದನು.

'ಶಿವತತ್ತ್ವಸಾರ' ಕೃತಿಯು ಆರಂಭದಲ್ಲಿ ಶಿವಸ್ತುತಿ, ಮಾಹೇಶ್ವರ, ಶಿವಸಂಹಿತೆ, ವೇದಾದಿ ಗೋ ಬ್ರಾಹ್ಮಣರಿಗೆ ನಮನ ಬಂದಿದೆ ಎಂದು ತಿಳಿಸುವ ವೆಂಕಣ್ಣಯ್ಯನವರು, ವಚನಕಾರರ ಮತಕ್ಕೆ ಭಿನ್ನವಾಗಿರುವ ಈ ಆರಂಭಿಕ ಸ್ತುತಿ ತೆಲಗು ಲಿಂಗಧಾರಿ ಆರಾಧ್ಯ ಬ್ರಾಹ್ಮಣರಿಗೆ ಸೇರಿದ್ದು ಎನ್ನುವರು. ಎಲ್ಲ ಪಶುಗಳಿಗೆ (ಜೀವಿಗಳಿಗೆ) ರುದ್ರನೇ ಪತಿಯಾದುದರಿಂದ ವೇದೋಕ್ತವಾಗಿ ಪಶುಪತಿಯನ್ನು ಆರಾಧಿಸಬೇಕು ಎನ್ನುವ ಮಲ್ಲಿಕಾರ್ಜುನ ಪಂಡಿತರ ಕಾವ್ಯಭಾಗ (ತೆಲಗು) ನೀಡುತ್ತ, ವಚನಕಾರರು ವೇದೋಕ್ತ ಮಾರ್ಗಕ್ಕೆ ಪ್ರಾಶಸ್ತ್ಯ ನೀಡಿಲ್ಲವೆಂದು ಸೂಚಿಸಿದ್ದಾರೆ. (ಪು. ೨೧೨) ಶಿವತತ್ತ್ವಸಾರದ ೪೦ ರಿಂದ ೫೫ ರವರೆಗಿನ ಪದ್ಯಗಳಲ್ಲಿ ದ್ವೈತ ತತ್ತ್ವ ಪ್ರತಿಪಾದಿತವಾಗಿದ್ದು, 'ವಚನಕಾರರು ಈ ಮತವನ್ನು ಒಪ್ಪುವಂತೆ ಕಾಣುವುದಿಲ್ಲ' ಎನ್ನುವರು. ಶಿಖೆ, ಗಾಯತ್ರೀ, ಯಜ್ಞೋಪವೀತಗಳು

'ಕವಿಶೈಲ' ನಮಾಜ ಮಾಳ, ಸಂಕೇಶ್ವರ–೫೯೧೩೧೩ ಮೊ : ೯೪೪೯೪೬೫೬೧೭

ಆರಾಧ್ಯರಿಗೆ ಪವಿತ್ರ, ಬಸವಣ್ಣನವರು ಈ ಕುರುಹುಗಳನ್ನು ತ್ಯಜಿಸಿ ಹೊರಬಂದರು. ಧರ್ಮವು ಅವರಿಗೆ ವೇದೋಕ್ತವಾಗಿದ್ದರೆ ವಚನಕಾರರಿಗೆ ವೇದೋಕ್ತವಲ್ಲ. ಇಲ್ಲಿ ವೆಂಕಣ್ಣಯ್ಯ ಅವರು ಮಲ್ಲಿಕಾರ್ಜುನ ಪಂಡಿತರಿಗೆ ಬಸವಣ್ಣನವರ ಮೇಲೆ ಗೌರವಾದರಗಳಿದ್ದರೂ ಅವರು ಸಾರಿದ ಶಿವತತ್ತ್ವಕ್ಕೂ ಬಸವಣ್ಣ, ವಚನಕಾರರ ವಚನಧರ್ಮಕ್ಕೂ ಇರುವ ವ್ಯತ್ಯಾಸಗಳನ್ನು ಚೆನ್ನಾಗಿ ಗುರುತಿಸುವರು.

ಭಕ್ತ ಮತ್ತು ಭಕ್ತಿಯ ಪಾರಮ್ಯ ಹೇಳುವ ಕಾವ್ಯದ ಸುಮಾರು ೨೪ ತೆಲಗು ಕಂದಪದ್ಯಗಳನ್ನು ಉದ್ಧರಿಸಿ ಅದರ ಸಂಗ್ರಹ ಕನ್ನಡದ ಅನುವಾದ ನೀಡಿ, ಈ ಭಾಗದಲ್ಲಿ ಮಾತ್ರ ಕವಿಗೂ ವಚನಕಾರರಿಗೂ ತುಸು ಸಾಮ್ಯತೆ ಇರುವುದೆಂದು ಎತ್ತಿ ತೋರುವರು. ಭಕ್ತನು ಸದಾ ಭಕ್ತಿಯಿಂದ ಉತ್ತಮನಾಗುವನು. ಶಿವಭಕ್ತರಲ್ಲಿ ಕುಲಜ, ಕುಲಹೀನ ಎಂಬ ತಾರತಮ್ಯ ಮಾಡಬಾರದು. ಭಕ್ತನಲ್ಲಿ ಶಿವನಿರುತ್ತಾನೆ. ಶಿವಭಕ್ತನಾದ ಶ್ವಪಚನು ದ್ವಿಜನಿಗೆ ಸಮಾನ, ಶಿವಭಕ್ತಿ ಇಲ್ಲದ ದ್ವಿಜನು ಶ್ವಪಚನಿಗೂ ಕೀಳು– ಹೀಗೆಲ್ಲ ಪದ್ಯಗಳಲ್ಲಿದೆ. ಇದಕ್ಕೆ ವಿವರಣೆ ನೀಡುವಾಗ ವೆಂಕಣ್ಣಯ್ಯನವರು ಸದಸದ್ ವಿವೇಕ ತೋರಿದ್ದಾರೆ. ಈ ಭಾಗದಲ್ಲಿ ಪಂಡಿತಾರಾಧ್ಯರಿಗೂ, ವಚನಕಾರರಿಗೂ ವಿಶೇಷ ಮತಭೇದವಿಲ್ಲ. ಸ್ವಲ್ಪ ಹೆಚ್ಚು ಕಡಿಮೆ ಇದೇ ಭಾವಗಳು ವಚನ ಗ್ರಂಥಗಳಲ್ಲಿ ಮೇಲಿಂದ ಮೇಲೆ ಬರುತ್ತವೆ. ಆದರೆ ಇಲ್ಲಿ ಕೂಡ ಪಂಡಿತರು ಜಾತಿ ಶ್ರೇಷ್ಠತೆಗೆ ಸ್ಥಾನವನ್ನು ಉಳಿಸಿರುತ್ತಾರೆ. ಅವರಲ್ಲಿ ಕುಲಜರು ಕುಲಹೀನರು ಎಂಬ ಭೇದ ಮಾಡಬಾರದೆಂದು ಹೇಳಿದ್ದರೂ, ಕುಲವಿದ್ಯಾಚಾರಗಳಿದ್ದವನು ಶಿವಭಕ್ತಿಯುಳ್ಳವನೂ ಆದರೆ ಚಿನ್ನಕ್ಕೆ ಸೌರಭ ಬಂದಂತೆ ಆಗುತ್ತದೆಂಬುದರಿಂದಲೂ ಶಿವಭಕ್ತನಾದವನು ಅಧಿಕಾಪರಾಧ ಮಾಡಿದವನಾದರೂ ಬ್ರಾಹ್ಮಣನಂತೆಯೆ ವಧೆಗೆ ಅನರ್ಹನೆಂದು ಹೇಳುವದರಿಂದಲೂ ಜಾತಿಯಿಂದ ಬ್ರಾಹ್ಮಣನು ಶ್ರೇಷ್ಠನೆಂಬ ತಮ್ಮ ಭಾವನೆಯನ್ನು ಸೂಚಿಸಿರುತ್ತಾರೆ. ಈ ಭಾವನೆಗೆ ವಚನಕಾರರು ಸಮ್ಮತಿಸುವುದಿಲ್ಲ. (ಪು.೨೨) ಜಾತಿ, ಮತ, ಕುಲಗಳಿಂದ ಮುಕ್ತರಾಗದ ಮತ್ತು ಶ್ರೇಷ್ಠತೆಯ ವ್ಯಸನ ಬಿಡಲಾರದ ಆರಾಧ್ಯರಿಗೂ ಇವುಗಳಿಂದ ಮುಕ್ತವಾದ ಸಮಾಜ ವ್ಯವಸ್ಥೆಗೆ ಕನಸು ಕಂಡ ವಚನಕಾರರಿಗೂ ವ್ಯತ್ಯಾಸ ಇದೆ.

ಅದರಂತೆ ಲಿಂಗಪೂಜಾ ವಿಧಾನದಲ್ಲಿರುವ ವ್ಯತ್ಯಾಸವನ್ನು ಶಿವತತ್ತ್ವಸಾರ ಮತ್ತು ವಚನಗಳಿಂದ ವೆಂಕಣ್ಣಯ್ಯನವರು ಚೆನ್ನಾಗಿ ಗುರುತಿಸುವರು. ಪಂಡಿತಾರಾಧ್ಯರು ಶಿವದೇವಾಲಯದಲ್ಲಿ ನಡೆಯಬೇಕಾದ ಪೂಜೆಯ ಬಗೆಗೆ, ಪೂಜಾ ಅಧಿಕಾರಿಗಳ ಬಗೆಗೆ ಹೇಳಿದ್ದಾರೆ. ವಚನಕಾರರು ಇಷ್ಟಲಿಂಗದ ಪೂಜೆ ಮಾಡಬೇಕು, ದೇವಾಲಯಕ್ಕೆ ಹೋಗಬೇಕಿಲ್ಲ ಎನ್ನುವರು. ಎಂದರೆ ಸ್ಥಾವರ ಪೂಜೆಗೆ ಭಿನ್ನವಾದುದು ಇಷ್ಟಲಿಂಗ ಪೂಜೆ, ಅದನ್ನು ಭಕ್ತನೇ ಮಾಡಬೇಕು ಇತರರಲ್ಲ ಎಂಬ ಮಹತ್ವದ ತತ್ತ್ವ ಬಸವಾದಿ ಶರಣರ ನೂತನ ಆವಿಷ್ಕಾರ ಎನ್ನುವುದನ್ನು ಅವರು ಗ್ರಹಿಸಿದ್ದರು. ಶಿವಪೂಜೆಯ ಕುರಿತಾದ ಸುಮಾರು ಹತ್ತು ತೆಲಗು ಪದ್ಯಗಳನ್ನು ನೀಡಿ, ಸಂಗ್ರಹದಲ್ಲಿ ಕನ್ನಡದ ಅರ್ಥ ಕೊಟ್ಟು ಪಂಡಿತಾರಾಧ್ಯರು ದೇವಾಲಯದಲ್ಲಿ ಸ್ಥಾಪಿತವಾದ ಲಿಂಗಪೂಜೆಯ ಬಗೆಗೆ ಹೇಳಿದರೆ, ವಚನಕಾರರು ಇದನ್ನು ಪುರಸ್ಕರಿಸುವುದಿಲ್ಲ ಎನ್ನುತ್ತ ಆದ ಕಾರಣ ಲಿಂಗಧಾರಣವೂ ಇಷ್ಟಲಿಂಗಪೂಜೆಯೂ ಪಂಡಿತಾರಾಧ್ಯರ ಶೈವಮತಕ್ಕೆ ಸೇರಿದುವಲ್ಲವೆಂದು ನಿಶ್ಚಿತವಾಗುವುದಿಲ್ಲವೇ? ಎಂದು ವೆಂಕಣ್ಣಯ್ಯ ಅವರು ಸಕಾರಣವಾಗಿ ಪ್ರಶ್ನಿಸುವರು.

ಶಿವಭಕ್ತಿರಹಿತರು, ಶಿವನಿಂದಕರು, ಶಿವಾಪಚಾರಕರು ಕುರಿತಾಗಿ ಅವರು **'ಶಿವತತ್ತ್ವಸಾರ'**ದ ಹತ್ತು ಮೂಲ ಪದಗಳನ್ನು ನೀಡಿ, ಅರ್ಥವನ್ನು ಕೊಡುವರು. ಮಲ್ಲಿಕಾರ್ಜುನ ಪಂಡಿತರು ಇಲ್ಲಿ ಹೇಳಿರುವ ಕೆಲವು ವಿಚಾರಗಳು ವಚನಕಾರರ ವಿಚಾರಗಳೊಂದಿಗೆ ಸಹಮತವಿದ್ದರೂ ಒಂದೆರಡು ಅಂಶಗಳಲ್ಲಿ ಮಹತ್ವದ ಭಿನ್ನತೆ ಇದೆ ಎನ್ನುವರು. ಭಿನ್ನತೆ ಇರುವ ಪದ್ಯವಿದು;

**ಪಾವನಮೈನ ಶಿವಕ್ಷೇ**
**ತ್ರಾವಾಸಮುನಂದು ನೊಂಡೆನನಶನ ವಿಧಿಮೈ**
**ಜೀವತ್ಯಾಗಮು ಜೇಸಿನ**
**ಭೂಮಿನುತುಡು ಮೋಕ್ಷಪದವಿ ಬೊಂದು ಮಹೇಶಾ**

ಇದಕ್ಕೆ ವೆಂಕಣ್ಣಯ್ಯ ನೀಡುವ ಅನುವಾದ– 'ಪಾವನವಾದ ಶಿವಕ್ಷೇತ್ರದಲ್ಲಿ ಅನಶನ ವಿಧಿಯಿಂದ ಜೀವತ್ಯಾಗ ಮಾಡಿದವನಿಗೆ ಮೋಕ್ಷಪದವಿ ಪ್ರಾಪ್ತವಾಗುತ್ತದೆ.' ಆದರೆ ಈ ಅಭಿಮತವು ವಚನಕಾರರಿಗೆ ಸಮ್ಮತವಿಲ್ಲ ಎಂದೇ ಅವರು ವಿಮರ್ಶೆ ಮಾಡಿರುವರು. ಅದರಂತೆ ಬ್ರಾಹ್ಮಣರ ನಿಂದಕರು ಪುಣ್ಯವಿಹೀನರು. ನರಕಭಾಜನರು ಎಂಬುದು ವಚನಕಾರರ ನಂಬಿಕೆಯಲ್ಲ ಎಂದಿದ್ದಾರೆ.

ಮುಖ್ಯವೆಂದರೆ ಬಸವಾದಿ ವಚನಕಾರರು ಲಿಂಗಧಾರಣೆ (ಇಷ್ಟಲಿಂಗ) ಮಾಡುತ್ತಿದ್ದರು. ಅದನ್ನು ಮಾತ್ರ ಪೂಜಿಸುತ್ತಿದ್ದರು ಎಂಬುದನ್ನು ಮಲ್ಲಿಕಾರ್ಜುನ ಪಂಡಿತ ಕವಿ ಅರಿತಿದ್ದ ಎನ್ನುವುದಕ್ಕೆ ಮೂರು ಪದ್ಯಗಳನ್ನು ಇಲ್ಲಿ ನೀಡಲಾಗಿದೆ. ಇವು ಮೂರು ಬಸವಣ್ಣನವರ ಬಗೆಗಿನ

ಗೌರವದಿಂದ ಕವಿ ಬರೆದ ಪದ್ಯಗಳಾಗಿವೆ. ಕಾವ್ಯದ ೪೩೧, ೪೩೨ ಕ್ರಮಾಂಕದ ಪದ್ಯಗಳಿವು. ಆರಾಧ್ಯರು ಪೂರ್ವಿಕರಿಂದ ಪಡೆದ ಲಿಂಗಪೂಜೆಗೂ, ಬಸವಣ್ಣ ರೂಢಿಸಿದ ಲಿಂಗಪೂಜೆಗೂ ಭಿನ್ನತೆ ಇತ್ತು ಮತ್ತು ಅದರ ಸ್ಪಷ್ಟ ಅರಿವು ಶಿವತತ್ತ್ವಸಾರದ ಕವಿಗಿತ್ತು ಎನ್ನುವುದು ಗಮನಾರ್ಹ. ಅದರಂತೆ ಶಿವಭಕ್ತಿಯ ಪಾರಮ್ಯ ಮತ್ತು ಕರ್ಮತತ್ತ್ವ ನಿರಸನಗಳಲ್ಲಿ ಕವಿ ಮತ್ತು ವಚನಕಾರರು ಸಮಾನ ವಿಚಾರ ಹೊಂದಿರುವುದನ್ನು ಗುರುತಿಸುವರು. ಜಪ–ತಪಗಳು, ವಿಧಿ–ವಿಧಾನಗಳು ಶಿವನ ಒಲಿಸುವ ಸಾಧನಗಳಲ್ಲ ಎಂದು ಎರಡೂ ಕಡೆ ಬರುತ್ತದೆ. ಭಕ್ತಿಯನ್ನು ದೇವರು ಗ್ರಹಿಸಬಲ್ಲನು ಜಾತಿ, ಮತ, ಕುಲಗಳ ಮೇಲು–ಕೀಳುಗಳನ್ನಲ್ಲ.

ಮಲ್ಲಿಕಾರ್ಜುನ ಪಂಡಿತಾರಾಧ್ಯರ 'ಶಿವತತ್ತ್ವಸಾರ' ವನ್ನು ಈ ತೆರನಲ್ಲಿ ಪರಿಶೀಲಿಸಿ ವೆಂಕಣ್ಣಯ್ಯ ಅವರು ಲೇಖನದ ಕೊನೆಯಲ್ಲಿ ಹೇಳುವ ಸಮಾರೋಪ ಮಾತುಗಳು ಗಮನ ಸೆಳೆವಂತಿವೆ. ವಚನಕಾರರು ಷಟ್‌ಸ್ಥಲ ಸಿದ್ಧಾಂತ ಅನುಸರಿಸಿ ಸಾಧನೆ ಮಾಡುವರು. ವಚನಕಾರರೂ ಅವರ ಅನುಯಾಯಿಗಳೂ ಈ ಸಿದ್ಧಾಂತಕ್ಕೆ ಅನುಸಾರವಾಗಿಯೇ ಸಾಧನೆ ಮಾಡುತ್ತಾರೆ. ವಚನಕಾರರ ಮತಕ್ಕೆ ತಳಹದಿಯಂತಿರುವ ಷಟ್ಸ್ಥಲ ಸಿದ್ಧಾಂತದ ಹೆಸರು ಕೂಡ ಶಿವತತ್ತ್ವಸಾರದಲ್ಲಿ ಕಂಡುಬರುವುದಿಲ್ಲ. ವಚನಕಾರರ ಕಾಲಕ್ಕೆ ಅತಿ ಸಮೀಪದಲ್ಲಿದ್ದ ಮತ್ತು ವೀರಶೈವ ಸಾಹಿತ್ಯಕ್ಕೆ ಆದಿಕವಿಗಳೆಂದು ಪ್ರಸಿದ್ಧರಾಗಿರುವ ಹರೀಶ್ವರ ರಾಘವಾಂಕರ ಗ್ರಂಥಗಳಲ್ಲಿ ಎಲ್ಲಿಯೂ ನಮಗೆ ತಿಳಿದಮಟ್ಟಿಗೆ ಈ ಷಟ್ಸ್ಥಲ ಸಿದ್ಧಾಂತದ ಕುರುಹಿಲ್ಲ. ಆದರ್ಶ ಪುರುಷರೆಂದು ವಚನಕಾರರು ಭಾವಿಸಿರುವ ತಮಿಳು ದೇಶದ ಪುರಾತನರಲ್ಲಿ ಈ ಸಿದ್ಧಾಂತವು ಪ್ರಚಾರದಲ್ಲಿತ್ತೆಂದು ಕಂಡುಬರುವುದಿಲ್ಲ. ಇದು ವಚನಕಾರರ ಮತದ ಒಂದು ವೈಶಿಷ್ಟ್ಯವೆಂದು ತೋರುತ್ತದೆ. (ಪು–೨೩೪) ಇಲ್ಲಿ ಲೇಖಕರು ಷಟ್‌ಸ್ಥಲ ವಚನಕಾರರ ಅನನ್ಯ ಲಕ್ಷಣ ಮತ್ತು ಕೊಡುಗೆ ಎಂದಿದ್ದು, 'ವಚನಕಾರರ ಮತ' ಎಂದು ವಚನಕಾರರ ಧರ್ಮ ಅರ್ಥದಲ್ಲಿ ಗುರುತಿಸಿದ್ದಾರೆ.

'ವಚನಕಾರರೂ ಅವರ ಅನುಯಾಯಿಗಳೂ ಲಿಂಗಧಾರಿಗಳು. ಅವರಿಗೆ ಲಿಂಗವಂತರೆಂಬ ಹೆಸರು ಬಳಕೆಗೆ ಬಂದಿದೆ' ಎಂದು ಮುಂದೆ ಸ್ಪಷ್ಟವಾಗಿ ಸೂಚಿಸುವರು. ಈ ಲೇಖನದಲ್ಲಿ ವೆಂಕಣ್ಣಯ್ಯನವರು ಒಂದು ಹಂತದಲ್ಲಿ ಶಿವತತ್ತ್ವಸಾರವನ್ನು ಪರಿಚಯಿಸಿದರೂ, ಅವರ ದೃಷ್ಟಿ ಅದರಲ್ಲಿಯ ತತ್ತ್ವ, ಧೋರಣೆಗಳಿಗೂ, ವಚನಕಾರರ ತತ್ತ್ವ, ಧೋರಣೆಗಳಿಗೂ ಹೇಗೆ ಭಿನ್ನತೆ ಇದೆ ಎನ್ನುವುದರ ಮೇಲಿದೆ. ವೇದೋಕ್ತ ಶೈವಮಾರ್ಗದ ಶಿವತತ್ತ್ವಸಾರ ಮತ್ತು ವಚನ ಮಾರ್ಗಗಳು ಬೇರೆಯಾಗಿವೆ. ಹರಿಹರ, ರಾಘವಾಂಕರು ವಚನಕಾರರ ಬಗೆಗೆ ಗೌರವ ಹೊಂದಿದ್ದರೂ, ತಾತ್ವಿಕವಾಗಿ ಶಿವತತ್ತ್ವಸಾರಕ್ಕೆ ಸನಿಹವಾಗಿದ್ದರು. ಇವೆಲ್ಲದರ ಪರಿಣಾಮ ಎಂದರೆ 'ವಚನಕಾರರ ಕಾಲದಲ್ಲಿ ಅಂದರೆ ಸುಮಾರು ೧೨ನೇ ಶತಮಾನದಲ್ಲಿ ಶೈವಮತದ ಒಂದು ಪಂಗಡವು ಹುಟ್ಟಿ ತನ್ನ ಅಂತಃಸತ್ವದಿಂದಲೂ ವಚನಕಾರರ ದೃಢವಿಶ್ವಾಸಪೂರ್ವಕವಾದ ಪ್ರಚಾರದಿಂದಲೂ ಬಹುಬೇಗ ಕನ್ನಡ ನಾಡಿನಲ್ಲಿ ಹಬ್ಬಿ ಶೈವಮತದ ಬಹುಮಂದಿಯನ್ನು ತನ್ನ ಕಡೆಗೆ ಆಕರ್ಷಿಸಿರಬಹುದೆ? ಈ ಪಂಗಡದವರ ಒಂದು ವಿಶೇಷವೆಂದರೆ– ವರ್ಣಾಶ್ರಮಾಚಾರಗಳ ಅಡ್ಡಿಗಳನ್ನು ಬದಿಗೊತ್ತಿ ಶಿವಾಚಾರದವರಲ್ಲೆಲ್ಲ ಸಾಮಾಜಿಕ ಸಮತಾಭಾವವನ್ನು ಹರಡಿ ಶೈವ ಸಮಾಜಕ್ಕೆ ಒಂದು ಹೊಸ ಚೈತನ್ಯವನ್ನು ಕೊಡುವುದು ಎಂದು ತೋರುವುದು'.

ಪ್ರಸ್ತುತ ತಿಳಿಯಬೇಕಾದ ವಿಚಾರ ಎಂದರೆ ದಕ್ಷಿಣ ಕರ್ನಾಟಕದ ಭಾಗದಲ್ಲಿದ್ದ ಟಿ. ಎಸ್. ವೆಂಕಣ್ಣಯ್ಯ ಅವರು ವಚನಕಾರರನ್ನು ಅರಿಯಲು ತೆಲುಗು 'ಶಿವತತ್ತ್ವಸಾರ' ಒಳ್ಳೆಯ ಸಾಮಗ್ರಿ ಎಂದು ಭಾವಿಸಿದ್ದರು. ಅವರು ಆರಾಧ್ಯರಿಗೂ, ವಚನಕಾರರಿಗೂ ಇರುವ ಭಿನ್ನತೆಗಳನ್ನು ಧಾರ್ಮಿಕ, ತಾತ್ವಿಕ, ಸಾಮಾಜಿಕ ಭಿನ್ನ ದೃಷ್ಟಿಕೋನಗಳನ್ನು ಬಹು ಹಿಂದೆ ಗುರುತಿಸಿದ್ದರು. ಅವರು ಈ ಲೇಖನದಲ್ಲಿ ವೀರಶೈವ ಎಂದು ಪ್ರಯೋಗಿಸಿಲ್ಲ. ವಚನಕಾರರ ಮತ (ಧರ್ಮ) ವಚನಕಾರರ ಅನುಯಾಯಿಗಳು, ಲಿಂಗಧಾರಿ, ಲಿಂಗವಂತ ಎಂದು ಪ್ರಯೋಗಿಸಿದ್ದಾರೆ. ಆರಾಧ್ಯರ ಬಗೆಗೆ, ವಚನಕಾರರ ಬಗೆಗೆ ಇರುವ ಸಾಮ್ಯ–ವ್ಯತ್ಯಾಸಗಳನ್ನು ಡಾ. ಎಂ. ಎಂ. ಕಲಬುರ್ಗಿ, ಬಾಡಾಲು ರಾಮಯ್ಯ, ಜಾಜಿ ದೇವೇಂದ್ರಪ್ಪ ಅವರಿಗೆ ಮುಂಚೆ ಕಂಡುಕೊಂಡಿದ್ದರು. ಅವರ ಈ ಲೇಖನದಲ್ಲಿ ಲಿಂಗಾಯತ ಧರ್ಮದ ಕೆಲವು ಮುಖ್ಯ ತತ್ವಗಳ ಶೈವಕ್ಕೆ ಭಿನ್ನವಾದ ಲಕ್ಷಣಗಳ ಚಿಂತನೆಗಳಿವೆ.

■■

# ಹಿಂದೂ; ಧರ್ಮವಲ್ಲ

● ಶ್ರೀ ಆರ್. ಪಿ. ಅಪರಾಜ

ವಿಶ್ವದ ಇತರ ಧರ್ಮಗಳಂತೆ 'ಹಿಂದು' ಎಂಬುದು ಅಚ್ಚುಕಟ್ಟಾದ ಒಂದು ಧರ್ಮವಲ್ಲ. ಅದನ್ನು ಒಂದು ಧರ್ಮವೆಂದು ಪರಿಭಾವಿಸಿ ವ್ಯಾಖ್ಯಾನಿಸುವದು, ಇಲ್ಲವೆ ಒಂದು ವಿಶಿಷ್ಟ ಧರ್ಮದ ಮಿತಿಯಲ್ಲಿರಿಸಿ ನಿರೂಪಿಸುವದು ಕಷ್ಟಸಾಧ್ಯ.

ಹಿಂದೂ ಎಂಬುದಕ್ಕೆ ಸೀಮೆಯಿಲ್ಲ; ಅದು ಸೀಮಾತೀತ. 'ಹಿಂದೂ' ಏಕಮೇವ ನಿರ್ದಿಷ್ಟ ಮತ ಸಂಪ್ರದಾಯಗಳನ್ನು ತನ್ನಲ್ಲಿ ಸಂಯೋಜಿಸಿಕೊಳ್ಳದೆ ಇಲ್ಲವೆ ನಿಷೇಧಿಸದೆ, ಎಲ್ಲ ಮತ ಪಂಥಗಳ ಪಾರಂಪರ್ಯ ಆಚಾರ ವಿಚಾರಗಳನ್ನು ತನ್ನಲ್ಲಿ ಅಳವಡಿಸಿಕೊಂಡಿದೆ. ಶತ ಶತಮಾನಗಳ ಸಾಮೂಹಿಕ ಪ್ರಜ್ಞೆ ಮತ್ತು ಸ್ಪೂರ್ತಿಯನ್ನು ಪ್ರತಿಧ್ವನಿಸುವಂಥ ಹಿಂದೂ ಎಂಬುದು ಸನಾತನ ಧರ್ಮವೆಂದು ಕರೆಯುತ್ತಾರೆ.

ಇದು ಹಿಂದೂ ಧರ್ಮದ ಕುರಿತು ಸರ್ವೋಚ್ಚ ನ್ಯಾಯಾಲಯ ಮಾಡಿದ ವಿಮರ್ಶೆ

ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಅನ್ವಯ 'ಹಿಂದೂ' ಒಂದು ಪ್ರತ್ಯೇಕ ಧರ್ಮವಾಗಿರದೆ ಅದೊಂದು ಸರ್ವಧರ್ಮಗಳ ಸಂಗಮ ಅಥವಾ ಕೂಟ ಎಂದು ಅರ್ಥೈಸಬಹುದು. 'ಹಿಂದೂ' ಒಂದು ಒಕ್ಕೂಟವಾದರೆ ಇತರ ಸ್ವಾಯತ್ತ ಧರ್ಮಗಳು, ಹಿಂದೂ ಸಂಯುಕ್ತ ಧರ್ಮದ ಸದಸ್ಯ ಘಟಕಗಳು. ಹಿಂದೂ ಧರ್ಮ ಸಾಮಾನ್ಯವಾಗಿ ತನ್ನ ವಿವಿಧ ಅಂಗ ಘಟಕಗಳಲ್ಲಿ ಪರಸ್ಪರ ಶಾಂತಿ, ಸಾಮರಸ್ಯ, ಸೌಹಾರ್ದತೆ, ಭ್ರಾತೃತ್ವ ಕುದುರಿಸಿ ದೇಶದ ಸಕಲ ಶ್ರೇಯೋಭಿವೃದ್ಧಿಗೆ ಸಹಾಯಕಾರಿ.

ದುರ್ದೈವ; ಪ್ರಸ್ತುತ ಕಾಲದಲ್ಲಿ ಹಿಂದೂ ಒಕ್ಕೂಟ ಶಿಥಿಲಗೊಂಡಿದೆ. ಪ್ರಾಚೀನ ಕಾಲದಲ್ಲಿ ಆದರ್ಶನೀಯವಾಗಿದ್ದ ಧರ್ಮ ವ್ಯವಸ್ಥೆ ಇಂದು ಸಂಪೂರ್ಣವಾಗಿ ನಶಿಸಿಹೋಗಿದೆ. ಹಿಂದೂ ಮತ್ತು ಇತರ ಧರ್ಮಗಳಲ್ಲಿ ಪರಸ್ಪರ ಸಮರಸದ ಭಾವ ಬತ್ತಿದೆ. ಹಿಂದೂ ತನ್ನನ್ನು ಬ್ರಾಹ್ಮಣ್ಯದೊಂದಿಗೆ ಸಮೀಕರಿಸಿಕೊಂಡದ್ದು ಪ್ರಸ್ತುತ ದುರ್ದೆಸೆಗೆ ಕಾರಣವೆಂಬುದು ಸ್ಪಷ್ಟ. ಬ್ರಾಹ್ಮಣ್ಯಕ್ಕೆ ವೇದಾಗಮೋಪನಿಷತ್ತುಗಳು ಧರ್ಮಗ್ರಂಥಗಳು. (ವೈದಿಕ ಧರ್ಮ ವೇದಾಧಾರಿತವಾದುದು ಹಿಂದೂ ಧರ್ಮಕ್ಕೆ ಕೂಡ ವೇದಗಳೆ ಆಧಾರಗ್ರಂಥ.) ಹಿಂದೂ ತನ್ನ ಸರ್ವಮಾನ್ಯ ಲಕ್ಷಣಗಳನ್ನು ಮರೆತದ್ದು, ದೇಶದ ಸರ್ವಾಂಗೀಣ ಪ್ರಗತಿಗೆ ಕೂಡ ಮಾರಕವಾಗಬಲ್ಲದು. ಹಿಂದೂ 'ಹಿಂದುತ್ವ' 'ಹಿಂದೂ ರಾಷ್ಟ್ರ' 'ಹಿಂದೂ ರಾಷ್ಟ್ರಧರ್ಮ' ಮುಂತಾದ ಘೋಷಣೆಗಳು ದೇಶದ ಆಂತರಿಕ ಶಾಂತಿ ಕದಡಲು ಕಾರಣವಾಗಬಹುದು.

ಹಿಂದೂ ಇತರ ಧರ್ಮಗಳಂತೆ ಒಂದು ಧರ್ಮವಲ್ಲ. ಅದಕ್ಕೆ ಏಕಮೇವ ಧರ್ಮಸಂಸ್ಥಾಪಕನಿಲ್ಲ; ಧರ್ಮಗ್ರಂಥವಿಲ್ಲ. (ರಾಮಾಯಣ ಮಹಾಭಾರತ ವಿಶಾಲವಾದ ಮಹಾಕಾವ್ಯಗಳು. ಮಹಾಭಾರತದ ಒಂದು ಭಾಗವೆಂಬುದನ್ನು ಮರೆತು, ಭಗವದ್ಗೀತೆ ಹಿಂದೂ ಧರ್ಮಗ್ರಂಥವೆನ್ನುವದು ಸಮಂಜಸವಲ್ಲ) ಹಿಂದೂ ಧರ್ಮಬೋಧಕ ಅಥವಾ ಪ್ರತಿಪಾದಕನನ್ನು ಹೊಂದಿಲ್ಲ. ಹಿಂದೂ ಧರ್ಮಕ್ಕೆ ಏಕಮೇವ ದೇವರಿಲ್ಲ, ನಿರ್ದಿಷ್ಟ ತತ್ವಗಳನ್ನು ಹೊಂದಿಲ್ಲ, ಧರ್ಮಾಚರಣೆಗಳು ಏಕರೂಪವಾಗಿಲ್ಲ, ಪಾರಂಪರ್ಯವಾದ ಯಾವುದೇ ವಿಶಿಷ್ಟ ಧರ್ಮದ ಲಕ್ಷಣಗಳನ್ನು ಅದು ತೃಪ್ತಿಕರವಾಗಿ ಹೊಂದಿಲ್ಲ ಕಾರಣ, ವಿಶಾಲಾರ್ಥದಲ್ಲಿ ಹಿಂದೂ ಒಂದು ಧರ್ಮವಾಗಿರದೆ ಅದೊಂದು ಜೀವನ ಕ್ರಮ ಅಥವಾ ಬದುಕಿನ ರೀತಿ ಎಂದು ಹೇಳಬಹುದು.

ಹಿಂದೂ ಭಿನ್ನ ಭಿನ್ನ ಮತ ಗುಣಲಕ್ಷಣಗಳ ಪ್ರತಿಛಾಯೆ. ಅದು ಸರ್ವಮಾನ್ಯ ತತ್ವಗಳಾಧಾರಿತ ಧರ್ಮ. ಹಿಂದೂ ಧರ್ಮ ವಿವಿಧ ಸಮುದಾಯಗಳನ್ನು ತನ್ನಲ್ಲಿ ಸಂಯೋಜಿಸಿಕೊಂಡು ಜೀರ್ಣಿಸಿಕೊಂಡಿತು. ಆದರೆ ಅನೇಕ ಜನ ತತ್ವಜ್ಞಾನಿಗಳು ಮತ್ತು ಧರ್ಮಚಿಂತಕರು ವಿಕಸಿತಗೊಳಿಸಿದ, ತಾತ್ವಿಕ ಪರಿಕಲ್ಪನೆಗಳು ಮತ್ತು ಧರ್ಮ ವಿಧಿ ವಿಧಾನಗಳು ಏಕರೂಪವಾಗಿರದೆ ಭಿನ್ನಭಿನ್ನವಾಗಿವೆ. ಅಷ್ಟು ಮಾತ್ರ ಅಲ್ಲ; ಕೆಲ ವಿಷಯಗಳ ಕುರಿತ ತತ್ವಜ್ಞಾನಿಗಳ ಅಭಿಪ್ರಾಯಗಳಲ್ಲಿ ವಿರೋಧಾಭಾಸವಿದೆ. ಆದಾಗ್ಯೂ, ವೇದಗಳೆ

ಆಂಜನೇಯ ನಗರ, ಬೆಳಗಾವಿ-೫೯೦೦೧೬, ಮೋ-೯೨೪೩೨೨೦೨೬೦

ಹಿಂದೂ ಧರ್ಮಕ್ಕೆ ಆಧಾರ ಎಂದು ಧರ್ಮಚಿಂತಕರು ಸರ್ವಾನುಮತದ ಮುದ್ರೆ ಒತ್ತಿದರು. ಸತ್ಯಕ್ಕೆ ಅನೇಕ ಮುಖಗಳು; ಸತ್ಯದ ಕುರಿತ ಭಿನ್ನಭಿನ್ನವಾದ ಅಭಿಪ್ರಾಯಗಳು, ಎಂಬುದನ್ನು ಹಿಂದೂ ಧರ್ಮ ತಾನು ರೂಪತಾಳಿದ ಪ್ರಾರಂಭದಲ್ಲಿಯೇ ಮನವರಿಕೆ ಮಾಡಿಕೊಂಡಿತ್ತು.

ಮೂರ್ತಿಪೂಜೆ ಹಿಂದೂ ಧರ್ಮದ ಮುಖ್ಯ ಲಕ್ಷಣ. ಚೋದ್ಯವೆಂದರೆ, ಕೆಲವೊಂದು ಹಿಂದೂ ಬಣಗಳು ಮೂರ್ತಿ ಪೂಜೆಯನ್ನು ನಂಬುವುದಿಲ್ಲ. ಮೂರ್ತಿಪೂಜಕರು ಕೂಡ ಏಕರೂಪದ ವಿಗ್ರಹಾರಾಧನೆಯನ್ನು ಇಲ್ಲವೆ ನಿರ್ದಿಷ್ಟ ಸಂಖ್ಯೆಯ ವಿಗ್ರಹಗಳನ್ನು ಆರಾಧಿಸುತ್ತಾರೆ ಎಂದು ಹೇಳಲಾಗದು.

ದೇವ ಪೂಜೆಗೆ ಶ್ರೀಕಾರ ಹಾಕಿದ ಶ್ರೇಯಸ್ಸು ಶಿಲಾಯುಗದ ಆದಿ ಮಾನವನಿಗೆ ಸಲ್ಲುತ್ತದೆ. ಸೂರ್ಯ–ಚಂದ್ರ ಗುಡುಗು ಸಿಡಿಲು ಮತ್ತು ಹುಲಿ–ಸಿಂಹಗಳಂಥ ಕ್ರೂರ ಮೃಗಗಳು, ಮೀನು ಮೊಸಳೆಗಳಂಥ ಜಲಚರ ಪ್ರಾಣಿಗಳನ್ನು ಕಂಡ ಆದಿಮಾನವ ಭಯಮಿಶ್ರಿತ ಆಶ್ಚರ್ಯಚಕಿತನಾಗಿ ಅವುಗಳಲ್ಲಿ ದೈವೀಶಕ್ತಿ ಇರುವುದನ್ನು ಊಹಿಸಿ, ಪೂಜಿಸಲಾರಂಭಿಸಿದ. ತದನಂತರ ಗಿಡ–ಮರ, ಹೊಳೆ ಹಳ್ಳಗಳಿಗೆ ದೈವತ್ವದ ಸ್ವರೂಪ ಕೊಟ್ಟು ಅವುಗಳನ್ನು ಆರಾಧಿಸಿದ. ವೇದಕಾಲದಲ್ಲಿ ಇಂದ್ರ ವರುಣ ಅಗ್ನಿ ಮುಂತಾದ ದೇವತೆಗಳು ಕೂಡಿದವು. ಕಾಲಾಂತರದಲ್ಲಿ ಬ್ರಹ್ಮ ವಿಷ್ಣು ಮಹೇಶ ದೈವತ್ವ ಪಡೆದು ಆರಾಧಿಸಲ್ಪಟ್ಟವು. ಆ ನಂತರ ಹಿಂದೂ ಸ್ವಾಭಿಮಾನ ಸಂಕೇತವಾದ ರಾಮ, ಕೃಷ್ಣರು ಹಿಂದೂ ಧರ್ಮೀಯರೆಂದು ಕರೆಯಿಸಿಕೊಳ್ಳುವವರ ದೈವಂಗಳಾದವು.

ಕ್ರಮೇಣ ದೇವ–ದೇವತೆಯರ ಸಂಖ್ಯೆ ವೇಗವಾಗಿ ಬೆಳೆಯತೊಡಗಿತು. ದೈವಂಗಳ ಅನುಪಾತದಲ್ಲಿ ದೇವ ಮಂದಿರಗಳು ನಿರ್ಮಾಣವಾದವು. ಕಾಲ ಸರಿದಂತೆ ಬಸವಣ್ಣನವರು ವಚಿಸಿದ ಹಾಗೆ 'ಹಾಳು ಮೊರಡಿಗಳಲ್ಲಿ ದೇವ ಮಂದಿರಗಳು ಕೆರೆ ಭಾವಿ ಹೂ ಗಿಡು ಮರಂಗಳಲ್ಲಿ ಹಿಡಿದುಂಬ, ತಿರಿದುಂಬ ಮಾರಯ್ಯ ಬೀರಯ್ಯ ಕೇಚರಗಾವಿಲ ಅಂತರ ಬೆಂತರ ಕಾಳಯ್ಯಮಾಳಯ್ಯ ಕೇತಯ್ಯ' ದೇವರ ಸಂಖ್ಯೆ ಅಪಾರ ಪ್ರಮಾಣದಲ್ಲಿ ಬೆಳೆಯಿತು. ದೇಗುಲಗಳಲ್ಲಿ ಶಾಸ್ತ್ರವಿಧಿಗನುಸಾರ ಪೂಜೆ ಗೈಯಲು ಬ್ರಾಹ್ಮಣ ಪೂಜಾರಿ ಪುರೋಹಿತರು ನಿಯೋಜಿಸಲ್ಪಟ್ಟರು. ಕ್ರಮೇಣ ಮುಗ್ಧ ಭಕ್ತರ ಅಜ್ಞಾನವನ್ನು ದುರುಪಯೋಗಪಡಿಸಿಕೊಂಡ ಪುರೋಹಿತರು ದೇವರ ಹೆಸರಿನಲ್ಲಿ ಭಕ್ತರ ಮನದಲ್ಲಿ ಶುಭ, ಅಶುಭ, ಮಂಗಳ–ಅಮಂಗಳ ವಾರ ತಿಥಿ ಮುಂತಾದ ಗೊಡ್ಡು ಕಲ್ಪನೆಗಳನ್ನು ಮತ್ತು ಮೂಢನಂಬಿಕೆಗಳನ್ನು ಬಿತ್ತಿ ಹಣದ ಬೆಳೆ ತೆಗೆಯಲು ಪ್ರಾರಂಭ ಮಾಡಿದರು. ಪೌರೋಹಿತ್ಯ ಲಾಭದಾಯಕ ಕಸುಬಾಯಿತು. ದೇವರು, ದೇವಮಂದಿರಗಳ ಸಂಖ್ಯೆ ಇಂದು ಅಪಾರ ಪ್ರಮಾಣದಲ್ಲಿ ಬೆಳೆಯುತ್ತ ಮುಂದುವರೆದಿದೆ.

ಹಿಂದೂ ಧರ್ಮದ ಅಡೆ ತಡೆಯಿಲ್ಲದ ಬೆಳವಣಿಗೆ ಭಿನ್ನ ಭಿನ್ನವಾದ ನೂತನ ತತ್ವಸಿದ್ಧಾಂತಗಳು ಉದ್ಭವಿಸಲು ಕಾರಣವಾಯಿತು. ಧರ್ಮ ಸುಧಾರಕರು, ವೈಚಾರಿಕ ಚಿಂತಕರು ಸಾಧು–ಸಂತರು ಹಿಂದೂ ದೇವಾಲಯಗಳಲ್ಲಿ ಮಡುಗಟ್ಟಿದ ಸುಲಿಗೆ ಮತ್ತು ಮೂಢನಂಬಿಕೆಗಳ ಮೂಲವನ್ನು ಕಿತ್ತೆಸೆಯಲು ಪ್ರಯತ್ನಿಸಿದರು. ತಮ್ಮ ತಮ್ಮ ಮತ ಪಂಥಗಳ ಸ್ಥಾಪನೆಗೆ ಸನ್ನದ್ಧರಾದರು. ಗೌತಮಬುದ್ಧ ಬೌದ್ಧಧರ್ಮವನ್ನು, ಮಹಾವೀರ ಜೈನಧರ್ಮವನ್ನು ಸ್ಥಾಪಿಸಿದರು. ಕಾಲಾಂತರದಲ್ಲಿ ಬಸವಣ್ಣನವರು ಲಿಂಗಾಯತ ಧರ್ಮ ಸಂಸ್ಥಾಪಕರಾದರು. ಸಂತ ಜ್ಞಾನೇಶ್ವರ ಮತ್ತು ತುಕಾರಾಮ ವಾರಕರಿ ಪಂಥವನ್ನು ಪ್ರಾರಂಭಿಸಿದರು. ಗುರುನಾನಕ ಸಿಖ್ ಧರ್ಮಕ್ಕೆ ಸ್ಫೂರ್ತಿಯಾದರೆ, ದಯಾನಂದ ಸರಸ್ವತಿ ಆರ್ಯ ಸಮಾಜವನ್ನು ಸ್ಥಾಪಿಸಿದ. ಚೈತನ್ಯ ಭಕ್ತಿ ಪಂಥವನ್ನು ಸ್ಥಾಪಿಸಲು ಕಾರಣನಾದ.

ಹಿಂದೂ ಪದೋತ್ಪತ್ತಿ ಅಯೋಮಯವಾಗಿದೆ. ಏಸು ಕ್ರಿಸ್ತನದು ಕ್ರೈಸ್ತಧರ್ಮ; ವೇದಾಧಾರಿತವಾದುದು ವೈದಿಕ ಧರ್ಮ ಹಾಗೇನೆ ಲಿಂಗಸ್ವಾಯತ ಮಾಡಿಕೊಂಡವರು ಲಿಂಗಾಯತ ಧರ್ಮಾನುಯಾಯಿಗಳು. ಹಾಗಾದರೆ ಹಿಂದೂ ಪದ ಉದ್ಭವವಾದ ಬಗೆ ಹೇಗೆ? ಇದಕ್ಕೆ ಸಮಂಜಸವಾದ ಸ್ಪಷ್ಟೀಕರಣ ದೊರೆಯದು. ಹಿಂದೂ ಪದೋದ್ಭವದ ಕುರಿತು ಕೆಲ ವಿವರಣೆಗಳು ಹೀಗಿವೆ;

೧) ಹಿಂದೂಗಳ ನಿಜವಾದ ಹೆಸರು ಆರ್ಯರು ಎಂದಾಗಿದ್ದು, ಆರ್ಯರಿಗೆ ಕೊನೆಗೆ 'ಹಿಂದು' ಎಂಬ ಹೆಸರು ಬಂದು, ಅವರ ಧರ್ಮ ಹಿಂದೂ ಧರ್ಮವಾಯಿತು. (Complete Works of Swami Vivekanand Vol III)

೨) ಹಿಂದೂ ಎಂಬುದು ಪರ್ಷಿಯನ್ನರು ಸಿಂಧೂ ನದಿಯನ್ನು ಉದ್ದೇಶಿಸಿ ಹೇಳುತ್ತಿದ್ದ ಶಬ್ದವಾಗಿದ್ದಿತು. ಸಂಸ್ಕೃತದಲ್ಲಿ 'ಸ'ಕಾರಗಳೆಲ್ಲವೂ ಪರ್ಷಿಯನ್ ಭಾಷೆಯಲ್ಲಿ 'ಹ' ಕಾರವಾಗಿ ಬದಲಾಗುತ್ತಿದ್ದು 'ಸಿಂಧೂ' ಎನ್ನುವುದು 'ಹಿಂದೂ' ಆಯಿತು. (ಹಿಂದೂ ಧರ್ಮ ಪರಿಚಯ: ಎ ಕೆ. ನಾರಾಯಣ ಭಟ್ಟ)

೩) ಗ್ರೀಕರು ನಮ್ಮ ದೇಶಕ್ಕೆ ಬಂದ ಮೇಲೆ 'ಹಿಂದೂ' ಪದಕ್ಕೆ 'ಇಂಡೋಯಿ' ಅಂದರು. ಹಿಂದೂ ದೇಶಕ್ಕೆ ಅದೆ 'ಇಂಡೋಯಿ' 'ಇಂಡಿಯಾ' ಎಂದು ಹೆಸರು ಪಡೆಯಿತು. ಹಿಂದೂ ಧರ್ಮವು ಆಗಿನ ಕಾಲದ ಹಿಂದೂಗಳ ಹಾಗು ಹಿಂದೂಸ್ಥಾನದ ಧರ್ಮವಾಯಿತು.

೪) ಪಾರಶಿ, ಗ್ರೀಕ ಮತ್ತು ಹೂಣರು ಈ ದೇಶವನ್ನು ಹಿಂದುಸ್ಥಾನವೆಂದು ಕರೆದರು; ಮುಷ್ಕರಿ ರೀತಿಯಿಂದ ಹಿಂದೂ ಎಂದು ಹೀಯಾಳಿಸಿ ಕರೆದರು. (ನಿ. ಹಂ. ಪೂಜಾರ)

ಹಿಂದೂ ಧರ್ಮದ ಕುರಿತ ವಿದ್ವಾಂಸರ ಒಕ್ಕಣಿಕೆಗಳು ವೈವಿಧ್ಯಮಯವಾಗಿವೆ ನೋಡಿ;

೧) Hinduism is a modern word. Vedant is the best among the numerous names given to the religious faith of Hindus

(ಹಿಂದು ಎಂಬುದು ಆಧುನಿಕ ಹೆಸರು; ಹಿಂದೂಗಳ ಧಾರ್ಮಿಕ ನಂಬಿಕೆಗೆ ನೀಡಿದ ಅಸಂಖ್ಯ ಹೆಸರುಗಳಲ್ಲಿ 'ವೇದಾಂತ' ಅತ್ಯುತ್ತಮ ಹೆಸರು–ಚಕ್ರವರ್ತಿ ಗೋಪಾಲಾಚಾರಿ)

೨) ಹಿಂದೂ ಧರ್ಮದ ಅಂತಃಸತ್ವ ಎಂದರೆ ಕ್ರೌರ್ಯ ಮತ್ತು ಹಿಂಸೆ (ಡಾ. ಅಂಬೇಡಕರ–ಜಾತಿವಿನಾಶ; ಪ್ರಬಂಧ)

೩) ಹಿಂದೂ ಧರ್ಮವಲ್ಲ; ಅದೊಂದು ಜೀವನ ಕ್ರಮ. (ಸರ್ವೋಚ್ಚ ನ್ಯಾಯಾಲಯ; ಡಾ. ರಮೇಶ ಯಶವಂತ ಪ್ರಭು ವಿ–ಪ್ರಭಾಕರ ಕುಂಟೆ ಮತ್ತಿತರು–೧೩೦ AIR ೧೯೯೬)

೪) ಅಸ್ಪೃಶ್ಯತೆ ಹಿಂದೂ ಧರ್ಮದ ಭಾಗವಾಗಿದ್ದರೆ, ಅದೊಂದು ಕೊಳೆತ ಅಥವಾ ಅನಾವಶ್ಯಕ ಭಾಗ; ಹಿಂದೂಗಳಲ್ಲಿ ಅಲ್ಪಸಂಖ್ಯಾತ ಸಂಪ್ರದಾಯಗಳು, ಜಾತಿಗಳು ಏಕೆ ಇವೆ? ವೇದ ಈಶ್ವರ ಪ್ರಣೀತವಾದರೆ, ಕುರಾನ್ ಏಕೆ ಅಲ್ಲ? (ಮಹಾತ್ಮ ಗಾಂಧಿ: ಆತ್ಮಕಥೆ)

೫) ಪ್ರಪಂಚದ ಯಾವ ಧರ್ಮವೂ ಹಿಂದೂ ಧರ್ಮದಷ್ಟು ಭವ್ಯವಾಣಿಯಲ್ಲಿ ಮನುಷ್ಯನ ಘನತೆಯನ್ನು ಬೋಧಿಸುವದಿಲ್ಲ. ಪ್ರಪಂಚದ ಯಾವ ಧರ್ಮವೂ ದೀನ ದಲಿತರ ಕುತ್ತಿಗೆಯನ್ನು ಹಿಂದೂ ಧರ್ಮದಷ್ಟು ಕ್ರೂರವಾಗಿ ತುಳಿಯುವುದಿಲ್ಲ.

೬) ಹಿಂದೂ ಎಂಬುದು ಪ್ರಾಚೀನ ಬ್ರಾಹ್ಮಣ ಧರ್ಮದ ಆಧುನಿಕ ಪರಿಭಾಷೆ (ನೀಲಗಂಗಯ್ಯ ಪೂಜಾರ)

೭) ಮನುಷ್ಯನನ್ನು ಶ್ರೇಣೀಕರಣಗೊಳಿಸಿ, ಒಬ್ಬರು ಇನ್ನೊಬ್ಬರನ್ನು ದೂಷಿಸುವಂತೆ, ಅವಮಾನಿಸುವಂತೆ, ಅಸೂಯೆಪಡುವಂತೆ, ಅಸಹ್ಯಪಡುವಂತೆ ಮಾಡಿರುವ ಧರ್ಮವೆಂದರೆ, ಅದು ವೈದಿಕ ಧರ್ಮ; ಅರ್ಥಾತ್ ಮೊಘಲರ ಕಾಲದಲ್ಲಿ ಹೆಸರು ಬದಲಾಯಿಸಿಕೊಂಡಿರುವ ಹಿಂದೂ ಧರ್ಮ. (ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಮಹಾಮನೆ ಮೇ–೧೮)

೮) ಕದಾಪಿ ಒಂದು ಸರ್ವಸಾಮಾನ್ಯ ಧರ್ಮ ಇದ್ದುದೆ ಆದರೆ ಅದು ಬ್ರಾಹ್ಮಣ ಧರ್ಮವಲ್ಲ; ಬುದ್ಧ ಅಥವಾ ಕ್ರಿಸ್ತ ಇಲ್ಲವೆ ಇಸ್ಲಾಮ್ ಧರ್ಮಗಳಲ್ಲ; ಅದು ಈ ಎಲ್ಲ ಧರ್ಮಗಳ ಕೂಟ ಮತ್ತು ಅಭಿವೃದ್ಧಿಗೆ ಕೂಟದಲ್ಲಿ (ಇತರ ಧರ್ಮಗಳಿಗೆ) ಇನ್ನೂ ಅಪರಿಮಿತ ಸ್ಥಳವಿದೆ. (ಸ್ವಾ. ವೀ; ಚಿಕ್ಯಾಗೋ ಧರ್ಮ ಸಂಸತ್ತು ೨೭.೯.೧೮೮೩)

■■

**ಲಿಂಗಾಯತ ಧರ್ಮ**

ಈ ದೇಶದಲ್ಲಿ ಯಾವುದೇ ಹೋರಾಟವನ್ನು ವೈದಿಕ ಧರ್ಮ ಉಳಿಯಗೊಟ್ಟಿಲ್ಲ, ಬೆಳೆಯಗೊಟ್ಟಿಲ್ಲ. ಒಂದು ಅದನ್ನು ಆಪೋಷಣೆಗೊಳಿಸಿಕೊಂಡು ವಾತಾಪಿಜೀರ್ಣೋಭವ ಎನ್ನುವ ವಸಿಷ್ಠ ಪ್ರಜ್ಞೆಯಲ್ಲಿ ಅದನ್ನು ವೈದಿಕೀಕರಣಗೊಳಿಸಿದೆ. ಇಲ್ಲ ಇನ್ನೊಂದು ಬಗೆಯಲ್ಲಿ ಈ ದೇಶದಲ್ಲಿ ಅದು ಉಳಿಯದಂತೆ ಹೊರಗಟ್ಟಿದೆ. ಈ ಎರಡೂ ಬಗೆಗೆ ಸಿಗದ ರೀತಿಯೊಳಗೆ ವಚನಧರ್ಮ ಅರ್ಥಾತ್ ಲಿಂಗಾಯತಧರ್ಮ ಇನ್ನೂ ಉಸಿರಾಡುತ್ತಿದೆ. ಬ್ರಾಹ್ಮಣೀಕರಣಗೊಂಡಿದ್ದೂ ಭ್ರಷ್ಟಗೊಳಿಸಲ್ಪಟ್ಟಂತೆ ವೈದಿಕಾಚರಣೆಗಳನ್ನು ಅನುಸರಿಸುತ್ತಿದ್ದೂ ಅದರ ಆಳದೊಳಗೆ ಹನ್ನೆರಡನೇ ಶತಮಾನದ ಹೋರಾಟದ ಜೀವಸೆಲೆ ಇನ್ನೂ ಮಿಡಿಯುತ್ತಿದೆ. ಆ ಮಿಡಿತ ನಿಜವಚನಗಳಲ್ಲಿ ಕೇಳುತ್ತಿದೆ. ಆ ದನಿಯನ್ನು ಕೇಳಿಸಿಕೊಳ್ಳುವ ತಿಳುವಳಿಕೆ ನಮಗೆ ಬರಬೇಕು. ಬಂದಾಗ ಮಾತ್ರ ನಿಜವಾದ ವಚನಚಳುವಳಿಯನ್ನು ಕಟ್ಟುವುದಕ್ಕೆ ಸಾಧ್ಯ.

ವಚನಚಳುವಳಿ ಕನ್ನಡ ನೆಲದಲ್ಲಿ ಹುಟ್ಟಿ ಬೆಳೆದ ಕನ್ನಡದ ಚಳುವಳಿ. ಏಕೆಂದರೆ ಈ ಚಳುವಳಿ ಜನಭಾಷೆಯನ್ನು ಬಳಸಿಕೊಂಡಂತೆ ಧರ್ಮ ಮತ್ತು ಅಧ್ಯಾತ್ಮವನ್ನು ಹಾಗು ಲೋಕದರ್ಶನವನ್ನು ಕಟ್ಟಿದೆ. ಆ ಲೋಕದರ್ಶನ ಕೇವಲ ಮನುಷ್ಯ ಕೇಂದ್ರಿತ ನೆಲೆಯಲ್ಲಿ ಮಿತಗೊಂಡ ದರ್ಶನವಲ್ಲ. ನಿಸರ್ಗಧರ್ಮವನ್ನು ಗೌರವಿಸಿದ ಭಾವದಲ್ಲಿ ಜೀವಪರವಾಗಿ ಚಿಂತಿಸಿದ ಧರ್ಮ. ಇದು ಕನ್ನಡದ ಧರ್ಮ. ಕನ್ನಡ ನೆಲದಲ್ಲಿ ಅರಳಿದ ವಚನಧರ್ಮ. ಹೀಗಾಗಿ ಬೇರೆ ಆಕರಗಳಿಗಿಂತ ನಿಜವಚನಗಳೇ ಲಿಂಗಾಯತ ಧರ್ಮದ ನಿಜವಾದ ಪಠ್ಯಗಳು.

**ಪ್ರೊ. ಎಸ್. ಜಿ. ಸಿದ್ಧರಾಮಯ್ಯ**
(ಲಿಂಗಾಯತ, ಕನ್ನಡದ ವಚನಧರ್ಮ ಕೃತಿಯಿಂದ)

# ಶರಣರ ಆಧ್ಯಾತ್ಮಿಕ ನಿಲುವೇ ಒಂದು ವಿಜ್ಞಾನ

● ಶ್ರೀ ನದಾಫ್ ಎಚ್. ಹತ್ತಿಮತ್ತೂರು

ಶರಣರ ಆಧ್ಯಾತ್ಮಿಕ ದೃಷ್ಟಿ ವಿಜ್ಞಾನಮಯವಾಗಿದೆ. ಅವರ ಬಹುಪಾಲು ಚಿಂತನೆಗಳು ಸತ್ಯಕ್ಕೆ ಹತ್ತಿರವಾಗಿದ್ದು ವಿಜ್ಞಾನದ ತಳಹದಿಯ ಮೇಲೆಯೇ ಪ್ರಸ್ತಾಪಗೊಂಡಿವೆ. ಅವರು ಕಟ್ಟಿಕೊಟ್ಟ ದೇವರ ಪರಿಕಲ್ಪನೆ ವಿಶೇಷವಾಗಿದ್ದು, ಅದನ್ನು ಲಿಂಗರೂಪದಲ್ಲಿ ಪ್ರಚುರಪಡಿಸಿದ್ದಾರೆ. ಈ ಲಿಂಗವು ಬ್ರಹ್ಮಾಂಡವನ್ನು ಪ್ರತಿನಿಧಿಸುತ್ತಿದ್ದು, ಅದುವೇ ದೇವರ ಸಾಕಾರರೂಪವಾಗಿದೆ. ದೇವರನ್ನು ಕಾಣಬೇಕಾದರೆ ಬ್ರಹ್ಮಾಂಡವನ್ನು ಪೂಜಿಸು, ಭೂಮಿಯಲ್ಲಿರುವ ಚರಾಚರ ಜೀವಿಗಳನ್ನು ಗೌರವಿಸು. ಭೂಮಿಯ ಮಹತ್ವತೆಯನ್ನು ಅರಿತುಕೊ, ಅದರಲ್ಲಿಯ ಪರಿಸರವನ್ನು ಸಂರಕ್ಷಿಸು ಎಂಬುದನ್ನು ಹೇಳುವುದರ ಮುಖಾಂತರ ಅದನ್ನು ನೀನು ರಕ್ಷಿಸಿದರೆ ಅದು ನಿನ್ನನ್ನು ರಕ್ಷಿಸುತ್ತದೆ ಎಂದು ತಿಳಿಸಿರುವುದು ವೈಜ್ಞಾನಿಕ ಸತ್ಯವಾಗಿದೆ. ನಾವು ಈಗ ಮಳೆ, ಬೆಳೆ, ನೀರು, ಶುದ್ಧವಾದ ಗಾಳಿ, ಶುದ್ಧವಾದ ಪರಿಸರ ಬೇಕಾದರೆ ನೈಸರ್ಗಿಕ ಭೂಸಂಪತ್ತನ್ನು ರಕ್ಷಿಸಬೇಕಾಗುತ್ತದೆ ಎಂದು ಈಗಿನ ವಿಜ್ಞಾನಿಗಳು ಹೇಳುತ್ತಿದ್ದಾರೆ. ಪರಿಸರ ಮಾಲಿನ್ಯವನ್ನು ಕುರಿತು ಈಗೀಗ ನಮ್ಮ ಸರಕಾರಗಳು, ಸರಕಾರೇತರ ಸಂಸ್ಥೆಗಳು ಬಹಳ ಕಾಳಜಿಯಿಂದ ಜನರನ್ನು ಎಚ್ಚರಿಸುತ್ತಿವೆ. ಯಾವಾಗ ನಮಗೆ ನೈಸರ್ಗಿಕ ಸಂಪನ್ಮೂಲಗಳ ಕೊರತೆ ಉಂಟಾಯಿತೋ ಆವಾಗ ನಾವು ಎಚ್ಚರಗೊಂಡು ಬೊಬ್ಬೆಯಿಡುತ್ತಿದ್ದೇವೆ. ಆದರೆ ಈ ವಿಚಾರವನ್ನು ನಮ್ಮ ಶರಣರು ಆವಾಗಲೇ ಕಂಡುಕೊಂಡು ಈ ವೈಜ್ಞಾನಿಕ ಆಲೋಚನೆಯನ್ನು ತಮ್ಮ ತತ್ತ್ವಾಚರಣೆಯ ಹಿನ್ನೆಲೆಯಲ್ಲಿ ಹರಿಬಿಟ್ಟಿದ್ದರು.

ಮಗ್ಗಿಯ ಮಾಯಿದೇವ ತಮ್ಮ ಶಿವಾನುಭವ ಸೂತ್ರದಲ್ಲಿ ಲಿಂಗವನ್ನು ಕುರಿತು

**'ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ**
**ತದೇತಲ್ಲಿಂಗ ಮಿತ್ಯುಕ್ತಂ ಲಿಂಗತತ್ತ್ವ ಪರಾಯಣೈಃ'**

ಎಂದು ಹೇಳಿರುವರು. ಅಂದರೆ ಈ ಜಗತ್ತಿನಲ್ಲಿ ತೋರುವ ಸಚರಾಚರ ಸೃಷ್ಟಿಯಲ್ಲವೂ ಯಾವುದರಿಂದ ಹೊರಹೊಮ್ಮಿ, ಎಲ್ಲಿ ಲೀಲೆಯಾಡಿ ಕೊನೆಗೆ ಯಾವುದರಲ್ಲಿ ಲಯವಾಗುವುದೋ ಅದು ಲಿಂಗ ಎಂದರ್ಥ. ಇವರ ಈ ವಾಕ್ಯವನ್ನು ಗಮನಿಸಿದರೆ ಇಡೀ ಪ್ರಕೃತಿಯನ್ನೇ ಕೇಂದ್ರವಾಗಿಟ್ಟುಕೊಂಡು ಅವರು ತಮ್ಮ ದೇವ ಪರಿಕಲ್ಪನೆಯನ್ನು ಹರಿಬಿಟ್ಟಿದ್ದಾರೆ. ಜೀವಿ ಅನ್ನುವುದು ಭೂಮಿ, ಆಕಾಶ, ಅಗ್ನಿ, ಜಲ, ಗಾಳಿಯಂತಹ ಪಂಚಭೂತಗಳಿಂದ ಸೃಷ್ಟಿಯಾದಂತಹದ್ದು ಅನ್ನುವ ವೈಜ್ಞಾನಿಕ ಸತ್ಯ ಅವರ ಮಾತಿನಲ್ಲಿ ಪ್ರತಿಪಾದನೆಗೊಂಡಿದೆ. ಈ ಪಂಚಭೂತಕ್ಕೆ ಸಂಬಂಧಿಸಿದಂತೆ ಬಸವಣ್ಣನವರು ಹೇಳುವ ವಚನವನ್ನು ಸಹ ಇಲ್ಲಿ ಗಮನಿಸಬಹುದು

**ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ನಿರಂಜನದೇವಾ**
**ನಿಮ್ಮ ಮಹಿಮೆಯ ಪ್ರಣವಸ್ವರೂಪಂಗಲ್ಲದೆ**
**ಕಾಣಲಾರಿಗೆಯೂ ಬಾರದಯ್ಯಾ**
**ಜ್ಞಾನಜ್ಯೋತಿಧ್ಯಾನದಿಂದ ನಾಳಶುದ್ಧದ್ವಾರವಾಗಿ**
**ಆರಾಧಿಸಿ ಕಂಡೆ ನಮ್ಮ ಕೂಡಲಸಂಗಮದೇವನ.**

ಎಂದು ಹೇಳುವುದರ ಮುಖಾಂತರ ಪ್ರಕೃತಿ ಶಕ್ತಿಯನ್ನು ದೇವರಿಗೆ ಹೋಲಿಸಿ ಈ ಶಕ್ತಿಯನ್ನು ತಿಳಿಯ ಬೇಕಾದರೆ ವಿಜ್ಞಾನಿಯಂತಹ ಜ್ಞಾನವಂತನಿಗೆ ಮಾತ್ರ ಸಾಧ್ಯ ಅನ್ನುವುದು ಇದರ ತಾತ್ಪರ್ಯ. ಅಂದರೆ ನಿಜವಾದ ಆಧ್ಯಾತ್ಮಿಕ ಜೀವಿ ಅಥವಾ ಆಧ್ಯಾತ್ಮಿಕ ತತ್ತ್ವಜ್ಞಾನಿ ಖಗೋಳ ವಿಜ್ಞಾನಿ ಇದ್ದಹಾಗೆ. ಅವನು ಪ್ರಕೃತಿಯ ವೈಜ್ಞಾನಿಕ ಸತ್ಯವನ್ನು ತನ್ನ ಆಧ್ಯಾತ್ಮದ ತಾತ್ವಿಕತೆಯ ಹಿನ್ನೆಲೆಯಲ್ಲಿ ಪ್ರತಿಪಾದಿಸುವನು.

ಅಧ್ಯಾತ್ಮದ ತಾತ್ವಿಕತೆಯ ಹಿನ್ನೆಲೆಯಲ್ಲಿ ಬಸವಣ್ಣನವರು ಲಿಂಗವನ್ನು ಕುರಿತು ಹೇಳಿರುವ ಮಾತುಗಳು ಸಹ ಖಗೋಳ ವಿಜ್ಞಾನಿಗಳಿಗೆ ಪೂರಕವಾಗಿವೆ.

**'ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ**
**ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ**
**ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀಮುಕುಟ ಅಗಮ್ಯ**
**ಅಗೋಚರ ಅಪ್ರತಿಮ ಲಿಂಗವೆ**

ಪ್ಲಾಟ ನಂಬರ–೧ ವೀರಭದ್ರೇಶ್ವರ ಕಾಲನಿ, ಉಣಕಲ್ಲ ಹುಬ್ಬಳ್ಳಿ, ಧಾರವಾಡ(ಜಿಲ್ಲೆ) ಮೋ–೮೮೬೧೫೨೩೪೮೨೫

**ಕೂಡಲಸಂಗಮದೇವಯ್ಯಾ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ'**

ಎಂದು ಹೇಳುವುದರ ಮುಖಾಂತರ ಸೌರಮಂಡಲವನ್ನು ಕಟ್ಟಿಕೊಡುವುದರ ಮುಖಾಂತರ ಬ್ರಹ್ಮಾಂಡದಲ್ಲಿಯ ಸೂಕ್ಷ್ಮಾಣುಸೂಕ್ಷ್ಮ ಜೀವಸಂಕುಲದಲ್ಲಿಯ ವೈಜ್ಞಾನಿಕ ಶಕ್ತಿಯನ್ನು ದೇವರು ರೂಪದಲ್ಲಿ ಪ್ರತಿಪಾದಿಸಿದ್ದಾರೆ. ಪ್ರಕೃತಿಯ ಒಂದು ಚಿಕ್ಕ ಅಣುವಿನಲ್ಲಿಯೂ ಅಗಾಧವಾದ ಶಕ್ತಿ ಇರುತ್ತದೆ, ಕಣ್ಣಿಗೆ ಕಾಣಲಾರದ ಈ ಶಕ್ತಿಯೇ ದೇವರು. ಆ ಎಲ್ಲಾ ಶಕ್ತಿಯೇ ಅಣುರೂಪವೇ ಲಿಂಗ. ಈ ಲಿಂಗ ಚುಳುಕಾಗಿ ಕರಸ್ಥಳದ ಮೇಲೆ ಬಂದು ಕುಳಿತಿದೆ ಎಂಬುದು ಬಸವಣ್ಣನವರ ತಾತ್ಪರ್ಯ. ಇದನ್ನು ಅರಿತ ವಿವಿಧ ವಚನಕಾರರು ಈ ಲಿಂಗವನ್ನು ಕುರಿತ ವಿವಿಧ ರೀತಿಯಲ್ಲಿ ಪ್ರತಿಪಾದನೆ ಮಾಡಿರುವುದನ್ನು ನೋಡಿದರೆ ಅವರಲ್ಲಿ ಈ ಬ್ರಹ್ಮಾಂಡದ ವೈಜ್ಞಾನಿಕ ಸತ್ಯತನ ಯಾವರೀತಿ ಪ್ರತಿಫಲನಗೊಂಡಿತ್ತು ಎಂಬುದು ನಮಗೆ ಮನನವಾಗುತ್ತದೆ. ಚನ್ನಬಸವಣ್ಣನವರು ಲಿಂಗವನ್ನು ಕುರಿತು

**'ಲಿಕಾರವೇ ಶೂನ್ಯ, ಬಿಂದುವೇ ಲೀಲೆ**
**ಗಕಾರವೇ ಚಿತ್ತು, ಈ ತ್ರಿವಿಧದೊಳಗದೆ**
**ಲಿಂಗವೆಂಬ ಸಕೀಲ ಅದರ ಸಂಚವನಾವಾತಬಲ್ಲ**
**ಆತನೇ ಲಿಂಗ ಸಂಗಿ, ಕೂಡಲ ಚನ್ನಸಂಗಮದೇವಾ**
**ಲಿಂಗಾನುಭಾವಿಗಳ ಶ್ರೀಚರಣಕ್ಕೆ ನಮೋ ನಮೋ ಎಂಬೆ'**

ಉತ್ಪತ್ತಿ, ಸ್ಥಿತಿ, ಲಯ ಈ ಮೂರು ಜಗತ್ತಿನ ನಿಯಮ ಇದು ಒಂದು ಪ್ರಕೃತಿಯ ವೈಜ್ಞಾನಿಕ ಚಟುವಟಿಕೆ. ಈ ವೈಜ್ಞಾನಿಕ ಸತ್ಯತನವನ್ನು ಈಗಲೂ ಯಾವ ವಿಜ್ಞಾನಿಗೂ ಸಂಪೂರ್ಣವಾಗಿ ಕಂಡು ಹಿಡಿಯಲಿಕ್ಕೆ ಆಗಿಲ್ಲ. ಇದನ್ನು ಕಂಡು ಹಿಡಿಯುವಂತಹ ಜ್ಞಾನಿ ಅಥವಾ ವಿಜ್ಞಾನಿ ಇನ್ನೂ ಬರಬೇಕಾಗಿದೆ. ಅನುಭಾವದ ಉತ್ತುಂಗ ಶಿಖರವೇರಿದ ಅನುಭಾವಿ ಶರಣರು ನಿಜವಾಗಿಯೂ ವಿಜ್ಞಾನಿಗಳು. ಅವರು ತಮ್ಮ ಅನುಭವದ ಮುಖಾಂತರ ಕಂಡುಕೊಂಡ ಸತ್ಯವನ್ನು ಪ್ರತಿಪಾದಿಸಿದವರು, ಆ ಸತ್ಯವೇ ವಿಜ್ಞಾನ. ಈ ವೈಜ್ಞಾನಿಕತೆಯನ್ನೇ ಲಿಂಗ ಎಂದು ನಮ್ಮ ಚನ್ನಬಸವಣ್ಣನವರು ತಮ್ಮ ವಚನಗಳಲ್ಲಿ ಹೇಳಿದ್ದಾರೆ. ಇದೇ ಮಾದರಿಯ ಚಿಂತನೆ ನಮ್ಮ ಉರಿಲಿಂಗ ಪೆದ್ದಿಯದು ಸಹ ಆಗಿದೆ.

**ಲಿಂಗವೆಂಬುದು ಪರಶಕ್ತಿಯುಕ್ತ**
**ಲಿಂಗವೆಂಬುದು ಪರಶಿವನ ನಿಜದೇಹ**
**ಲಿಂಗವೆಂಬುದು ಪರಶಿವನ ಘನತೇಜ**
**ಲಿಂಗವೆಂಬುದು ಪರಶಿವನ ನಿರತಿಶಯಾನಂದಸುಖ**
**ಲಿಂಗವೆಂಬುದು ಪರಶಿವನ ಪರಮಜ್ಞಾನ**
**ಲಿಂಗವೆಂಬುದು ಪರಶಿವನು ತಾನು**
**ಲಿಂಗವೆಂಬುದು ಷಡದ್ವಮಯ ಜಗಜ್ಜನ್ಮಭೂಮಿ ತಾನು**
**ಲಿಂಗವೆಂಬುದು ಅಖಂಡಿತ ಅಭೇದ್ಯ ಪಂಚಸಂಜ್ಞಿತಾನು**
**ಲಿಂಗವೆಂಬುದು ಹರಿಬ್ರಹ್ಮರ ನಡುವೆ ನೆಗಳ್ದ**
**ಜ್ಯೋತಿರ್ಮಯಲಿಂಗ ಶ್ರುತಿ ಉರಿಲಿಂಗ ಪೆದ್ದಿಪ್ರಿಯ**
**ವಿಶ್ವೇಶ್ವರ ಲಿಂಗದೋ ತಿಳಿಯಬಲ್ಲಾತನೇ ಬಲ್ಲವನು**

ಎಂದಿರುವ ಪರಿಯನ್ನು ಅರಿತಾಗ ಜ್ಞಾನ ವಿಜ್ಞಾನವಾಗಿ ಹೊರಹೊಮ್ಮುತ್ತದೆ. ಹೀಗೆ ಶರಣರ ಲಿಂಗ ತತ್ತ್ವವು ಸೂಕ್ಷ್ಮವಾದ ವೈಜ್ಞಾನಿಕ ಪ್ರತಿಪಾದನೆಯಾಗಿದೆ. ಇದರಲ್ಲಿ ಸತ್ಯ ಮಹತ್ವವ, ಮೌಲ್ಯವಿದೆ ಎನ್ನುವು ವೈಜ್ಞಾನಿಕತೆಯನ್ನು ನಾವು ಅರಿಯಬೇಕಾಗಿದೆ.

■■

**ತಾ ನಡೆವಡೆ ನಡೆಗೆಟ್ಟ ನಡೆಯ ನಡೆಯಬೇಕು**
**ತಾ ನುಡಿವಡೆ ನುಡಿಗೆಟ್ಟ ನುಡಿಯ ನುಡಿಯಬೇಕು**
**ರೂಹಿಲ್ಲದ ಸಂಗವ ಮಾಡಬೇಕು**
**ಭವವಿಲ್ಲದ ಭಕ್ತಿಯ ಮಾಡಬೇಕು**
**ತಾನಾವನೆಂದರಿಯದಂತಿಹುದು ಗುಹೇಶ್ವರಾ.**

**–ಅಲ್ಲಮಪ್ರಭು**

ಅಹಂಕಾರ–ಅಭಿಮಾನಗಳಲ್ಲಿದ (ನಡೆಗೆಟ್ಟ) ನಡೆಯನ್ನು ನಡೆಯುವವರು, ಕುಲಛಲ ಮುಂತಾದ ಮದಗಳಿಂದ ಮುಕ್ತವಾದ (ನುಡಿಗೆಟ್ಟ) ನುಡಿಯನ್ನು ನುಡಿಯುವವರು, ಸ್ವಾರ್ಥರಹಿತ ಭಾವದಿಂದ ಸಂಗಸುಖದೊಳಿರುವವರು, ನಿಷ್ಕಾಮ (ಭವವಿಲ್ಲದ) ಭಾವದಿಂದ ಭಕ್ತಿಯನ್ನು ಮಾಡುವವರು ಶರಣರು. ಅವರು ಪರಶಿವನಲ್ಲಿ ಲೀನವಾದವರು. ಈ ಲಿಂಗಾಂಗ ಸಾಮರಸ್ಯದಿಂದಾಗಿ ತಾನು ಯಾರು ಎಂಬುದನ್ನೆ ಹೇಳಿಕೊಳ್ಳಲಾಗದ ಅವಸ್ಥೆಯನ್ನು ಹೊಂದಿದವರು ಎಂಬ ಭಾವ.

# ತ್ಯಾಗ ಜೀವಿ ಕಲ್ಯಾಣಮ್ಮ

● ಶ್ರೀ ಶ್ರೀಧರ ಗೌಡರ

೧೨ನೇ ಶತಮಾನ ಕ್ರಾಂತಿ, ಶಾಂತಿ, ಸಮಾನತೆಯ ಸ್ವಾತಂತ್ರ್ಯ ಚಳುವಳಿಯ ಯುಗವಾಗಿತ್ತು. ವರ್ಗಭೇದ, ವರ್ಣಭೇದ, ಜಾತಿಭೇದ ಎಂಬ ತಾರತಮ್ಯವನ್ನು ಹೊಡೆದೋಡಿಸಿ. ಹುಟ್ಟಿನಿಂದ ಯಾರು ಮೇಲಲ್ಲ–ಕೀಳಲ್ಲ, ಗುಣಶೀಲ ನಡತೆಗಳಿಂದ ವ್ಯಕ್ತಿ ಮೇಲು–ಕೀಳಾಗುತ್ತಾನೆ. ಜಾತಿಗಳು ದೇವನಿರ್ಮಿತವಲ್ಲ, ಜ್ಞಾನ ಕೆಲವರ ಸೊತ್ತಲ್ಲ ಎಂಬ ವಿನೂತನ ವಿಚಾರಗಳನ್ನು ಜಗತ್ತಿಗೆ ಕೊಟ್ಟು ನುಡಿದಂತೆ ನಡೆದ ಶ್ರೇಷ್ಠ ಕಾಯಕ ಜೀವಿಗಳೇ ಹರಳಯ್ಯ, ಕಲ್ಯಾಣಮ್ಮ.

ಜೀವ ಎರಡಾದರು ದೇಹ ಒಂದೇ ಎಂಬಂತೆ ಹರಳಯ್ಯ ಕಲ್ಯಾಣಮ್ಮ ಬದುಕಿದ್ದರು. ಭಕ್ತಿಯ ಸಮರಸಳಾಗಿ, ದಿವ್ಯಶಕ್ತಿಯ ತವನಿಧಿಯಾದ ಕಲ್ಯಾಣಮ್ಮ ದಲಿತ ವರ್ಗಕ್ಕೆ ಸೇರಿದ್ದಳು. ಚಮ್ಮಾವುಗೆ ಪ್ರಸಂಗ ಬಂದಾಗ ಪತಿಗೆ ತನ್ನ ಉನ್ನತವಾದ ಸಲಹೆ ಹೇಳಿ ಜಗತ್ತಿನಲ್ಲಿ ವಿನೂತನ ಕ್ರಾಂತಿಗೆ ಹೊಸ ರೂಪ ಕೊಟ್ಟ ಕೀರ್ತಿ ಕಲ್ಯಾಣಮ್ಮಗೆ ಸಲ್ಲುತ್ತದೆ.

ಕಲ್ಯಾಣಮ್ಮನ ಜೀವನದ ಹಲವು ಘಟನಾವಳಿಗಳನ್ನು ಜನಪದರು ಹಂತಿ ಹಾಡು, ಚನ್ನಬಸವ ಕವಿಯ ಚನ್ನಬಸವ ಪುರಾಣ, ಡಾ.ಫ.ಗು.ಹಳಕಟ್ಟಿಯವರ ಬಸವೇಶ್ವರ ಷಟ್‌ಸ್ಥಲ ವಚನ ಕಥಾಸಾಗರ, ಶಂಕರ ಕವಿಯ ಚೋರಬಸವ ಚರಿತ್ರೆ, ಬಸವಲಿಂಗದೇವರ ಕಥಾಸಾಗರ ಮುಂತಾದ ಕೃತಿಗಳಲ್ಲಿ ಕಾಣುತ್ತೇವೆ.

ಚಪ್ಪಲಿ ತಯಾರಿಸುವ ಸಮಗಾರ ಹರಳಯ್ಯನ ಮನೆಯಲ್ಲಿ ಬಸವಣ್ಣ ಪ್ರಸಾದ ಸ್ವೀಕರಿಸಿ ಹೊರಡುವಾಗ ಹರಳಯ್ಯ ಶರಣು ಎಂದು ವಂದಿಸುತ್ತಾನೆ. ಇದಕ್ಕೆ ಪ್ರತಿಯಾಗಿ ಬಸವಣ್ಣನವರು ತಲೆಬಾಗಿ ಶರಣು ಶರಣಾರ್ಥಿ ಎಂದು ಎರಡು ಬಾರಿ ವಂದಿಸುತ್ತಾರೆ. ಇದನ್ನು ಕೇಳಿ ಸ್ತಂಭೀಭೂತರಾದ ಹರಳಯ್ಯ ನಿಂತಲ್ಲಿಯೇ ನಿಂತರು. ಬಸವಣ್ಣನವರು ತಮ್ಮ ಮೇಲೆ ಹೆಚ್ಚಿನ ಶರಣು ಹೊರೆ ಹೊರೆಸಿದ್ದನ್ನು ಪತ್ನಿಗೆ ವಿವರಿಸಿದರು.

ಪತಿಯ ಮಾನಸಿಕ ಚಿಂತೆಯನ್ನು ಕಂಡ ಪತ್ನಿ ಕಲ್ಯಾಣಮ್ಮ ಒಂದು ಉಪಾಯ ಹೇಳುತ್ತಾಳೆ, ತಮ್ಮ ತೊಡೆಯ ಚರ್ಮದಿಂದ ಚಮ್ಮಾವುಗೆಯ ಮಾಡಿ ಬಸವಣ್ಣನವರಿಗೆ ಅರ್ಪಿಸುವುದೇ ಇದಕ್ಕೆ ಪರಿಹಾರ ಎಂದಾಗ ತಕ್ಷಣವೇ ಒಪ್ಪಿದ ಹರಳಯ್ಯ ಹಲವು ದಿನಗಳ ಕಾಲ ಹಗಲು ಇರಳು ಶ್ರಮಿಸಿ ತನ್ನ ಹಾಗೂ ಪತ್ನಿಯ ಚರ್ಮವನ್ನು ತೆಗೆದು ಸುಂದರವಾದ ಒಂದು ಜೊತೆ ಪಾದರಕ್ಷೆಯನ್ನು ತಯಾರು ಮಾಡಿ, ಅವುಗಳನ್ನು ಶ್ವೇತವಸ್ತ್ರದಲ್ಲಿ ಸುತ್ತಿ, ಎದೆಗವಚಿಕೊಂಡು ಆಸ್ಥಾನಕ್ಕೆ ತೆರಳಿ ಬಸವಣ್ಣನವರಿಗೆ ಕೊಟ್ಟು, ಇವುಗಳನ್ನು ಧರಿಸಿ ತಾವು ಈ ಧರೆಯ ಮೇಲೆ ಓಡಾಡಿದರೆ ನನ್ನ ಜನ್ಮ ಸಾರ್ಥಕ ಎಂದು ಹರಳಯ್ಯ ದಂಪತಿಗಳು ಬಸವಣ್ಣನವರಲ್ಲಿ ಬಿನ್ನವಿಸಿಕೊಳ್ಳುತ್ತಾರೆ.

ಹರಳಯ್ಯನ ಪ್ರೀತಿ ಕಂಡು ಅಚ್ಚರಿಗೊಳಗಾದ ಬಸವಣ್ಣನವರು ಈ ಪಾದುಕೆಗಳನ್ನು ಕಾಲಲ್ಲಿ ಧರಿಸುವಷ್ಟು ಯೋಗ್ಯ ನಾನಲ್ಲ, ಶರಣರ ಚರ್ಮದಿಂದ ಮಾಡಿದ ಚಮ್ಮಾವುಗೆಗಳು ದೇವರಿಗೆ ಮಾತ್ರ ಮೀಸಲು ಎಂದು ತಿಳಿಸಿ ಅವುಗಳನ್ನು ತನ್ನ ಶಿರದ ಮೇಲೆ ಹೊತ್ತುಕೊಂಡು ಮರಳಿ ಕೊಡುತ್ತಾರೆ. ಈ ಸಂದರ್ಭ ಬಸವಣ್ಣನ ವಚನದಲ್ಲಿ ವ್ಯಕ್ತವಾಗಿದೆ.

**ನಿಮ್ಮ ಶರಣರ ಚಮ್ಮಾವುಗೆಗೆ ಪೃಥ್ವಿ ಸಮ ಬಾರದು**
**ಸರಿಯಲ್ಲ ನೋಡಾ.**
**ಕೂಡಲಸಂಗಮದೇವಾ,**
**ನಿಮ್ಮ ಶರಣರ ಚಮ್ಮಾವುಗೆಗೆ**

ಚಮ್ಮಾವುಗೆ ಪ್ರಸಂಗವನ್ನು ಜನಪದ ಕವಿಯೊಬ್ಬ ಹೃದಯಸ್ಪರ್ಶಿಯಾಗಿ ತ್ರಿಪದಿಯಲ್ಲಿ ಕಟ್ಟಿ ಹಾಡಿದ್ದಾನೆ.

**ಮರುದಿನವೆ ಹರಳಯ್ಯ ಕೊರೆದ ಬಲದೊಡಿ ಚರ್ಮ**
**ಹರನೆಂದು ಮಡದಿಯೆಡದೊಡೆಯ. ತಾ ಕೊಯ್ದು**
**ಭರದಿ ಹದಮಾಡಿ ಒಣಗಿಸಿದ**

ಹರಳಯ್ಯ ಚಮ್ಮಾವುಗೆಗಳನ್ನು ಮನೆಗೆ ತೆಗೆದುಕೊಂಡು ಹೋಗುವಾಗ ಬ್ರಾಹ್ಮಣರಾದ ಮಧುವರಸರು ಎದುರಾಗಿ ಸುಂದರವಾದ ಚಮ್ಮಾವುಗೆ ನೋಡಿ ಕೇಳಿದ,

ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ ಕೂಡಲಸಂಗಮ –೫೮೭೧೧೫, ತಾ.ಹುನಗುಂದ ಜಿ.ಬಾಗಲಕೋಟ ಮೊ–೯೪೮೦೨೨೬೩೭೨

ಕೊಡದಿದ್ದಾಗ ಅವುಗಳನ್ನು ಕಸಿದುಕೊಂಡು ಧರಿಸಿಕೊಳ್ಳಲು ಪ್ರಯತ್ನಿಸಿದಾಗ ಮೈಯಲ್ಲಾ ಉರಿ ಪ್ರಾರಂಭವಾಯಿತು. ಹರಳಯ್ಯನ ಮನೆಯ ಚರ್ಮ ತೊಳೆದ ನೀರಿನಿಂದ ಸ್ನಾನ ಮಾಡಿದಾಗ ಮೈ ಉರಿ ಕಡಿಮೆಯಾಯಿತು. ಈ ಘಟನೆಯಿಂದ ಶರಣರ ಮಹತ್ವವನ್ನು ಅರಿತ ಮಧುವರಸರು ಇಷ್ಟಲಿಂಗ ದೀಕ್ಷೆ ಪಡೆದು ಶರಣರಾದರು.

ಮಧುವರಸ ತನ್ನ ಮಗಳು ನೀಲಮ್ಮನನ್ನು ಹರಳಯ್ಯನ ಮಗನಾದ ಶೀಲವಂತನಿಗೆ ಕೊಟ್ಟು ಮದುವೆ ಮಾಡಿಸಿ ಸಂಬಂಧ ಬೆಳಸಲು ನಿರ್ಧರಿಸಿ ಹರಳಯ್ಯನಲ್ಲಿಗೆ ಬಂದು ತನ್ನ ಬಯಕೆಯನ್ನು ತಿಳಿಸುತ್ತಾನೆ. ಅದಕ್ಕೆ ಹರಳಯ್ಯ ಒಪ್ಪಿ ಶರಣರೆಲ್ಲರೂ ಒಂದಾಗಿ ಬಸವಣ್ಣನ ನೇತೃತ್ವದಲ್ಲಿ ವಿವಾಹ ನಡೆದುಹೋಯಿತು.

ಮನುವಾದಿಗಳು ರೊಚ್ಚಿಗೆದರು. ಸಮಗಾರ ವರನಿಗೆ ಬ್ರಾಹ್ಮಣ ಕನ್ಯೆಯನ್ನು ಕೊಡುವುದು ಧರ್ಮಬಾಹಿರವಾದ ವಿಲೋಮ ವಿವಾಹ ಎಂದು ಕಲ್ಯಾಣದ ದೊರೆ ಬಿಜ್ಜಳನಿಗೆ ಕಿವಿ ಚುಚ್ಚಿದರು. ಬಿಜ್ಜಳ ಬಸವಣ್ಣನವರಿಗೆ ಗಡಿಪಾರು ಶಿಕ್ಷೆಯನ್ನು ವಿಧಿಸಿ ಕಲ್ಯಾಣವನ್ನು ಬಿಟ್ಟು ಹೊರಡಲು ಆಜ್ಞಾಪಿಸಿದರು.

ವರ್ಣಸಂಕರ ವಿವಾಹ ಮಾಡಿದರೆಂದು ಹರಳಯ್ಯ–ಶೀಲವಂತ–ಮಧುವರಸರಿಗೆ ಎಳೆಹೊಟೆ ಶಿಕ್ಷೆ ಆಯಿತು. ಇದನ್ನು ಕಂಡ ಶರಣರು ಕಲ್ಯಾಣ ತೊರೆಯವರು. ಇಂಥ ಸಂದರ್ಭದಲ್ಲಿಯೂ ಕಲ್ಯಾಣಮ್ಮ ಎದೆಗುಂದದೆ ಮರಣವೆ ಮಹಾನವಮಿ ಎಂದುಕೊಂಡು ವಚನಗಳನ್ನು ಉಳಿಸುವ ಕಾರ್ಯದಲ್ಲಿ ಭಾಗಿಯಾಗಿ ತನ್ನ ಸೊಸೆಯೊಂದಿಗೆ ಅಕ್ಕನಾಗಮ್ಮ, ಚನ್ನಬಸವಣ್ಣ ಮೊದಲಾದ ಶರಣರೊಂದಿಗೆ ಉಳವಿಯ ಕಡೆ ಪ್ರಯಾಣ ಬೆಳಸಿ, ಉಳವಿ ಸಮೀಪದಲ್ಲಿ ಲಿಂಗೈಕ್ಯಳಾಗುತ್ತಾಳೆ. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ತಿಗಡಿ ಗ್ರಾಮದಲ್ಲಿ ಕಲ್ಯಾಣಮ್ಮ ಅವರ ಸಮಾಧಿ ಇದೆ.

ಕಲ್ಯಾಣಮ್ಮ ಹಾಗೂ ಹರಳಯ್ಯನವರ ವಚನಗಳು ಸಿಕ್ಕಿಲ್ಲ ಆದರೆ ಅವರು ಬಸವಣ್ಣನವರಿಗೆ ಕೊಟ್ಟ ಕಲಾತ್ಮಕ ಚಮ್ಮಾವುಗೆಗಳು ಕಲಬುರ್ಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಬಿಜನಳ್ಳಿ ಗ್ರಾಮದಲ್ಲಿ ಇವೆ.

ಕಲ್ಯಾಣದ ಕ್ರಾಂತಿಯಾದಾಗ ಶರಣರು ಹಲವು ಕಡೆ ಸಂಚರಿಸುತ್ತಾರೆ. ಅದರಲ್ಲೋರ್ವ ಶರಣರ ಪಾದುಕೆಗಳನ್ನು ಕಾಗಿಣಾ ನದಿ ದಾಟಿ, ಬಿಜನಳ್ಳಿ ಎಂಬ ಗ್ರಾಮದಲ್ಲಿ ಭದ್ರವಾಗಿಡಿ ಎಂದು ಹೇಳಿ ಸಂಚರಿಸಿದನಂತೆ. ಅಂದಿನಿಂದ ಇಂದಿನವರೆಗೂ ಬಿಜನಳ್ಳಿ ಗ್ರಾಮದಲ್ಲಿ ನೋಡಲು ನಮಗೆ ಚಮ್ಮಾವುಗೆಗಳು ಇವೆ. ಬಸವಣ್ಣನವರು ಸ್ಪರ್ಶಿಸಿದ ಇನ್ನೊಂದು ಚರವಸ್ತು ಈ ಜಗತ್ತಿನಲ್ಲಿ ಉಳಿದಿಲ್ಲವಾದ ಕಾರಣ ಈ ಚಮ್ಮಾವುಗೆಗಳು ಅಮೂಲ್ಯವಾಗಿವೆ. ಕಲ್ಯಾಣಮ್ಮ ಹರಳಯ್ಯನವರ ಅನುಪಮ ತ್ಯಾಗದ ಚರ್ಮದ ತುಕಡಿಗಳಿಗೆ ಇಡೀ ಮಾನವಕುಲ ತಲೆಬಾಗಿದೆ.

■■

## ಶರಣರು ಕಂಡ ದೇವರು

ಹನ್ನೆರಡನೆಯ ಶತಮಾನದ ಬಸವಾದಿ ಶಿವಶರಣರು ಕನ್ನಡ ನಾಡು ಕಂಡ ಅಪೂರ್ವ ಸ್ವಾನುಭಾವಿಗಳು. ತಮ್ಮ ನಡೆ–ನುಡಿ ಮತ್ತು ಮಾನವೀಯ ಅನುಕಂಪೆಯಿಂದಾಗಿ ಜನಸಾಮಾನ್ಯರಲ್ಲಿ, ಅದರಲ್ಲೂ ನಿಮ್ನ ವರ್ಗದ ಜನರ ಮೇಲೆ ಅದ್ಭುತ ಪ್ರಭಾವ ಬೀರಿದ್ದರು. ಸಮಾಜದಲ್ಲಿ ರೂಢಿಗತವಾಗಿ ಬಂದಿದ್ದ ಅಂಧಶ್ರದ್ಧೆ ಮತ್ತು ಬಾಹ್ಯಾಡಂಬರಗಳನ್ನು ನಿವಾರಿಸಿ ಜನರಲ್ಲಿ ನಯ–ವಿನಯ, ಭಕ್ತಿ–ಶ್ರದ್ಧೆ, ಸಚ್ಚಾರಿತ್ರ್ಯ ಮತ್ತು ಮಾನವೀಯ ಪ್ರೇಮಗಳನ್ನು ಬಿಂಬಿಸುವ ಪ್ರಯತ್ನ ಮಾಡಿದರು. ಮನುಷ್ಯ–ಮನುಷ್ಯರ ಮಧ್ಯದಲ್ಲಿದ್ದ ಜಾತಿ, ವರ್ಣ, ವರ್ಗ ಮತ್ತು ಸಂಪ್ರದಾಯಗಳ ಗೋಡೆಯನ್ನು ಕೆಡವಿ ಸಮಾನತೆಯ ಹರಿಕಾರರೆನಿಸಿದರು. ದೈವ–ದೈವ ಎಂದು ಕಾಲಿಡಲಿಂಬಿಲ್ಲದ ಕಾಲದಲ್ಲಿ ಎಲ್ಲದಕ್ಕೂ ಕಾರಣಕರ್ತನಾಗಿರುವ ದೇವರು ಒಬ್ಬನೇ ಇರುವನೆಂಬುದನ್ನು ಸಾರಿ ಸಾರಿ ಹೇಳಿದರು.

ಸಮಾಜ ಮತ್ತು ಧರ್ಮಗಳ ಸುಧಾರಕರೆನಿಸಿದ್ದ ಈ ಶಿವಶರಣರು ಜನರಲ್ಲಿ ಭಕ್ತಿಯ ಪ್ರವಾಹವನ್ನು ಹರಿಸಿದರು. ಜನರು ಆರಾಧಿಸುತ್ತಿದ್ದ ಕ್ಷುದ್ರದೇವತೆಗಳನ್ನು ಖಂಡಿಸಿದರು. ಉದಾತ್ತವಾದುದನ್ನು ಸಾಧಿಸಬೇಕಾದರೆ ದೈವತ್ವದ ಕಲ್ಪನೆಯೂ ಉದಾತ್ತವಾಗಿರಬೇಕೆಂಬುದನ್ನು ಪ್ರತಿಪಾದಿಸಿದರು. ಏಕದೇವೋಪಾಸನೆಯ ಮಹತ್ವವನ್ನು ತಿಳಿದಿದ್ದ ಅವರು ಕ್ಷುದ್ರದೇವತೆಗಳನ್ನು ಹೇಸಿದೈವಗಳೆಂದು ಜರೆದು 'ಹೇಸಿದೈವಂಗಳ ಬೇಡಿ ಬೇಡಿ ನಿರರ್ಥಕ ಕೆಡಬೇಡೆಲವೊ; ಕೂಡಲಸಂಗಮ ದೇವರ ನೆರೆನಂಬುವುದೆಲವೊ' ಎಂಬ ಸಂದೇಶ ಸಾರಿದರು.